ಭಾರತೀಯ ಭಕ್ತಿ ಚಳುವಳಿಗಳು

ಷಣ್ಮುಖಯ್ಯ ಅಕ್ಕೂರಮಠ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ ಚಾಮರಾಜಪೇಟೆ
ಬೆಂಗಳೂರು-೫೬೦೦೧೮

ಭಾರತೀಯ ಭಕ್ತಿ ಚಳುವಳಿಗಳು

ಷಣ್ಮುಖಯ್ಯ ಅಕ್ಕೂರಮಠ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦ ೦೧೮

2

BHARATIYA BHAKTHI CHALUVALIGALU
Written by: Shanmukhayya Akkuramata, Published by: Kannada Sahitya Pzarishat, Pampa Mahakavi Road, Chamarajapet, Bangalore - 560018
Pages : 74+vi ; Price : **20-00,** 2000

ಮೊದಲನೆಯ ಮುದ್ರಣ : ೨೦೦೦

ಬೆಲೆ : ಇಪ್ಪತ್ತು ರೂಪಾಯಿಗಳು

ಪ್ರಕಟಣ ಸಮಿತಿ

ಅಧ್ಯಕ್ಷರು
ಎನ್. ಬಸವಾರಾಧ್ಯ

ಸಂಚಾಲಕರು
ಡಾ. ಸಿ. ವೀರಣ್ಣ

ಸದಸ್ಯರು
ಡಾ. ಕೆ.ವಿ. ಚಂದ್ರಣ್ಣಗೌಡ
ಬಿ.ಎನ್. ಸತ್ಯನಾರಾಯಣರಾವ್
ಅ.ರಾ. ಮಿತ್ರ
ಎಲ್ಲೇಗೌಡ ಬೆಸಗರಹಳ್ಳಿ
ಬಿ.ಆರ್. ಪೋಲೀಸ್ ಪಾಟೀಲ
ಶಾಂತಾದೇವಿ ಮಾಳವಾಡ
೬೮ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೫ ವರ್ಷಗಳ ದೀರ್ಘಕಾಲದ ಇತಿಹಾಸವಿರುವ ಪರಿಷತ್ತು ಅನೇಕ ರೀತಿಗಳಲ್ಲಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ. ಅವುಗಳಲ್ಲಿ ಅತ್ಯುತ್ತಮ ಸಾಹಿತ್ಯ ಕೃತಿಗಳ ಪ್ರಕಟಣೆ ಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡದ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ.

ಪ್ರಸ್ತುತ ಶ್ರೀ ಷಣ್ಮುಖಯ್ಯ ಅಕ್ಕೂರಮಠ ಅವರು ಸಿದ್ಧಪಡಿಸಿರುವ 'ಭಾರತೀಯ ಭಕ್ತಿ ಚಳುವಳಿಗಳು' ಎಂಬ ಈ ಪುಸ್ತಕವು ವಿವಿಧ ಭಕ್ತಿಪಂಥದ ವಿಷಯವನ್ನೊಳಗೊಂಡ, ವೈವಿಧ್ಯಮಯ ಹಾಗೂ ವೈಶಿಷ್ಟ್ಯಪೂರ್ಣವಾದ ಪರಿಚಯಾತ್ಮಕ ಲೇಖನಗಳನ್ನು ಒಳಗೊಂಡಿದೆ. ಸಾಹಿತ್ಯಾಭಿಮಾನಿಗಳು ಈ ಕೃತಿಯನ್ನು ಆದರದಿಂದ ಬರಮಾಡಿ ಕೊಳ್ಳುವರೆಂದು ಆಶಿಸುತ್ತೇನೆ. ಪುಸ್ತಕವನ್ನು ಸಿದ್ಧಪಡಿಸಿದ ಶ್ರೀ ಷಣ್ಮುಖಯ್ಯ ಅಕ್ಕೂರಮಠ ಅವರಿಗೆ ಧನ್ಯವಾದಗಳು. ಪ್ರಕಟಣೆಗೆ ಒಪ್ಪಿಗೆ ನೀಡಿದ ಪ್ರಕಟಣಾ ಸಮಿತಿಗೂ ಮತ್ತು ಮುದ್ರಣ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಧನ್ಯವಾದಗಳು.

ಎನ್. ಬಸವಾರಾಧ್ಯ
ಅಧ್ಯಕ್ಷರು

ಲೇಖಕರ ನುಡಿ

ನನಗೆ ೧೯೯೮ರಲ್ಲಿ ಖ್ಯಾತ ಸಮಾಜ ಶಾಸ್ತ್ರಜ್ಞರ ವಿಚಾರ ಸಂಕಿರಣದ ಗೋಷ್ಠಿಯಲ್ಲಿ 'ಜಾಗತಿಕ ಭಕ್ತಿಪಂಥಗಳಲ್ಲಿ ಸಮಾಜಕಾರ್ಯ' ಎನ್ನುವ ವಿಷಯವನ್ನು ಕುರಿತು ಪ್ರಬಂಧ ಮಂಡಿಸುವ ಅವಕಾಶ ದೊರಕಿತ್ತು. ಅದರ ಪ್ರೇರಣೆಯಿಂದಾಗಿ ಜಾಗತಿಕ ಭಕ್ತಿಪಂಥಗಳನ್ನು ಕುರಿತು ಅಧ್ಯಯನ ಮಾಡುವ ಆಸಕ್ತಿ ಬೆಳೆಯಿತು. ಕಳೆದ ವರ್ಷ ಕನಕಪುರದಲ್ಲಿ ನಡೆದ ಅಖಿಲಭಾರತ ೭೦ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ ಪುಸ್ತಕ 'ಕನಕಸಿರಿಗೆ' 'ಸೂಫಿ ಸಂದೇಶ' ಎನ್ನುವ ಲೇಖನವನ್ನು ಆ ಪುಸ್ತಕದ ಸಂಪಾದಕರ ಅಪೇಕ್ಷೆಯ ಮೇರೆಗೆ ಬರೆದಿದ್ದೆ, ಅದನ್ನ ಓದಿದ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳಾದ ಡಾ. ಸಿ. ವೀರಣ್ಣನವರು, ಒಂದು ದಿನ ಪರಿಷತ್ತಿನಲ್ಲಿ ಕಂಡಾಗ "ನೀವು ಜಾಗತಿಕ ಭಕ್ತಿಪಂಥಗಳನ್ನ ಕುರಿತು ಒಂದು ಪರಿಚಯಾತ್ಮಕ ಲೇಖನವನ್ನು ಬರೆದುಕೊಡಿ, ನಾವು ಪರಿಷತ್ತಿನಿಂದ ಪ್ರಕಟಿಸುತ್ತೇವೆ" ಎಂದು ಆಶ್ವಾಸನೆ ನೀಡಿದರು. ಈ ವಿಷಯವನ್ನು ಅಧ್ಯಕ್ಷರಾದ ಶ್ರೀ ಎನ್. ಬಸವಾರಾಧ್ಯರಿಗೂ ತಿಳಿಸಿದೆ. ಅವರೂ ಸಂತೋಷದಿಂದ ಒಪ್ಪಿಕೊಂಡರು. ನಾನು ಪ್ರಕಟಣೆಗಾಗಿ ಲೇಖನವನ್ನು ಸಿದ್ಧಪಡಿಸಿದೆ. ಇದರ ರಚನೆಗಾಗಿ ಹಲವಾರು ಗ್ರಂಥಗಳ ನೆರವು ಪಡೆದಿದ್ದೇನೆ. ಲೇಖನದ ಕೊನೆಯ ಪುಟದಲ್ಲಿ ಆಕರ ಕೊಟ್ಟಿದ್ದೇನೆ. ಆ ಎಲ್ಲ ಗ್ರಂಥಕರ್ತರನ್ನು ಗೌರವದಿಂದ ನೆನೆಯುತ್ತೇನೆ. ಭಕ್ತಿಪಂಥಗಳ ವಿಷಯ, ವೈವಿಧ್ಯಮಯ ಹಾಗೂ ವೈಶಿಷ್ಟ್ಯ ಪೂರ್ಣವಾಗಿದೆ ಮತ್ತು ಒಂದು ಮಹಾ ಪ್ರಬಂಧ ರಚನೆಗೂ ಮಿಕ್ಕುವಷ್ಟು ವಿಸ್ತಾರವಾಗಿದೆ. ನಾನು ಈ ಕೃತಿಯಲ್ಲಿ ಕಡಲನ್ನ ಕೊಡದಲ್ಲಿ ಹಿಡಿಯುವ ಸಾಹಸ ಮಾಡಿದ್ದೇನೆ. ನನ್ನ ಈ ಕೃತಿ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲಕ ಪ್ರಕಟವಾಗಿರುವುದು ನನಗೆ ಅತ್ಯಂತ ಸಂತೋಷವಾಗಿದೆ. ಪುಸ್ತಕದ ಪ್ರಕಟಣೆಗೆ ಕಾರಣರಾದ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎನ್. ಬಸವಾರಾಧ್ಯರಿಗೆ ನನ್ನ ಅನಂತ ನಮನಗಳು. ಪ್ರಕಟಣೆಗಾಗಿ, ಲೇಖನವನ್ನು ಬರೆದು ಕೊಡಲು ತಿಳಿಸಿ, ಲೇಖನದ ಹಸ್ತಪ್ರತಿಯನ್ನು ಸಮಗ್ರವಾಗಿ ಓದಿ, ಪುಸ್ತಕಕ್ಕೊಂದು ಹೆಸರನ್ನು ಸೂಚಿಸಿ ಪುಸ್ತಕದ ಪ್ರಕಟಣೆಯಲ್ಲಿ ವಿಶೇಷ ಆಸಕ್ತಿ ತೋರಿಸಿದ ಮಿತ್ರರಾದ ಡಾ. ಸಿ. ವೀರಣ್ಣನವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಈ ಕಾರ್ಯದಲ್ಲಿ ನೆರವಾದ ಮಿತ್ರರಾದ ಡಾ. ಚಂದ್ರಣ್ಣ ಗೌಡರನ್ನು ಪ್ರೀತಿಯಿಂದ ನೆನೆಯುತ್ತೇನೆ. ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಹೊರತಂದ ಪರಿಷತ್ತಿನ ಸಿಬ್ಬಂದಿ ವರ್ಗದವರಿಗೆ ನನ್ನ ವಂದನೆಗಳು.

ಷಣ್ಮುಖಯ್ಯ ಅಕ್ಕೂರಮಠ

೭

ಪರಿವಿಡಿ

ಪ್ರಸ್ತಾವನೆ

ನಮ್ಮನ್ನು ನಾವು ತಿಳಿದುಕೊಂಡು ನಡೆಯುವುದು ಅಧ್ಯಾತ್ಮ. ಈ ಜಗತ್ತನ್ನು ಅರ್ಥಮಾಡಿಕೊಂಡು ನಡೆಯುವುದು ವಿಜ್ಞಾನ. ನಮ್ಮ ನೆರೆಹೊರೆಯವರನ್ನು ಅರ್ಥ ಮಾಡಿಕೊಂಡು ಹೊಂದಿಕೊಂಡು ಬಾಳುವುದೇ ಧರ್ಮ ಎಂದು ಪ್ರಾಜ್ಞರ ಅಭಿಪ್ರಾಯ. ಧರ್ಮ ಒಂದು ಜೀವನ ಪದ್ಧತಿ. ಆದರ್ಶ, ನಡವಳಿಕೆ ವ್ಯಕ್ತಿ-ಸಮಾಜವನ್ನು, ದೈವವನ್ನೂ ಕುರಿತ ದೃಷ್ಟಿಕೋನ. ನಮ್ಮ ಪ್ರಾಚೀನ ಧರ್ಮಸೂತ್ರಗಳು ಧರ್ಮ ಪದಕ್ಕೆ 'ಧಾರಣಾತ್ ಧರ್ಮ ಮಿತ್ಯಾಹು:' ಎಂದು ಹೇಳುತ್ತವೆ. ಧರ್ಮವು ರಕ್ಷಿಸಿದವನನ್ನು ಕಾಪಾಡುತ್ತದೆ. ಬಿದ್ದಿರುವವನನ್ನು, ಬೀಳುವವನನ್ನು, ಉದ್ಧರಿಸುವುದೇ ಧರ್ಮ. ಜನರನ್ನು ಒಂದುಮಾಡಿ ಅವರಲ್ಲಿ ಪರಸ್ಪರ ಸಹಕಾರ, ಒಳಿತಿಗೆ ಪ್ರೇರಣೆ ನೀಡಬಲ್ಲ ಶಕ್ತಿ ಧರ್ಮ. ತನಗೆ ಅಹಿತವಾದುದನ್ನು ಬೇರೆಯವರಿಗೂ ಮಾಡದಿರುವುದು ಧರ್ಮ. ನಮ್ಮ ಬದುಕಿಗೆ ಆಧಾರವಾಗಿ ಒಳಿತಿನತ್ತ ಕೊಂಡೊಯ್ಯುವುದೇ ಧರ್ಮ. ಹೀಗೆ ನಮ್ಮ ಪ್ರಾಚೀನರು ಧರ್ಮಕ್ಕೆ ಆಧಾರವಾದ ಹಾಗೂ ಉದಾತ್ತವಾದ ಅರ್ಥವನ್ನು ಹೇಳಿದ್ದಾರೆ.

ಯಾವುದೇ ಧರ್ಮದಲ್ಲಿ ತತ್ತ್ವ ಭಾಗ, ಆಚರಣೆಯ ಭಾಗ, ನೀತಿ ಸಂಹಿತೆ, ಪುರಾಣ-ಕಲ್ಪನೆಗಳಿರುತ್ತವೆ. ಧರ್ಮದ ತಾತ್ತ್ವಿಕ ಭಾಗ ಎಲ್ಲ ಧರ್ಮಗಳಲ್ಲೂ ಒಂದೇ. ಆದರೆ ಆಚರಣೆಯ ವಿಧಾನ ಮಾತ್ರ ಬೇರೆ ಬೇರೆ. ಅಲ್ಲಿಯೇ ನಮ್ಮ ಬಡಿದಾಟಗಳು. ಆಚರಣೆಯ ವಿಧಾನದಲ್ಲಿ ಸಂಪ್ರದಾಯ, ನಂಬಿಕೆ, ಐತಿಹ್ಯಗಳಲ್ಲಿ ನಮ್ಮದು ಸರಿ, ಉಳಿದವರದು ತಪ್ಪು ಎಂದಾಗ ಕಲಹ ಆರಂಭವಾಗುತ್ತದೆ. ವಿಚಾರ ಮಾಡಿ ನೋಡಿದಾಗ ಧರ್ಮ ನಿಜವಾಗಿಯೂ ಬಾಹ್ಯಾಚರಣೆಯಲ್ಲಿಲ್ಲ. ಅದು ಮನುಷ್ಯನ ಹೃದಯದಲ್ಲಿದೆ. ಮನಃ ಕಷಾಯವಳಿದ, ಮತಾಂಧತೆಯಿಲ್ಲದೆ ತಿಳಿಯಾದ ಮನಸ್ಸಿನಲ್ಲಿ ಮಾತ್ರ ಮಾನವೀಯತೆ ಇರುತ್ತದೆ. ಅಲ್ಲಿಯೇ ಧರ್ಮ ನೆಲೆಸಿದೆ. ಜಗತ್ತಿನಲ್ಲಿ ಪ್ರತಿಯೊಬ್ಬರೂ ತಮ್ಮ ಧರ್ಮ ಸರಿ, ಉಳಿದವರ ಧರ್ಮ ತಪ್ಪು ಎಂದು ತಿಳಿದಾಗ ಈ ಲೋಕದಲ್ಲಿ ನಿರಂತರ ಘರ್ಷಣೆಗಳು ಸಾಗುತ್ತವೆ.

ಧರ್ಮದಲ್ಲಿ ಕರ್ಮಕಾಂಡ ಬೆಳೆದು ಆಚಾರ, ಸಂಪ್ರದಾಯಗಳು ಅತಿಯಾದಾಗ ವ್ಯಾಪಾರಕ್ಕೆ ದಾರಿಯಾಗುತ್ತದೆ. ದೇವರು ಮಾರುಕಟ್ಟೆಯ ವಸ್ತುವಾಗುತ್ತಾನೆ. ಆಗ

ಧರ್ಮ ಅಂಗಡಿಯ ಧರ್ಮವಾಗಿ ವ್ಯಾಪಾರಿಗಳ ಮೂಲ ಬಂಡವಾಳವಾಗುತ್ತದೆ. ಬಾಹ್ಯ ಆಚಾರಕ್ಕೆ, ಒಣಸಂಪ್ರದಾಯಗಳಿಗೆ ಬೆಲೆ ಬಂದಾಗ ಧರ್ಮ ಸುಲಿಗೆಯ ಸಾಧನವಾಗುತ್ತದೆ. ಪಟ್ಟಭದ್ರರ ಹಿತಾಸಕ್ತಿ ಆಗುತ್ತದೆ. ಹೆಚ್ಚಾಗಿ ಮನುಷ್ಯನ ಸ್ವಾರ್ಥ, ಸಂಕುಚಿತ, ಅಹಂಕಾರ ಮೊದಲಾದ ದುರ್ಭಾವನೆಗಳಿಂದಲೂ ಧರ್ಮದ ಅವನತಿ ಆಗುತ್ತದೆ. ಹೀಗೆ ಧರ್ಮ ಅವನತಿಯ ಹಾದಿಯನ್ನು ಹಿಡಿದಾಗ ಐತಿಹ್ಯ, ಕಟ್ಟುಕತೆ, ಪುರಾಣ, ಯಜ್ಞಯಾಗ, ಹೋಮ, ಮತಭ್ರಾಂತಿ, ಅನ್ಯಮತ ದ್ವೇಷ ಭಾವನೆಗಳು ಬೆಳೆಯುತ್ತ ಹೋಗುತ್ತವೆ. ಇದನ್ನು ಕಂಡೇ ಮಾರ್ಕ್ಸ್‌ವಾದಿಗಳು 'ಧರ್ಮ ಒಂದು ಅಫೀಮು' ಎಂಬ ತೀರ್ಮಾನಕ್ಕೆ ಬರುತ್ತಾರೆ. ಧರ್ಮ ನೊಂದವರ ದುಃಖದಲ್ಲಿರುವವರ ಕಣ್ಣೀರು ಒರೆಸಲು ಇರುತ್ತದೆ. ಇದು ಚರ್ಚೆಯ ವಿಷಯವಲ್ಲ; ಬರೆ ಉಪದೇಶವೂ ಅಲ್ಲ. ಆಚರಣೆಯೇ ಧರ್ಮ. ಆದಕ್ಕಾಗಿ ಉಪನಿಷತ್ತು, 'ಧರ್ಮಂ ಚರ' ಎಂದು ಹೇಳಿದೆ.

ಇಷ್ಟೆಲ್ಲಾ ಧರ್ಮದ ಬಗ್ಗೆ ಹೇಳಿದರೂ ಧರ್ಮ ಒಂದು ಅಮೂರ್ತ ವಸ್ತು. ಅದರ ಸ್ಫೂರ್ತಿಯಿಂದ ಅನೇಕ ಜನ ಮಹಾಪುರುಷರಾಗಿದ್ದಾರೆ. ತ್ಯಾಗಿಗಳಾಗಿದ್ದಾರೆ, ಋಷಿ ಮುನಿಗಳಾಗಿದ್ದಾರೆ, ಸಂತ ಮಹಾಂತರಾಗಿದ್ದಾರೆ. ಧರ್ಮಕ್ಕಾಗಿ ತಮ್ಮನ್ನೇ ತಾವು ಅರ್ಪಿಸಿಕೊಂಡ ತಪಸ್ವಿಗಳ, ಮಹಾತ್ಮರ ಸಂಖ್ಯೆ ಅಗಣಿತವಾಗಿದೆ. ಆಧುನಿಕ ಕಾಲದಲ್ಲಿಯೇ ರಮಣ, ಅರವಿಂದ, ಗಾಂಧೀಜೀ, ರಾಮಕೃಷ್ಣ ಪರಮಹಂಸ, ದಯಾನಂದ ಸರಸ್ವತೀ, ಸ್ವಾಮಿ ವಿವೇಕಾನಂದ ಮೊದಲಾದವರು ಧರ್ಮ ಮಾರ್ಗದಲ್ಲೆ ನಡೆದು ಲೋಕೋಪಕಾರ ಮಾಡಿದ್ದಾರೆ.

ಧರ್ಮ ಅವನತಿಯತ್ತ ಸಾಗಿದಾಗ, ಅದರ ಪರಿಷ್ಕಾರಕ್ಕಾಗಿ ಭಕ್ತಿ ಚಳುವಳಿಗಳು ಉದಯವಾಗುತ್ತವೆ. ಭಕ್ತಿ ಎಂದರೆ ದೇವರಲ್ಲಿ ಅತಿಶಯವಾದ ಪ್ರೇಮ. ಇದು ಭಕ್ತನಿಗೂ, ಭಗವಂತನಿಗೂ ಇರುವ ಸಂಬಂಧ. 'ಭಜ ಸೇವಾಯಾಂ' ಧಾತುವಿನಿಂದ ಈ ಶಬ್ದದ ಉತ್ಪತ್ತಿ. ಇನ್ನು ಚಳುವಳಿ ಎಂಬ ಮಾತು 'ಚಲನ ವಲನ' ಎಂಬ ಸಂಸ್ಕೃತ ಶಬ್ದದ ತದ್ಭವವಾಗಿದೆ. ಇಂಗ್ಲಿಷಿನಲ್ಲಿ Movements ಎಂಬ ಪದಕ್ಕೆ ಸಮಾನ ಪದವೂ ಆಗಿದೆ. ಭಕ್ತಿ ಚಳುವಳಿ ಒಂದು ನೆಲೆಯಿಂದ ವಿಕಾಸದ ಕಡೆಗೆ ಮುಂದು ವರಿಯುವುದು. ಭಕ್ತಿ ಚಳುವಳಿಯಲ್ಲಿ ಕ್ರಿಯಾಶೀಲತೆ, ಹೊಸ ವಿಚಾರ ಧಾರೆ, ಹೊಸ ಹೊಸ ಪ್ರಯೋಗಗಳು ನಡೆಯುವುದಕ್ಕೇ ಭಕ್ತಿ ಚಳುವಳಿಗಳು ಎಂದು ಕರೆಯುತ್ತೇವೆ.

ಬದುಕಿನ ರಹಸ್ಯದ ಬಗ್ಗೆ ಮಾನವ ಅನಾದಿ ಕಾಲದಿಂದ ಇಂದಿನವರೆಗೂ ವಿಚಾರ ಮಾಡುತ್ತಲೇ ಬಂದಿದ್ದಾನೆ. ತಾನು ವಾಸಿಸುವ ಈ ಜಗತ್ತಿಗೆ ಒಂದು ಕಾರಣ ಹಾಗೂ ಕರ್ತನಿರಬೇಕೆಂದು ತೀರ್ಮಾನಕ್ಕೆ ಬರುತ್ತಾನೆ. ಅವನನ್ನೇ 'ದೇವರು' ಎಂದು

ಕರೆಯುತ್ತಾನೆ. ಈ ಜಗತ್ತು ನಶ್ವರ, ಬದುಕು ಕ್ಷಣಿಕ ಎನ್ನುವುದನ್ನು ತನ್ನ ಅನುಭವದಿಂದ ಕಂಡುಕೊಳ್ಳುತ್ತಾನೆ. ಮತ್ತು ಇಲ್ಲಿಯ ಬದುಕಿನ ಬಗೆಗೆ ಅಷ್ಟೊಂದು ಮೋಹವಿಟ್ಟು ಕೊಳ್ಳುವುದು ತಪ್ಪು, ಸ್ಥಿರವಾಗಿರುವ ಭಗವಂತನನ್ನು ಪೂಜಿಸಿ ಅಂತರಂಗ-ಬಹಿರಂಗ ಶುದ್ಧಿಯಿಂದ ಪರಿಶುದ್ಧ ಮಾನವನಾಗಿ ಬಾಳಿ ದೇವರ ಕೃಪೆಗೆ ಪಾತ್ರನಾಗಿ ಇಹಜೀವನದಲ್ಲಿ ಸಾರ್ಥಕತೆ, ಪರದಲ್ಲಿ ಮೋಕ್ಷವನ್ನು ಪಡೆಯಬೇಕೆನ್ನುವ ಧ್ಯೇಯ ನಮ್ಮ ಹಿರಿಯರ ಜೀವನದ ಮೌಲ್ಯ ವಾಗಿರಬೇಕು. ಇಂತಹ ಒಂದು ಪ್ರೇರಣೆಯೇ ಭಕ್ತಿಯ ಉಗಮಕ್ಕೆ ಕಾರಣವಾಗಿದೆ.

ಜಗತ್ತಿನಲ್ಲಿ ಎಲ್ಲ ಕಾಲದಲ್ಲಿ ಎಲ್ಲ ದೇಶಗಳಲ್ಲಿ ಭಕ್ತರು ಆಗಿಹೋಗಿದ್ದಾರೆ. ಭಕ್ತಿಮಾರ್ಗ ನೇರ ಹಾಗೂ ಸರಳವಾದದ್ದು. ಸರ್ವರೂ ಅವಲಂಬಿಸಿ ಆಚರಿಸಲು ಸುಲಭ ಮಾರ್ಗ. ದೇವರು ತೀವ್ರ ಒಲಿಯು ವಂಥದು ಈ ಮಾರ್ಗದಲ್ಲಿ. ಕರ್ಮ ಕಾಂಡದ ವಿಧಿ ನಿಯಮಗಳಿಲ್ಲ, ಜಾತಿ, ಮತ, ಪಂಥಗಳ ಕಡಿವಾಣವಿಲ್ಲ, ಉಚ್ಛ, ನೀಚಗಳ ತಾರತಮ್ಯವಿಲ್ಲ, ಭಾಷೆಯ ಗೊಂದಲವಿಲ್ಲ. ಚಿತ್ತಶುದ್ಧಿಯಿಂದ ಭಗವಂತನನ್ನು ಉಪಾಸನೆ ಮಾಡುವುದು, ಪ್ರೀತಿಸುವುದು, ಭಕ್ತನ ಕರ್ತವ್ಯವಾಗುತ್ತದೆ.

ಕಾಲಕಾಲಕ್ಕೆ ಭಕ್ತರ ಸಮೂಹ ಅಥವಾ ಸಮುದಾಯ, ಧಾರ್ಮಿಕ ಅಂಧಶ್ರದ್ಧೆ, ಮೂಢನಂಬಿಕೆ, ಕಂದಾಚಾರ ಪದ್ಧತಿಗಳನ್ನು ತೊಡೆದುಹಾಕಿ ಸಮಾಜದಲ್ಲಿ ಪರಿವರ್ತನೆಯನ್ನು ತರಲು ಪ್ರಯತ್ನ ಮಾಡುತ್ತದೆ. ಸಮಾಜದ ಕಲ್ಯಾಣಕ್ಕಾಗಿ ಇಂತಹ ಸಾಮೂಹಿಕ ಹೋರಾಟ ಗಳನ್ನು ಭಕ್ತಿ ಚಳುವಳಿಗಳು ಎಂದು ಕರೆಯುತ್ತೇವೆ. ಯಾವುದೇ ಒಂದು ಚಳುವಳಿಯ ಹಿಂದೆ ಒಂದು ಉದ್ದೇಶವಿರುತ್ತದೆ. ಸಮಾಜದಲ್ಲಿ ಬದಲಾವಣೆಯನ್ನು ತರಲು ಅದಕ್ಕಾಗಿ ಹೋರಾಟ ಮಾಡಲು ಕೆಲವರು ನಾಯಕರಾಗುತ್ತಾರೆ. ಮತ್ತೆ ಹಲವರು ಅನುಯಾಯಿಗಳು ಇರುತ್ತಾರೆ. ಚಳುವಳಿಯನ್ನು ನಡೆಸಲು ಒಂದು ಸಂಘಟನೆ ಬೇಕಾಗುತ್ತದೆ. ಚಳುವಳಿಗಳು ಕ್ರಾಂತಿಯಿಂದಲೂ ಆರಂಭವಾಗಬಹುದು, ಶಾಂತಿಯಿಂದಲೂ ಆರಂಭ ವಾಗಬಹುದು.

ಭಕ್ತಿ ಚಳುವಳಿಗಳು ಜನಜೀವನದ ರೂಢಮೂಲ ಪದ್ಧತಿಗಳನ್ನು ಪರಿಷ್ಕರಿಸುವ, ಸಮಾಜವನ್ನು ಚಲನಶೀಲವಾಗಿಸುವ ಸಂಕೇತಗಳು ಆಗುತ್ತವೆ. ಮತ್ತು ಸಾಮಾಜಿಕ ಪರಿವರ್ತನೆಯ ವಿವಿಧ ಕಾಳಜಿಗಳನ್ನು ಪ್ರತಿಬಿಂಬಿಸುತ್ತವೆ. ಒಂದು ಅರ್ಥದಲ್ಲಿ ಇವು ಪ್ರತಿಭಟನಾ ಚಳುವಳಿಗಳು. ಸಂಸ್ಕೃತಿಯ ಮೂಲ ಅಂಶಗಳನ್ನು ಪ್ರಶ್ನಿಸುವ ತಿರಸ್ಕರಿಸುವ ಪ್ರವೃತ್ತಿಯನ್ನು ಭಕ್ತಿ ಚಳುವಳಿಗಳಲ್ಲಿ ಕಾಣುತ್ತೇವೆ. ಭಕ್ತಿ ಚಳುವಳಿಗಳು ಸಾಮಾಜಿಕ ಶಾಂತಿಗೆ, ಸಾರ್ವಜನಿಕ ನೆಮ್ಮದಿಗೆ ಭಂಗ ತರುತ್ತವೆ. ಅವು ಅಸ್ವಸ್ಥ ಸಮಾಜದ ಲಕ್ಷಣಗಳು ಎನ್ನುವವರೂ ಇದ್ದಾರೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಭಕ್ತಿ ಚಳುವಳಿಗಳು ಮೊದ ಮೊದಲು ಸಮಾಜದ ಸುಧಾರಣೆಯ ಕಾರ್ಯ ವೆಂದು ಆರಂಭವಾಗಲಿಲ್ಲವೆಂದು

ತೋರುತ್ತದೆ. ಆದರೂ ಪರೋಕ್ಷವಾಗಿ ಅವುಗಳಿಂದ ಸಮಾಜ ಸುಧಾರಣೆ ಆಯಿತು ಎನ್ನುವುದಕ್ಕೆ ಭಕ್ತಿ ಚಳುವಳಿಗಳ ಇತಿಹಾಸವೇ ಸಾಕ್ಷಿಯಾಗಿದೆ. ಮೊದಲು ಭಕ್ತಿ ಚಳುವಳಿಗಳು ಮನುಷ್ಯ ದೈವದಲ್ಲಿ ನಿಷ್ಠೆಯಿರಿಸಿ ಸಂಸಾರದಿಂದ ಮುಕ್ತಿ ಪಡೆಯಬೇಕು, ನೀತಿ ನಿಯಮಗಳ ಶುದ್ಧ ಜೀವನ ನಡೆಸಬೇಕು, ಪರಿಶುದ್ಧ ಜೀವನ ನಡೆಸದವನು ದೈವಾನುಗ್ರಹಕ್ಕೆ ಮುಕ್ತಿಗೆ ಅರ್ಹನಲ್ಲ ಎನ್ನುವ ಭಾವನೆ, ಶ್ರದ್ಧೆಯಿಂದಲೇ ಆರಂಭವಾದವು.

ಬೌದ್ಧ, ಜೈನ ಧರ್ಮಗಳು ಕ್ರಿ. ಪೂ. ಆರನೆಯ ಶತಮಾನದಲ್ಲಿ ಉದಯಿಸಿದವು. ಭಕ್ತಿ ಚಳುವಳಿಗಳ ಇತಿಹಾಸ ಅಷ್ಟೆ ಹಿಂದಕ್ಕೆ ಹೋಗುತ್ತದೆ. ಬೌದ್ಧ-ಜೈನ ಧರ್ಮಗಳು ಬ್ರಾಹ್ಮಣೀಯ ಯಾಜಮಾನ್ಯವನ್ನು ತಿರಸ್ಕರಿಸಿದವು. ಯಜ್ಞ ಯಾಗಾದಿಗಳನ್ನು ವಿರೋಧಿಸಿದವು. ಮಹಿಳೆಯರಿಗಾಗಿ ಮಠವು ಸ್ಥಾಪಿತವಾದವು. ಈ ಹೊತ್ತು ನಾವು ಆಲೋಚಿಸಿದಾಗ, ಆ ಕಾಲಕ್ಕೇ ಈ ಕ್ರಮ ನಿಜವಾಗಿಯೂ ವಿನೂತ ವಾಗಿತ್ತು; ಕ್ರಾಂತಿಕಾರಕವಾಗಿತ್ತು. ಪಟ್ಟಭದ್ರ ಸಂಸ್ಕೃತಿಯ ವಿರುದ್ಧವಾಗಿ ತಳೆದ ನಿಲುವಾಗಿತ್ತು. ಈ ಎರಡೂ ಧರ್ಮಗಳೂ ವ್ಯವಹಾರಕ್ಕೆ ಸಂಸ್ಕೃತ ವನ್ನು ಬಳಸಲಿಲ್ಲ. ಬೌದ್ಧ ಧರ್ಮ ಪಾಲಿ ಭಾಷೆಯನ್ನೂ, ಜೈನಧರ್ಮ ಅರ್ಧಮಾಗಧಿಯನ್ನು ಬೆಳೆಸಿದವು. ಸಂಸ್ಕೃತ ಗ್ರಂಥಸ್ಥ ಭಾಷೆಯಾಗಿತ್ತು. ಪಾಲಿ, ಅರ್ಧಮಾಗಧಿಗಳು ಜನಸಾಮಾನ್ಯರ ಆಡುನುಡಿಗಳಾಗಿದ್ದವು. ಇದು ನಾವು ಗಮನಿಸಬೇಕಾದ ಅಂಶವಾಗಿದೆ. ದೇವರಲ್ಲಿ ಅಚಲ ನಿಷ್ಠೆ ಸಾಕು, ಸದಾಚರಣೆ ಸಾಕು. ಮುಕ್ತಿ ದೊರಕುತ್ತದೆ ಎನ್ನುವುದನ್ನು ಭಕ್ತಿ ಮಾರ್ಗ ಹೆಚ್ಚು ಪ್ರಚಾರಗೊಳಿಸಿತು.

ಜನಸಮೂಹವನ್ನು ನೀತಿಮಾರ್ಗದತ್ತ ಕೊಂಡೊಯ್ಯಿತು. ಜಾತಿ, ವರ್ಗ, ಲಿಂಗಗಳನ್ನು ಪರಿಗಣಿಸದೆ ವ್ಯಕ್ತಿಯ ಘನತೆಯನ್ನು ಎತ್ತಿ ಹಿಡಿಯಿತು. ಭಕ್ತಿ ಚಳುವಳಿಯ ಆರಂಭ ದಕ್ಷಿಣ ಭಾರತದಲ್ಲಿ, ಅದರಲ್ಲೂ ತಮಿಳುನಾಡಿನಲ್ಲಿ ಆರಂಭವಾದಂತೆ ಕಾಣುತ್ತದೆ. ಕ್ರಿ. ಶ. ೭ನೇ ಶತಮಾನದಲ್ಲಿ ಹುಟ್ಟಿಕೊಂಡ ಆಳ್ವಾರ್ ಮತ್ತು ನಾಯನಾರ್ ಚಳುವಳಿಗಳೇ ಸಾಕ್ಷಿ. ಅನಂತರ ಕರ್ನಾಟಕದಲ್ಲಿ ಶರಣರ, ಹರಿದಾಸರ ಚಳುವಳಿಗಳು, ಮಹಾರಾಷ್ಟ್ರದಲ್ಲಿ ಭಾಗವತ ಚಳುವಳಿ, ಪೂರ್ವ ಭಾರತದಲ್ಲಿ ಚೈತನ್ಯ ಪಂಥೀಯರ ಚಳುವಳಿ, ಉತ್ತರ ಹಿಂದೂಸ್ತಾನದಲ್ಲಿ ತುಳಸೀ, ಕಬೀರರ ಚಳುವಳಿ, ಅಸ್ಸಾಮಿನಲ್ಲಿ ಶಂಕರದೇವನ ಚಳುವಳಿ, ಪಂಜಾಬಿನಲ್ಲಿ ಸಿಖ್ ಪಂಥದ ಚಳುವಳಿ, ಗುಜರಾತ್, ರಾಜಸ್ತಾನದಲ್ಲಿ ವೈಷ್ಣವ ಪಂಥದ ಚಳುವಳಿ ಮೀರಾಬಾಯಿ ಮತ್ತು ನರಸಿಂಹ ಮೆಹ್ತಾರ ಚಳುವಳಿ-ಹೀಗೆ ಭಾರತ ದಾದ್ಯಂತ ಭಕ್ತಿ ಚಳುವಳಿಗಳು ನಡೆದಿರುವುದನ್ನು ಕಾಣುತ್ತೇವೆ.

ಭಕ್ತಿ ಚಳುವಳಿಗಳು ಇದ್ದಕ್ಕಿದ್ದಂತೆ ದಿಢೀರನೆ ತಲೆ ಎತ್ತುವುದಿಲ್ಲ. ಸಮಾಜದಲ್ಲಿ ನಡೆಯುವ ಅನ್ಯಾಯಗಳ ಬಗ್ಗೆ ಜನತೆಗೆ ಅಸಮಾಧಾನ ವಾಗುತ್ತದೆ. ಅದನ್ನು ಸಹಿಸುತ್ತ ಸಹಿಸುತ್ತ ಸಾಕಾಗಿ ಅನ್ಯಾಯಗಳಿಂದ ಬಿಡುಗಡೆ ಹೊಂದಲು ಹಾತೊರೆಯುತ್ತಾರೆ.

ಇಂತಹ ಸಂದರ್ಭದಲ್ಲಿ ಜನರನ್ನು ಅನ್ಯಾಯಗಳಿಂದ ಬಿಡುಗಡೆ ಮಾಡಲು ಜನಗಳ ಸಮಸ್ಯೆಗಳಿಗೆ ಪರಿಹಾರ ನೀಡಲು ಒಬ್ಬ ಭಕ್ತ ಅಥವಾ ನಾಯಕ ಕಾಣಿಸಿಕೊಳ್ಳುತ್ತಾನೆ. ಜನರು ಅವನ ಕಡೆಗೆ ಓಗೊಟ್ಟು ಅವನತ್ತ ಧಾವಿಸುತ್ತಾರೆ. ಆಗ ಚಳುವಳಿಯು ಆರಂಭವಾಗುತ್ತದೆ. ಬಹುಪಾಲು ಭಕ್ತರು ಭಜನೆ, ಧ್ಯಾನ, ಪೂಜೆಗಳೊಂದಿಗೆ ಆತ್ಮೋದ್ಧಾರ ಹಾಗೂ ಮೋಕ್ಷ ಸಾಧನೆಯೆಂದು ಭಾವಿಸಲಿಲ್ಲ. ಅವರ ದೇಶ, ಕಾಲ, ಸಂದರ್ಭಗಳ ಮಿತಿಯಲ್ಲಿ ತಮ್ಮ ಸುತ್ತ ಮುತ್ತಲಿನವರ ಸಮಸ್ಯೆಗಳಿಗೆ ತೀವ್ರ ಸ್ಪಂದಿಸಿದವರಿದ್ದಾರೆ. ಅದು ಅವರ ಅಂದಿನ ಕಾಲದ ಸಾಮಾಜಿಕ ಪ್ರತಿಭಟನೆ ಎಂದು ನಾವು ಭಾವಿಸಬೇಕು. ತಮ್ಮ ಆತ್ಮೋದ್ಧಾರದೊಂದಿಗೆ ಸಮೂಹದ ಕ್ಷೇಮವನ್ನು ಬಯಸಿದವರಿದ್ದಾರೆ. ಈ ಅರ್ಥದಲ್ಲಿ ಭಕ್ತಿ ಚಳುವಳಿಗಳ ಸಾಹಿತ್ಯವನ್ನು ಪ್ರತಿಭಟನಾ ಸಾಹಿತ್ಯವೆಂದು ಗುರುತಿಸಿದರೆ ಬಹುಶಃ ತಪ್ಪಾಗಲಿಕ್ಕಿಲ್ಲ.

ಭಕ್ತಿಚಳುವಳಿಗಳ ಸಂದರ್ಭ

(ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ನಲೆಗಳಲ್ಲಿ)

ಭಕ್ತಿ ಚಳುವಳಿಗಳ ಇತಿಹಾಸವನ್ನು ಅವಲೋಕಿಸಿದಾಗ, ಅವುಗಳ ಉಗಮಕ್ಕೆ ಅನೇಕ ಸಂದರ್ಭಗಳೂ ಕಾರಣವಾಗುತ್ತವೆ ಎನ್ನುವುದನ್ನು ಇತಿಹಾಸ ಸಾರುತ್ತದೆ. ಉತ್ತರ ಭಾರತದಲ್ಲಿ ಗುಪ್ತವಂಶದ ಪತನಾನಂತರ, ಆ ಮನೆತನಕ್ಕೆ ಸೇರಿದ ಮಾಂಡಲೀಕ ಅಥವಾ ಸಾಮಂತ ಅರಸರು ಅಲ್ಲಲ್ಲಿ ಸ್ವತಂತ್ರ ರಾಜ್ಯವನ್ನು ಸ್ಥಾಪಿಸಿಕೊಂಡಿದ್ದರು. ಸುಮಾರು ೬-೭ನೆ ಶತಮಾನದ ನಂತರ ಮಹಮ್ಮದೀಯರ ದಾಳಿಯ ಮೂಲಕ ಧಾರ್ಮಿಕ ಕ್ಷೇತ್ರ, ರಾಜಕೀಯ ಕ್ಷೇತ್ರಗಳಲ್ಲಿ ಕ್ಷೋಭೆ ಉಂಟಾಯಿತು. ಅಲ್ಲಲ್ಲಿ ಗೊಂದಲಮಯ ಪರಿಸ್ಥಿತಿ ಉಂಟಾಯಿತು. ಮುಸಲ್ಮಾನರ ಪ್ರತಿರೋಧವನ್ನು ತಾಳಲಾರದೆ ಅನೇಕ ಮತ ಧರ್ಮದವರು ಗುಂಪು-ಗುಂಪಾಗಿ ದಕ್ಷಿಣ ಭಾರತಕ್ಕೆ ಬಂದಂತೆ ಕಾಣುತ್ತದೆ. ಉತ್ತರ ಭಾರತದಲ್ಲೂ ರಾಜ್ಯ ಲಾಲಸೆಯಿಂದ ಐಹಿಕ ಭೋಗಗಳಿಗೆ ಘರ್ಷಣೆ ನಡೆಯಿತು. ಘರ್ಷಣೆಗಳು ನಡೆದರೆ ಆಗ ದಕ್ಷಿಣ ಭಾರತದಲ್ಲಿ ಬೇರೆ ಬೇರೆ ಮತ ಪಂಥಗಳಲ್ಲಿ ಚರ್ಚೆಗಳೂ ಘರ್ಷಣೆಗಳೂ ಆರಂಭವಾದವು. ದ್ರಾವಿಡ ಪ್ರದೇಶಗಳು ಶೈವಭಕ್ತಿಗೆ ಹೆಚ್ಚು ಒಲಿದು, ವಿಷ್ಣು ಭಕ್ತಿಗೆ ಹೆಚ್ಚು ಪ್ರೋತ್ಸಾಹ ಕೊಡಲಿಲ್ಲ. ಒಂದು ಕಾಲದಲ್ಲಿ ವೈಷ್ಣವ, ಆಳ್ವಾರರ ಬೀಡಾಗಿದ್ದ ತಮಿಳು ದೇಶದ ಪರಂಪರೆಯಲ್ಲಿ ಶ್ರೀ ರಾಮಾನುಜರು ಹನ್ನೆರಡನೇ ಶತಮಾನದಲ್ಲಿ ವೈಷ್ಣವ ಧರ್ಮವನ್ನು ಪ್ರಚಾರ ಮಾಡಿದರು. ಆದರೂ ಇವರಿಗೆ ಅಲ್ಲಿ ಪ್ರೋತ್ಸಾಹ ಸಿಕ್ಕಲಿಲ್ಲ. ಇವರು ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದು ವಿಷ್ಣುವರ್ಧನನ ಆಶ್ರಯದಲ್ಲಿ ನೆಲೆಸಿದರು. ಇವರುಗಳ ವರ್ಚಸ್ಸು ದಕ್ಷಿಣ ಭಾರತವನ್ನೆಲ್ಲ ವ್ಯಾಪಿಸಿತ್ತು. ಕ್ರಮೇಣ ವೈಷ್ಣವ ಆಚಾರ್ಯರು ವಿಜಯನಗರದ ಅರಸು ಮನೆತನಗಳಿಗೆ ರಾಜಗುರುಗಳಾಗಿ ವಿಷ್ಣುಭಕ್ತಿಯನ್ನು ಪ್ರಚಾರ ಮಾಡಿದರು. ವೈಷ್ಣವ ಮತದ ಆಧಾರಸ್ತಂಭಗಳಂತಿದ್ದ ಆಳ್ವಾರರು ವೈಷ್ಣವ ಭಕ್ತಿಯನ್ನು ಪ್ರಚಾರ ಮಾಡಿದರು. ಈ ಮಧ್ಯೆ ಬೌದ್ಧ, ಜೈನ ಧರ್ಮಗಳು ಕಾಲ ಮಹಿಮೆಯಿಂದ ಜನಾಶ್ರಯ ರಾಜಾಶ್ರಯವಿಲ್ಲದೆ ಸೊರಗುತ್ತಿದ್ದವು. ಚೋಳರಾಜರ ಆಶ್ರಯದಲ್ಲಿ ಶೈವ ಧರ್ಮದ ಪ್ರಭಾವ ಮೇಲುಗೈ ಆಯಿತು. ದಕ್ಷಿಣ ಭಾರತದಲ್ಲಿ ಧರ್ಮಕ್ಷೇತ್ರದಲ್ಲಿ ಶೈವ-ವೈಷ್ಣವರಿಬ್ಬರೇ ಸ್ಪರ್ಧಿಗಳಾದರು. ಮಧ್ಯಯುಗದ

ಭಾರತ (ಸುಮಾರು ೧೨-೧೫ನೇ ಶತಮಾನದವರೆಗೆ) ಭಕ್ತಿ ಅಂದೋಲನಗಳಿಗೆ ಸಾಮಾಜಿಕ ಸ್ವರೂಪ ನೀಡಿತು. ಸಂಸ್ಕೃತ ದೇವಭಾಷೆಯಾಗಿ ವಿದ್ವಜ್ಜನರಿಗಷ್ಟೇ ಸೀಮಿತವಾಗಿತ್ತು. ಸಂಸ್ಕೃತ ಜ್ಞಾನ ಭಂಡಾರದಿಂದ ಶ್ರೀಸಾಮಾನ್ಯರು ವಂಚಿತರಾಗಿದ್ದರು. ಆದರೂ ಪ್ರಾಕೃತ ಭಾಷೆಗಳ ಸಂಜೀವಿನಿ ಇಲ್ಲದೆ ವೈದಿಕ ಸಂಸ್ಕೃತಿ ಬದುಕಿ ಉಳಿಯುವುದು ಅಸಾಧ್ಯವಾಗಿತ್ತು. ಆದ್ದರಿಂದಲೇ ಭಕ್ತಿ ಚಳುವಳಿಗಳಿಗೆ ಪ್ರಾಕೃತ ಭಾಷೆಗಳು ಧಾರ್ಮಿಕ ಶಿಕ್ಷಣದ ಮಾಧ್ಯಮಗಳಾದವು. ವೈದಿಕ ಮತಗಳು ಶುಷ್ಕ ಆಚಾರದ ಬೆನ್ನುಹತ್ತಿ ನೀರಸವಾಗಿದ್ದವು. ಡಾಂಭಿಕತೆ, ಅಂಧ ವಿಶ್ವಾಸ, ಪುರೋಹಿತರ ಶೋಷಣೆಯಿಂದ ತುಂಬಿದ್ದ ವೈದಿಕ ಪಂಥಗಳಿಗೆ ಅವುಗಳಿಂದ ರೋಸಿಹೋಗಿದ್ದ ಜನ ಸಮೂಹದಿಂದ ಪ್ರತಿಭಟನೆ ಬಂದಿತು. ವೈದಿಕ ಕರ್ಮಕಾಂಡವು ಜನಸಾಮಾನ್ಯರಿಗೆ ನುಂಗಲಾರದ ತುತ್ತಾದಾಗ, ಭಕ್ತಿಚಳುವಳಿಗಳು ಜನಭಾಷೀಯ ಮಾಧ್ಯಮದಿಂದ ಜನಜಾಗೃತಿಹಾಗೂ ಭಕ್ತಿ ಪ್ರಸಾರಕ್ಕೆ ನಾಂದಿ ಆದವು.

❖

೧. ತಮಿಳುನಾಡಿನಲ್ಲಿ ಭಕ್ತಿಚಳುವಳಿಗಳು

ಭಾರತದಲ್ಲಿ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ವಿಶೇಷವಾಗಿ ಪ್ರಚಾರದಲ್ಲಿರುವ ಭಕ್ತಿಪಂಥಗಳು ಎರಡು: (೧) ಶೈವಪಂಥ, ಮತ್ತೊಂದು (೨) ವೈಷ್ಣವ ಪಂಥ.

ಇವೆರಡು ಪಂಥಗಳು ಮೊದಲು ತಮಿಳುನಾಡಿನಲ್ಲಿ ಪ್ರಾರಂಭ ವಾದವು. ಕ್ರಿ. ಶ. ೭ರಿಂದ ೯ನೇ ಶತಮಾನದವರೆಗೆ ಇವೆರಡು ಪಂಥಗಳು ಇದ್ದವು. ನಾಯನಾರ್‌ರ ಶೈವಭಕ್ತಿ ಪಂಥ ಆಳ್ವಾರರ ವೈಷ್ಣವ ಭಕ್ತಿಪಂಥ ಎಂದು ಅವು ಹೆಸರು ಪಡೆದಿವೆ. ವೈಷ್ಣವ ಭಕ್ತಿಪಂಥ ರಾಮಾನುಜರ ವೈಷ್ಣವ ಮತಕ್ಕೆ ಮೂಲ ಪುರಾತನರಿಂದ ಆರಂಭವಾಗುತ್ತದೆ. ಶೈವಭಕ್ತರನ್ನು ನಾಯನಾರ್ ಎಂದು ಕರೆಯುತ್ತಾರೆ. ಇವರಲ್ಲಿ ಅಪ್ಪಾರ್, ತಿರುಜ್ಞಾನ ಸಂಬಂಧಿ, ಸುಂದರ ನಂಬಿ, ತಿರುವಾಚಕಂ, ಮಾಣಿಕ್ಯ ವಾಚಕರ್ ಇವರು ಮುಖ್ಯರು. ಇವರಲ್ಲಿ ಬ್ರಾಹ್ಮಣರಿಂದ ಹರಿಜನರವರೆಗೂ ಎಲ್ಲ ಜಾತಿಯ ಜನರಿದ್ದರು. ವೈಷ್ಣವ ಪಂಥದ ಆಳ್ವಾರರು ಮುಖ್ಯವಾಗಿ ಹನ್ನೆರಡು ಮಂದಿ ಆಳ್ವಾರ್- ಈ ಶಬ್ದಕ್ಕೆ ಭಗವಂತನಲ್ಲಿ ಗಾಢ ಭಕ್ತಿಯುಳ್ಳವರು ಎಂದರ್ಥ. ಇವರು ತಮ್ಮ ಆಧ್ಯಾತ್ಮ ಅನುಭವವನ್ನು ಮಧುರವಾದ ಗೀತೆಗಳ ರೂಪದಲ್ಲಿ ಹಾಡಿದರು. ಈ ಗೀತೆಗಳು ತಮಿಳು ಭಾಷೆಯಲ್ಲಿ ಇವೆ. ಆಳ್ವಾರರು ಪಾಂಡ್ಯ, ಜೋಳ ಕೇರಳನಾಡಿನಲ್ಲಿ ವಿಷ್ಣುಭಕ್ತಿಯನ್ನು ಪ್ರಸಾರ ಮಾಡಿದರು. ಪೊಯ್‌ಗೈಯ್ ಆಳ್ವಾರ್ ಪೇಯಾಳ್ವಾರ್, ತಿರುಮಳಿಸ್ಸೈ ಆಳ್ವಾರ್, ನಮ್ಮೂಳ್ವಾರ್, ಮಧುರಕವಿ ಆಳ್ವಾರ್, ಕುಲ ಶೇಖರ ಆಳ್ವಾರ್, ತಿರುಪ್ಪಾಣಿ ಆಳ್ವಾರ್, ತಿರುಮುಂಗೈ ಆಳ್ವಾರ್ ಇತ್ಯಾದಿ. ಇವರಲ್ಲೂ ಎಲ್ಲ ಜಾತಿಗಳವರು ಇದ್ದರು. ಒಬ್ಬರು ರಾಜ, ಒಬ್ಬಾಕೆ ಸ್ತ್ರೀ, ಒಬ್ಬರು ಪಂಚಮರು, ಒಬ್ಬರು ಕಳ್ಳರ ಕುಲಕೆ ಸೇರಿದವರು, ಇನ್ನೊಬ್ಬರು ಮ್ಲೇಚ್ಛರು, ಮೂವರು ಬ್ರಾಹ್ಮಣರು ಇದ್ದರು. ಇವರೆಲ್ಲರ ಉದ್ದೇಶ ಜನಮನದಲ್ಲಿ ವೈಷ್ಣವ ಭಕ್ತಿಯನ್ನು ಮೂಡಿಸುವುದು. ವಿಷ್ಣುವಿಗೆ ಆತ್ಮ ಸಮರ್ಪಣೆ ಮಾಡುವುದು, ಆಧ್ಯಾತ್ಮಿಕ ಜ್ಞಾನವನ್ನು ಸುತ್ತ ಮುತ್ತಲಿನ ಜನಕ್ಕೆ ಅರ್ಥವಾಗುವಂತೆ ತಮಿಳು ಭಾಷೆಯಲ್ಲಿ ಹಾಡಿದ್ದಾರೆ. ಅವರ ಸೂಕ್ತಿಗಳಿಗೆ 'ತಮಿಳು ವೇದ' ಎಂದು ಕರೆಯುತ್ತಾರೆ. ಇವರ ಜೀವನ ಚರಿತ್ರೆಯನ್ನು ಅರಿಯಲು

ದಿವ್ಯಸೂರಿ ಚರಿತ, ಪ್ರಸನ್ನಾಮೃತ ಮತ್ತು ಆಳ್ವಾರ್‌ರ ಉಪದೇಶಗಳನ್ನೊಳಗೊಂಡ ನಾಲ್ಕು ಸಾವಿರ ಪ್ರಬಂಧಗಳು ಆಧಾರವಾಗಿವೆ. ಆಳ್ವಾರರುಗಳಲ್ಲಿ ಅಂಡಾಳ್ ಎಂದು ಖ್ಯಾತಳಾದ ಗೋದಾದೇವಿ ಶ್ರೀರಂಗನಾಥನ ಪರಮ ಭಕ್ತಳು, ವಿರಾಗಿಣಿ ಆಗಿದ್ದಳು. ಅಂಡಾಳ್ ರಚಿಸಿದ 'ತಿರುಪ್ಪಾವೈ' ಮೂವತ್ತು ಗೀತೆಗಳ ಸಂಗ್ರಹವಾಗಿದೆ. ಅವುಗಳೆಲ್ಲಾ ಭಕ್ತಿಗೀತೆಗಳು. ಆಳ್ವಾರರುಗಳಲ್ಲಿ ಗಮನಾರ್ಹವಾದ ಮತ್ತೊಂದು ಹೆಸರು ಕುಲಶೇಖರ ಆಳ್ವಾರ್. ಅವರ 'ಮುಕುಂದಮಾಲಾ' ಭಕ್ತಿ ಸಾಹಿತ್ಯದಲ್ಲಿ ಜನಪ್ರಿಯವಾಗಿರುವ ಅಪೂರ್ಣ ಹೆಸರು.

ನಾಯನಾರ್ ಪಂಥದಲ್ಲಾಗಲೀ, ಆಳ್ವಾರ್ ಪಂಥದಲ್ಲಾಗಲೀ ದೈವದ ಹೆಸರು ಬೇರೆ ಇದ್ದಿತಾದರೂ ಈ ಎರಡು ಭಕ್ತಿ ಚಳುವಳಿಗಳ ಉದ್ದೇಶ ಮಾತ್ರ ಒಂದೇ ಆಗಿತ್ತು. ಈ ಭಕ್ತಿ ಪಂಥಗಳಲ್ಲಿ ಬಹುಪಾಲು ಜನ ಬ್ರಾಹ್ಮಣೇತರರು, ಹೆಚ್ಚಾಗಿ ಕೆಳವರ್ಗದವರು, ಅಂತ್ಯಜರು, ಹೆಂಗಸರು, ವೃತ್ತಿಜೀವಿಗಳು ಹಾಗೂ ಕೂಲಿಕಾರರು ಭಾಗವಹಿಸಿದ್ದರು. ಇವರು ಸಂಸ್ಕೃತವನ್ನು ಬಿಟ್ಟು ಜನಭಾಷೆಯಲ್ಲಿ ಉಪದೇಶ ಮಾಡಿದರು. ಇದರಿಂದ ದೇವರು-ಧರ್ಮದ ವಿಷಯವನ್ನು ಜನರು ತಮ್ಮ ತಮ್ಮ ಮಾತೃಭಾಷೆಯಲ್ಲಿ ಅರಿಯುವುದು ಸಾಧ್ಯವಾಯಿತು. ಭಕ್ತಿಪಂಥದ ಭಾವನೆಯು ದೇವಭಕ್ತರಿಗೆ ಸಂಬಂಧಪಟ್ಟದ್ದು. ಅವರು ನಂಬಿದ ದೇವರನ್ನು ದಾಸಭಾವದಿಂದಲೋ, ಮಧುರ ಭಾವದಿಂದಲೋ ಆರಾಧಿಸುತ್ತಿದ್ದರು. ಅವರಲ್ಲಿ ಜಾತಿ ಮತ ಪಂಥಗಳ ಭೇದಭಾವ ಇರಲಿಲ್ಲ. ದೇವರ-ದೃಷ್ಟಿಯಲ್ಲೂ, ಸಾಮಾಜಿಕ ವಾಗಿಯೂ, ಅವರೆಲ್ಲ ಸಮಾನರಾಗಿದ್ದರು. ಮೇಲು ವರ್ಗದವರು ಸಾಮಾನ್ಯರನ್ನು ಮತದಿಂದ ದೂರವಿಟ್ಟರೆ, ಈ ಭಕ್ತಿ ಚಳುವಳಿಗಳು ತಮ್ಮ ಮಂದಿರದ ಬಾಗಿಲನ್ನು ಎಲ್ಲರಿಗೂ ತೆರೆದವು. ತಮಿಳು ನಾಡಿನ ಸುಂದರ್ (ಕ್ರಿ. ಶ. ೭-೮) ಹೇಳುತ್ತಾರೆ. ದೇವಾಲಯದಲ್ಲಿ ಜಡನಾದ ದೇವರು ಇದ್ದಾನೆ. ಆದರೆ ಮನುಷ್ಯನಲ್ಲಿ ಜೀವಂತ ದೇವರು ಅವನಿಗಿಂತ ಮುಖ್ಯ. ಎರಡನೆಯವನಿಗೆ ಅರ್ಪಿಸಿದ್ದು ಮೊದಲನೆಯವನಿಗೆ ಸಲ್ಲುತ್ತದೆ ಎಂದು.

ಭಕ್ತಿಪಂಥದ ಆಳ್ವಾರರಾಗಲಿ, ನಾಯನಾರ್ ಆಗಲಿ, ಎಲ್ಲರೂ ಮೇಲುಜಾತಿಯವರಾಗಿರಲಿಲ್ಲ. ತಿರುಪ್ಪಾಳ್ವಾರ್, ಅಸ್ಪೃಶ್ಯ ಜಾತಿಗೆ ಸೇರಿದವನು, ಅಂಡಾಳ್ ಸ್ತ್ರೀ ನಾಯನಾರ್‌ಗಳಲ್ಲಿ ಅಪ್ಪರ್, ಅಸ್ಪೃಶ್ಯ ಜಾತಿಗೆ ಸೇರಿದವನಾಗಿದ್ದ. ಆಳ್ವಾರ್ ತಮಿಳು ಭಾಷೆಯಲ್ಲಿ ಪ್ರತಿಪಾದಿಸಿದ ವಿಚಾರಗಳಿಗೆ, ರಚಿಸಿದ ಭಕ್ತಿಗೀತೆಗಳಿಗೆ ಮಾನ್ಯತೆ ನೀಡಿದವರು ಆಚಾರ್ಯ ರಾಮಾನುಜರು. ಅಸ್ಪೃಶ್ಯರನ್ನು ಅವರು 'ತಿರುಕುಳತ್ತರ್' ಎಂದು ಕರೆದರು. ಯಾವ ಜಾತಿಯವನೇ ಆಗಲಿ, ಭಕ್ತಿಯಿಂದ ಶುದ್ಧ ಜೀವನ ನಡೆಸಿದರೆ ಮುಕ್ತಿ ಸಾಧ್ಯವೆಂದರು. ಮುಕ್ತಿ ಸಾಧನೆಗೆ ಜಾತಿ ಅಡ್ಡ ಬರಬಾರದೆಂದು ಹೇಳಿ ದೀನರ, ದಲಿತರ, ಹಾಗೂ ಉಪೇಕ್ಷಿತರಾದವರಲ್ಲಿ

ಆತ್ಮವಿಶ್ವಾಸವನ್ನು ತುಂಬಿ ಅವರನ್ನು ಭಕ್ತಿಮಾರ್ಗದ ಕಡೆಗೆ ತಿರುಗಿಸಿದರು. ಜನರ ಬಾಳುವೆ ಯನ್ನು ಉತ್ತಮಗೊಳಿಸಲು ನೆರವಾದರು. ಅವರ ಇತಿಮಿತಿಗಳಲ್ಲೇ ಸುಧಾರಣೆ ಮಾಡಿದರು. ಐಹಿಕ-ಲೌಕಿಕ ವಿಚಾರಗಳ ಕಡೆಗೆ ಗಮನ ಕೊಡದೆ ಭಗವದ್ಭಕ್ತಿಯ ಕಡೆಗೆ ಜನರ ಗಮನವನ್ನು ಕೇಂದ್ರಿಕರಿಸಲು ಶ್ರಮಿಸಿದರು. ತಮಿಳುನಾಡಿನ ಶ್ರೀರಾಮಾನುಜರು ಆಳ್ವಾರರ ಉದಾರ ವಿಚಾರಧಾರೆಯಿಂದ ಪ್ರಭಾವಿತರಾಗಿ (ಕ್ರಿ.ಶ. ೧೧-೧೨ನೆ ಶತಮಾನ ದಲ್ಲಿ) ರಹಸ್ಯವಾಗಿ ಜಪಿಸಬೇಕಾದ ಮಂತ್ರವನ್ನು ಎಲ್ಲರೂ ಕೇಳುವಂತೆ ಗಟ್ಟಿಯಾಗಿ ಘೋಷಿಸುತ್ತಾರೆ. ಅವರ ಗುರುಗಳು ಮಂತ್ರವನ್ನು ಬಹಿರಂಗ ಪಡಿಸಬಾರದೆಂದು ಎಚ್ಚರಿಸಿದರೂ ಕೇಳಲಿಲ್ಲ. ಇದನ್ನು ಕೇಳಿದವರು ಧನ್ಯಾತ್ಮರಾಗಲಿ, ತಾವು ನರಕಕ್ಕೆ ಹೋದರೂ ಚಿಂತೆಯಿಲ್ಲ ಎಂದು ಭಾವಿಸಿದರು.

ಭಕ್ತಿ ಚಳುವಳಿಗಳಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ ಕೆಲವರು ರಾಜ ಪ್ರಭುತ್ವದ ವಿರುದ್ಧ ನಿಂತುದು. ನಮ್ಮ ರಾಜ ದೇವರೆ ಹೊರತು ಈ ನರಮನುಷ್ಯರಲ್ಲ ಎಂದು ಅನೇಕ ಭಕ್ತರು ಬಹಿರಂಗವಾಗಿಯೇ ಹೇಳಿದರು. ಮಾಣಿಕ್ಯವಾಚಕರೆ ಹೇಳುತ್ತಾರೆ.-'ನಾನು ಯಾರಿಗೂ ಆಳಲ್ಲ (ದೇವರನ್ನೂ ಬಿಟ್ಟರೆ) ಯಾರಿಗೂ ಹೆದರಬೇಕಿಲ್ಲ' ಎಂದು. ರಾಜಸ್ಥಾನ ಮೇಲು, ಕೀಳು, ಅಧಿಕಾರಗಳ ಒಂದು ವೇದಿಕೆ. ಆದರೆ ದೇವರ ರಾಜ್ಯದಲ್ಲಿ ಮಾತ್ರ ಅವನ ಮಕ್ಕಳೆಲ್ಲರು ಸಮಾನರು. ತಮಿಳುನಾಡಿನ ಭಕ್ತಿಚಳುವಳಿಯಲ್ಲಿ ಎಲ್ಲರೂ ಏಕೇಶ್ವರವಾದಿಗಳು. ವೈದಿಕ ಧರ್ಮದ ಹಲವಾರು ಸಂಪ್ರದಾಯಗಳನ್ನು ವಿರೋಧಿಸಿದವರು. ವರ್ಣಭೇದ, ಮೇಲು, ಕೀಳು ತಾರತಮ್ಯ, ಮಾತೃಭಾಷೆಗೆ ಮನ್ನಣೆ, ಸಂಸ್ಕೃತದ ನಿರಾಕರಣೆ, ಸಮಾನತೆಯನ್ನು ಬೋಧಿಸಿದರು. ಭಗವಂತನನ್ನು ಒಲಿಸಲು ಭಕ್ತಿಯೇ ಏಕೈಕ ಸಾಧನ ಎಂದು ಸಾರಿದರು. ಭಕ್ತಿಮಾರ್ಗದಲ್ಲಿ ನಡೆಯುವವರಿಗೆ ಪುರೋಹಿತರ ಮತ್ತು ಅರ್ಚಕರ ಮಾರ್ಗದರ್ಶನದ ಅಗತ್ಯವಿಲ್ಲ ಎಂದು ತಿಳಿಸಿದರು. ತಮಿಳುನಾಡಿನ ವೈಷ್ಣವ ಆಳ್ವಾರ್‌ರಲ್ಲಿ ತಿರುಪ್ಪಾಣಾಳ್ವಾರ್‌ರು ಒಬ್ಬ ಅಸ್ಪೃಶ್ಯ. ಶೈವ ನಾಯನಾರ್‌ರಲ್ಲಿ ನಂದನಾರ್ ಒಬ್ಬ ಅಸ್ಪೃಶ್ಯ ರಾಮಾನುಜರ ಗುರು ಶೂದ್ರನಾಗಿದ್ದ ಕಾಂಜೀಪೂರ್ಣನ ಪಾದಗಳನ್ನು ಒತ್ತಲು ಮುಂದಾಗಿದ್ದರಂತೆ ಹಾಗೂ ಕರ್ನಾಟಕದ ಮೇಲುಕೋಟೆಯ ಪ್ರಾಕಾರದೊಳಗೆ ತಮಗೆ ಸಹಾಯ ಮಾಡಿದ ಅಸ್ಪೃಶ್ಯರಿಗೆ ಪ್ರವೇಶದ ಅವಕಾಶವನ್ನು ಒದಗಿಸಿದ್ದರು. ಇದು ಅವರ ಉದಾರ ಮನೋಭಾವಕ್ಕೆ ಹಿಡಿದ ಕನ್ನಡಿಯಾಗಿದೆ. ಈ ತಮಿಳುನಾಡಿನ ಭಕ್ತ ಶಿರೋಮಣಿಗಳು ಸಾಮೂಹಿಕವಾಗಿ ದೈವಭಕ್ತಿಯ ನಿಬ್ಬೆರಗಿನಲ್ಲಿ ಹಾಡಿದರು. ಕುಣಿದರು. ಭಜನೆ ಮಾಡುತ್ತಾ ಭಕ್ತಿಗೀತೆಗಳನ್ನು ಹಾಡುತ್ತಾ ಊರಿಂದೂರಿಗೆ ದೇವಾಲಯದಿಂದ ದೇವಾಲಯಕ್ಕೆ ಸಂಚಾರ ಮಾಡುತ್ತಿದ್ದರು. ದಕ್ಷಿಣ ಭಾರತದ ಚೋಳ, ಪಾಂಡ್ಯ, ಚೇರ ರಾಜ್ಯಗಳಲ್ಲಿ ಭಕ್ತಿಯ ಹೊನಲನ್ನೇ ಹರಿಸಿದರು. 'ತೇವಾರಂ' ಭಕ್ತಿಗೀತೆಗಳ ಧ್ವನಿ ಎಲ್ಲೆಡೆ ಹರಡುವಂತೆ ಮಾಡಿದರು. ಜಾತಿ, ಲಿಂಗ, ಭೇದಗಳನ್ನು

ಮುರಿದು ಭಕ್ತಿಮಾರ್ಗದ ಬಾಗಿಲನ್ನು ಎಲ್ಲರಿಗೂ ತೆರೆದರು. ಆದರೂ ಇಲ್ಲಿ ಒಂದು ನಿರ್ಬಂಧವಿತ್ತು. ಶೂದ್ರರು ಮಾತ್ರ ದೇಗುಲದಲ್ಲಿ ಪ್ರವೇಶಿಸಿ ದೇವರನ್ನು ಪೂಜಿಸಿದರಾಗದು, ದೇಗುಲದ ಮಹಾದ್ವಾರದಲ್ಲೇ ನಿಂತು ತಮ್ಮ ಭಕ್ತಿಯನ್ನು ಅರ್ಪಿಸಬೇಕು ಎನ್ನುವ ಕರಾರು ಇತ್ತು. ಇದೇ ಆ ಕಾಲದಲ್ಲಿ ಕ್ರಾಂತಿಕಾರಕ ಆಚರಣೆ, ಕೀಳು ಜಾತಿಯಲ್ಲಿ ಹುಟ್ಟಿದ 'ತಿರುಪ್ಪನ್' ರಂಗನಾಥನ ದೇವಸ್ಥಾನದಲ್ಲಿ ಪ್ರವೇಶಿಸುವುದಕ್ಕೆ ಅನುಮತಿ ಇರಲಿಲ್ಲ. ಆದರೆ ಇಂತಹ ಉದಾಹರಣೆಗಳು ತೀರಾ ವಿರಳವಾಗಿ ಸಿಗುತ್ತವೆ.

ತಿರುಮಾಂಗೈ ಆಳ್ವಾರ್‌ರ ಸಾಕುಮಗಳು ಅಂಡಾಳ್, ಆಕೆ ವಿರಾಗಿಣಿ, ಆಕೆಯ ಭಕ್ತಿಗೀತೆಗಳನ್ನು ವೈಷ್ಣವರು ಮಂಗಳ ಕಾರ್ಯಗಳಲ್ಲಿ ಈಗಲೂ ಹಾಡುತ್ತಾರೆ. ಈ ಮಹಿಳೆಗೂ ಆಳ್ವಾರರು ತಮಗಿದ್ದ ಸ್ಥಾನವನ್ನು ಕೊಡದೆ ಆಕೆಯನ್ನು ಗುಂಪಿನಿಂದ ಹೊರಗಿಟ್ಟಿದ್ದರು. ಇಂತಹ ಕೆಲವು ಅಪರೂಪದ ಉದಾಹರಣೆಗಳಿವೆ. ಆದರೂ, ಬಹುಪಾಲು ಆಳ್ವಾರರು ನಾಯನಾರ್‌ರು ಆಗಿನ ಕಾಲದಲ್ಲಿ ತಮ್ಮ ಇತಿಮಿತಿಯಲ್ಲಿ ಕೆಲವು ಸಾಂಪ್ರಾದಯಕ ಕಟ್ಟಲೆಗಳನ್ನು ಮುರಿದು ದೈವಭಕ್ತಿ ಸಮಾತಭಾವವನ್ನು ಮೆರೆದಿದ್ದಾರೆಎಂಬುದು ಮೆಚ್ಚಬೇಕಾದ ಸಂಗತಿ. ನಾಯನಾರ್‌ರಲ್ಲಿ ಕಾರೈಕ್ಕಾಲೆ ಅಮ್ಮಯ್ಯಾರ್ ಒಬ್ಬ ಭಕ್ತಳು. ಈಕೆ ವೈಶ್ಯ ರಾಜನೊಬ್ಬನ ಪುತ್ರಿ. ಗೃಹಿಣಿಯಾಗಿದ್ದಳು. ಕೊನೆಗೆ ದೈವಭಕ್ತಿಯಲ್ಲಿ ತಲ್ಲೀನಳಾಗಿ ಸಂಸಾರದಿಂದ ವಿಮುಖಳಾದಳು. ಈಕೆ ತಮಿಳು ಭಾಷೆಯಲ್ಲಿ ಭಕ್ತಿಗೀತೆಯನ್ನು ಹಾಡಿದ್ದಾಳೆ. ತಮಿಳುನಾಡಿನ ದೈವಕ್ಕೆ ಶರಣಾದ ಅಪರಿಮಿತ ಭಕ್ತರ ಸಮೂಹವೇ ಇದೆ. ತಮಿಳುನಾಡಿನ ಭಕ್ತಿ ಚಳುವಳಿಯ ಇತಿಹಾಸವನ್ನು ಅವಲೋಕಿಸಿದಾಗ ಕ್ರಿ. ಶ. ೪ನೆಯ ಶತಮಾನದ ನಂದನಾರ್‌ನನ್ನು ನಾವು ನೆನಪಿಸಿಕೊಳ್ಳಬೇಕಾಗುತ್ತದೆ. ಈತನು ಭಾರತದ ಭಕ್ತಿಪಂಥದ ಪ್ರಥಮ ಬಂಡಾಯಗಾರ. ಇತಿಹಾಸ ದೃಷ್ಟಿಯಿಂದ ಈತನಿಗೆ ಅಗ್ರಸ್ಥಾನವಿದೆ. ಈತನು ಅಸ್ಪೃಶ್ಯ ಜನಾಂಗಕ್ಕೆ ಸೇರಿದವನು. ದೇವಾಲಯದ ಪ್ರವೇಶ ಅಸ್ಪೃಶ್ಯರಿಗೆ ನಿಷಿದ್ಧವೆನ್ನುವ ನಿಯಮವನ್ನು ಭಗ್ನಗೊಳಿಸಿದ ವ್ಯಕ್ತಿ. ಶೈವಭಕ್ತರಲ್ಲಿ ಈತನೂ ಅಗ್ರಗಣ್ಯ. ಹರಿಜನ ಕೇರಿಯಲ್ಲಿ ಮಲಹೊರುವ ಜೀತದಾಳಾಗಿ ಬದುಕಿದ್ದ ಅಸ್ಪೃಶ್ಯ ಈ ನಂದನಾರ್ ಅಗಾಧ ದೈವಭಕ್ತಿ, ಅನುಪಮ ಧರ್ಮಶ್ರದ್ಧೆಯಿಂದಾಗಿ ನಂದನಾರ್ ಆಗಿ ಪ್ರಸಿದ್ಧನಾಗಿಹೋದ, ಹೀಗೆ ತಮಿಳು ನಾಡಿನ ಭಕ್ತಿಪಂಥಗಳ ಚಳುವಳಿಯನ್ನು ಅವಲೋಕಿಸಿದಾಗ ಸಾಮಾಜಿಕವಾಗಿ, ಧಾರ್ಮಿಕವಾಗಿ ಜನಸಮೂಹದಲ್ಲಿ ಭಾವೈಕ್ಯತೆಯನ್ನು ತರಲು ಈ ಚಳುವಳಿಗಳು ಪ್ರಯತ್ನಿಸಿದವು. ಬಹುಪಾಲು ಅದರಲ್ಲಿ ಯಶಸ್ವಿಯಾದವು.

❖

೨. ಕರ್ನಾಟಕದ ಭಕ್ತಿಚಳುವಳಿಗಳು

ಹನ್ನೊಂದನೆಯ ಶತಮಾನದ ಉತ್ತಾರಾರ್ಧ ಮತ್ತು ಹನ್ನೆರಡನೆಯ ಶತಮಾನದ ಪೂರ್ವಾರ್ಧಗಳಲ್ಲಿ ಕರ್ನಾಟಕದಲ್ಲಿ ರಾಜಕೀಯ ಅಶಾಂತಿ, ಮತೀಯ ಘರ್ಷಣೆ ಜೈನಧರ್ಮದ ಅವನತಿ, ವೈಷ್ಣವ ಧರ್ಮದ ಅಲ್ಪ ಸ್ವಲ್ಪ ಜನಪ್ರಿಯತೆ ಇದ್ದರೂ ಜನಮನ ಮಾನಸಿಕ ಅಶಾಂತಿಯಿಂದ ದುರ್ಗತಿಗೀಡಾಗಿತ್ತು. ಸಮಾಜದಲ್ಲಿ ರೂಢಮೂಲ ಪದ್ಧತಿಗಳು, ಕಂದಾಚಾರ ಪದ್ಧತಿಗಳು, ಯಜ್ಞ-ಯಾಗಾದಿ ಹಿಂಸೆಗಳು ಜನಮನಕ್ಕೆ ಬೇಸರವನ್ನುಂಟುಮಾಡಿ ಬದುಕಿನಲ್ಲಿ ಹೊಸ ವಿಚಾರ, ಹೊಸ ಬೆಳಕನ್ನು ಕಾಣಲು ಜನರು ಹಂಬಲಿಸುತ್ತಿದ್ದರು. ಶೈವ ಧರ್ಮ ಅತ್ಯಂತ ಜನಪ್ರಿಯವಾಗಿತ್ತು. ಶೈವ ಧರ್ಮದ ಒಂದು ಶಾಖೆಯಾಗಿ ವೀರಶೈವ ಧರ್ಮವು ಅಷ್ಟೇ ಪ್ರಾಚೀನವಾಗಿತ್ತು. ಈ ಧರ್ಮದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಒಂದು ಭಕ್ತಿ ಚಳುವಳಿ ನಡೆಯಿತು. ಕನ್ನಡ ಸಾಹಿತ್ಯದ ದ್ವಿತೀಯ ನವೋದಯಕ್ಕೆ ನಮ್ಮ ನಾಡಿನ ನೂತನ ಧರ್ಮೋದಯಕ್ಕೆ ಕನ್ನಡಿಗರ ನವಜೀವನಕ್ಕೇ ನೈತಿಕ ಪುನರುತ್ಥಾನಕ್ಕೆ ಮತ್ತು ಶ್ರೀ ಸಾಮಾನ್ಯರ ಉದ್ಧಾರಕ್ಕಾಗಿ ಈ ಚಳುವಳಿ ನಡೆಯಿತು. ಇದೊಂದು ಪೂರ್ಣ ಪ್ರಮಾಣದ ಚಳುವಳಿಯಾಗಿದೆ. ಧಾರ್ಮಿಕವಾಗಿ, ಸಾಹಿತ್ಯಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಎಲ್ಲಾ ಆಯಾಮ ಗಳಲ್ಲೂ ಪರಿಪೂರ್ಣವಾಗಿದೆ. ಭಾರತದಲ್ಲಿ ನಡೆದ ಭಕ್ತಿ ಚಳುವಳಿಗಳಲ್ಲಿ ಏಕಕಾಲದಲ್ಲಿ ಮುನ್ನೂರು ಜನ ಶರಣರು, ಅರವತ್ತು ಜನ ಶರಣೆಯರು ಹೀಗೆ ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ವಿಚಾರವನ್ನು, ಅಭಿಪ್ರಾಯ ಗಳನ್ನು, ವಚನ ಭಾಷೆಯಲ್ಲಿ ಅನಾವರಣಗೊಳಿಸಿರುವುದು ಎಲ್ಲೂ ಕಂಡುಬರುವುದಿಲ್ಲ. ಇದೇ ಸಂದರ್ಭದಲ್ಲಿ ಹೆಚ್ಚು ಜನ ಸ್ತ್ರೀಯರು, ವಚನಕಾರ್ತಿಯರಾಗಿ ಕಂಡುಬಂದಿರುವುದು ನಮ್ಮ ನಾಡಿನ ಹೆಗ್ಗಳಿಕೆ. ಈ ಚಳುವಳಿಯಲ್ಲಿ ಬೇರೆ ಬೇರೆ ಜನಾಂಗಗಳಿಂದ ಬಂದವರು ಮೇಲು ಜಾತಿಗಳಿಂದ ಕೆಳಜಾತಿಗಳಿಂದ ಬಂದವರೆಲ್ಲ ಇದ್ದರು. ಸಮಾಜವನ್ನು ಬದಲಾವಣೆ ಮಾಡಬೇಕು. ಜನಮನದಲ್ಲಿ ಕ್ರಾಂತಿಯನ್ನು ಮೂಡಿಸಬೇಕು, ಹೊಸ ಹೊಸ ವಿಚಾರಗಳನ್ನು ಜನಗಳಿಗೆ ತಿಳಿಸಿಕೊಡಬೇಕು. ಜನತೆಯ ಕಲ್ಯಾಣವಾಗಬೇಕು ಎನ್ನುವ ಉದಾತ್ತ ಉದ್ದೇಶವನ್ನಿಟ್ಟುಕೊಂಡು ಹೊರಟ ಕರ್ನಾಟಕದ ಮೊದಲನೆಯ ಭಕ್ತಿ ಚಳುವಳಿಯಾಗಿದೆ.

ಕಲ್ಯಾಣದ ಚಾಲುಕ್ಯರಲ್ಲಿ ಪ್ರಧಾನ ಸಚಿವರಾಗಿದ್ದ ಬಸವಣ್ಣನವರ ನೇತೃತ್ವದಲ್ಲಿ ನಡೆದ ಈ ಶರಣರ ಭಕ್ತಿ ಚಳುವಳಿ ಸಮಾಜದ ಎಲ್ಲ ಜಾತಿ-ವರ್ಗಗಳ ಜನರನ್ನೊಳಗೊಂಡಿತ್ತು.

ಬ್ರಾಹ್ಮಣ, ಅಂಬಿಗ, ಬೇಟೆಗಾರ, ಮಡಿವಾಳ, ಅಗಸ, ಬೆಸ್ತ, ಬಡಗಿ, ರೈತ, ಅಕ್ಕಸಾಲಿಗ- ಹೀಗೆ ಹಲವು ಹದಿನೆಂಟು ವೃತ್ತಿ, ಜಾತಿಯವರು ಅದರಲ್ಲಿ ಭಾಗವಹಿಸಿದ್ದರು. ಸ್ವಾತಂತ್ರ್ಯ, ಸಮಾನತೆ, ಸಹೋದರ ಮನೋಭಾವಗಳು ಚಳುವಳಿಯ ಉದ್ದೇಶಗಳಾಗಿದ್ದವು. ಶಿವಾನುಭವ ಮಂಟಪದಲ್ಲಿ ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಎಲ್ಲ ಜಾತಿಯವರು ಸಮಾನ ವೇದಿಕೆಯಲ್ಲಿ ಕುಳಿತು ಶಿವಾನುಭವ ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದರು. ಧಾರ್ಮಿಕ, ಸಮಾಜಿಕ ವಿಷಯಗಳನ್ನು ಕುಳಿತು ಚರ್ಚಿಸುತ್ತಿದ್ದರು. ಈ ಚಳುವಳಿ ಬ್ರಾಹ್ಮಣ ಮದುವರಸನ ಮಗಳಿಗೂ, ಹೊಲೆಯರ ಹರಳಯ್ಯನ ಮಗನಿಗೂ ಶಿವದೀಕ್ಷೆಯನ್ನು ನೀಡಿ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿತು. ಇದು ನಿಜಕ್ಕೂ ಚರಿತ್ರಾರ್ಹ ಘಟನೆ. ಈ ಘಟನೆಯಿಂದಲೇ ಕಲ್ಯಾಣ ಕ್ರಾಂತಿಯೂ ಆಯಿತು. ಶರಣ ಚಳವಳಿ ಸ್ತ್ರೀಯರಿಗೆ ಧರ್ಮದಲ್ಲಿ ಸಮಾನತೆಯನ್ನು ನೀಡಿತು. ಇದು ನಿಜಕ್ಕೂ ಚರಿತ್ರಾರ್ಹ ಘಟನೆ. ಈ ಘಟನೆಯಿಂದಲೇ ಕಲ್ಯಾಣ ಕ್ರಾಂತಿಯೂ ಆಯಿತು. ಶರಣ ಚಳವಳಿ ಸ್ತ್ರೀಯರಿಗೆ ಧರ್ಮದಲ್ಲಿ ಸಮಾನತೆಯನ್ನು ನೀಡಿತು. ಇವರು ಸೃಷ್ಟಿಸಿದ ವಾತಾವರಣದಿಂದಾಗಿ ಸ್ತ್ರೀಯರು ಚಿಂತಕರಾದರು. ಶಿವಾನುಭವಿಗಳಾದರು. ವಚನಕಾರರಾದರು. ಇದು ಈ ಚಳುವಳಿಯ ವೈಶಿಷ್ಟ್ಯ

ಮುಕ್ತಾಯಕ್ಕ, ಅಕ್ಕಮಹಾದೇವಿ, ಸತ್ಯಕ್ಕ ರಾಯಮ್ಮ ಲಕ್ಕಮ್ಮನಂತಹ ಶರಣೆಯರು ಕಾಣಿಸಿಕೊಂಡರು. ವೇಶ್ಯಯಾಗಿದ್ದ ಸೂಳೆ ಸಂಕವ್ವೆ, ಅಸ್ಪೃಶ್ಯ ಜಾತಿಗೆ ಸೇರಿದ ಕಾಳವ್ವೆ ಇಂಥವರೂ ವಚನಕಾರ್ತಿಯರಾದುದು ಈ ಚಳುವಳಿಯ ಪವಾಡವೇ ಸರಿ. ವಚನ ಚಳುವಳಿ ಅಥವಾ ಶರಣ ಚಳುವಳಿ ಮೇಲುವರ್ಗದವರ ಶ್ರೇಷ್ಠತೆಯನ್ನು, ರಾಜನ ದೈವತ್ವವನ್ನು ಪ್ರಶ್ನಿಸಿತು. ವೈದಿಕ ಧರ್ಮದ ಕಪಿಮುಷ್ಠಿಗೆ ಸಿಕ್ಕ ಜನಾಂಗ ಮೇಲು ಕೀಳುಗಳ ತಾರತಮ್ಯದಲ್ಲಿ ಬೇಸರಗೊಂಡು ಬಹಳ ಜನರು ಈ ಚಳುವಳಿಯ ಅನುಯಾಯಿಯಾದರು. ಗುಜರಾತ್, ತಮಿಳುನಾಡು, ಆಂಧ್ರ, ಒರಿಸ್ಸಾ-ಹೀಗೆ ಭರತಖಂಡದ ನಾನಾ ಭಾಗಗಳಿಂದ ಶಿವಭಕ್ತರು ಬಂದು ಈ ಚಳುವಳಿಯಲ್ಲಿ ಭಾಗವಹಿಸಿದರು. ಎಲ್ಲರೂ ಲಿಂಗಧಾರಣೆ ಮಾಡಿಕೊಂಡು ಲಿಂಗವಂತರಾದರು. ಇದಕ್ಕೆ ಕಾರಣ ಬಸವಣ್ಣನವರ ವ್ಯಕ್ತಿತ್ವದ ಆಕರ್ಷಣೆ. ಎಲ್ಲ ಕಡೆಯಿಂದಲೂ ಕಲ್ಯಾಣಕ್ಕೆ ಜನರು ಬಂದರು. ಅನುಭವ ಮಂಟಪದಲ್ಲಿ ಚರ್ಚೆ ನಡೆದವು. ಶರಣರು ಕಲ್ಯಾಣ ಸಮಾಜವನ್ನು ಕಟ್ಟಲು ಬಯಸಿದ್ದರು. 'ಕಾಯಕವೇ ಕೈಲಾಸ' ಎಂದ ಜನರಿಗೆಲ್ಲಾ ಬೋಧಿಸಿದರು. ಎಲ್ಲ ಕಾಯಕಗಳೂ ಸಮಾನ, ಅವುಗಳಲ್ಲಿ ಮೇಲು-ಕೀಳು ಇಲ್ಲ ಎಂದು ತಿಳಿಹೇಳಿದರು. 'ಪರವಧುವನ್ನು ಮಹಾದೇವಿಯೆಂಬೆ' ಎಂದು ಸ್ತ್ರೀಯರಿಗೆ

ಗೌರವ ನೀಡಿ ಪುರುಷ ಸಮಾನತೆಯನ್ನು ಒತ್ತಿ ಹೇಳಿದರು. ಬಸವಣ್ಣನವರ ಅಸಾಧಾರಣ ಸಂಘಟನೆಯಿಂದ ಅಲ್ಲಮಪ್ರಭು, ಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ-ಇಂತಹ ಶರಣರ ನೇತೃತ್ವದಲ್ಲಿ ಚಳುವಳಿ ಸಫಲತೆಯನ್ನು ಪಡೆಯಿತು. 'ಇವನಾರವ, ಇವನಾರವ' ಎನ್ನದೆ 'ಇವ ನಮ್ಮವ, ಇವ ನಮ್ಮವ' ಎನ್ನುವ ಭಾವನೆ ಬೆಳೆದು ಬಂತು. ಕನ್ನಡ ಭಾಷೆ ದೇವಭಾಷೆ ಆಯಿತು. ವಿಪ್ರ ಮೊದಲು, ಅಂತ್ಯಜ ಕಡೆಯಾಗಿ ಎಲ್ಲ ಶಿವಭಕ್ತರಾದರು. ಹುಟ್ಟು, ಕುಲ, ಕಸುಬು, ಲಿಂಗ, ವರ್ಣ, ಸಿರಿ, ಪದವಿ, ವಿದ್ಯೆ-ಇಂತಹ ಉಪಾಧಿಗಳಿಂದ ವಿಷಮತೆ ಹರಡಿದ್ದ ಸಮಾಜದಲ್ಲಿ ಸರ್ವ ಸಮಾನತೆಯ ಸುಧೆ ಹರಿಯಿತು ಶರಣರ ಈ ಚಳುವಳಿಯಲ್ಲಿ ಸ್ತ್ರೀಯರೂ, ಪುರುಷರೂ, ಬಡವರು, ಬಲ್ಲಿದರು ಭಾಗಿಗಳಾಗಿ ತೊಳಗಿ ಬೆಳಗಿದರು. 'ದೇಹವೇ ದೇವಾಲಯ' ಆಯಿತು. ಅಗ್ರಹಾರ, ದೇವಾಲಯದ ಸಂಸ್ಕೃತಿಯಿಂದ ಹೊರಗಿದ್ದ ಕೀಳುವರ್ಗದ ಜನರನ್ನು ತಮ್ಮವರೆಂದು ಭಾವಿಸಿ, ಗೌರವಿಸಿ ಶಿವಾನುಭವದ ನೆಲೆಯಲ್ಲಿ ಅವರ ಬಾಳನ್ನು ಶುಚಿಗೊಳಿಸಲು ಪ್ರಯತ್ನಿಸಿದರು. ಇಷ್ಟಲಿಂಗ ಧಾರಣೆಯ ಸಂಸ್ಕಾರ ದೇಗುಲ ಸಂಸ್ಕೃತಿಯ ಹೊರಗೆ ಇದ್ದ ಹೊಸ ಹೆಜ್ಜೆಯಾಯಿತು. ಶರಣರೆಲ್ಲ ಚಲಿಸುವ ದೇವಾಲಯಗಳಾದರು. ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ. ಎಂಬ ತತ್ತ್ವ ಪ್ರತಿಪಾದನೆಯಾಯಿತು. ವಚನ-ಚಳುವಳಿ-ಅದು ನಿಜವಾಗಿಯೂ ಜನತಾ ಚಳುವಳಿಯಾಗಿತ್ತು. ಈ ಚಳುವಳಿಯಲ್ಲಿ ಭಾಗವಹಿಸಿದವರೆಲ್ಲರು ತಮ್ಮ ಕೀಳರಿಮೆಯನ್ನು ಕಳಚಿಕೊಂಡು ಮೊದಲ ಬಾರಿಗೆ ಆತ್ಮಗೌರವ, ಸಾಮಾಜಿಕ ಪ್ರತಿಷ್ಠೆಯನ್ನು ಪಡೆದರು. ವಚನಕಾರರು ಸಮಾನತೆಯ ತತ್ತ್ವವನ್ನು ಬೋಧಿಸುತ್ತಾ, ಸಂಸ್ಕೃತ ಭಾಷೆ, ಯಜ್ಞ, ಯಾಗ, ಚಾತುರ್ವರ್ಣ ಪದ್ಧತಿಗಳನ್ನು, ಪುರೋಹಿತ ಶಾಹಿಯನ್ನು ನಿರಾಕರಿಸಿದರು. ಇದು ಮಧ್ಯಯುಗದ ಯುರೋಪಿಯನ್ ಧಾರ್ಮಿಕ ಚಿಂತನೆಯನ್ನು ಹೋಲುತ್ತದೆ. ಶರಣರೆಲ್ಲ ಗೃಹಸ್ಥರಾಗಿದ್ದರು. ಬದುಕಿನ ಬಗೆಗೆ ಇಹಲೋಕದ ಬಗೆಗೆ ಅವರಿಗೆ ತುಂಬ ಕಾಳಜಿ ಇತ್ತು.

'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು' ಎಂಬುದು ಅವರ ಅಚಲವಾದ ನಂಬಿಕೆ. 'ಸತ್ಯ ನುಡಿವುದೇ ಸ್ವರ್ಗಲೋಕ ಮಿಥ್ಯವ ನುಡಿವುದೇ ನರಕಲೋಕ', 'ಆಚಾರವೇ ಸ್ವರ್ಗ, ಅನಾಚಾರವೇ ನರಕ'ವೆಂದು ಸ್ವರ್ಗ ನರಕಗಳ ಬಗ್ಗೆ ವಿನೂತನವಾದ ವ್ಯಾಖ್ಯಾನ ಮಾಡಿ ಇವೆಲ್ಲಾ ನಮ್ಮಲ್ಲಿಯೇ ಇವೆ ಎಂದು ತಿಳಿಸಿದರು. 'ದೇವನೊಬ್ಬ, ನಾಮ ಹಲವು' ಎಂದು ಏಕೇಶ್ವರ ವಾದವನ್ನು ಸಾರಿದರು. ಸಕಲರಿಗೂ ಲೇಸನ್ನು ಬಯಸುತ್ತಾ, ಹಲವರಿಗೆ ಹೊರೆಯಾಗದೆ ಕೆಲವರಿಗಾದರೂ ನೆರವಾಗಿ ಬದುಕಬೇಕು. ಆಗ ಬದುಕಿಗೂ ಬೆಲೆ, ಬದುಕುವವರಿಗೂ ಬೆಲೆ ಎಂದು ತಾವೂ ಬದುಕಿ ಅದರಂತೆ ನಾವೂ ಬದುಕಲು ದಾರಿ ತೋರಿಸಿದ್ದಾರೆ-ಈ ಶರಣರು. ನಮ್ಮ ನಡೆ-ನುಡಿ ಒಂದಾಗಬೇಕು ಎಂದು ತಿಳಿಸಿ ಆಚಾರದಲ್ಲಿ ಆಚರಣೆಯಲ್ಲಿ

ತಂದು ತೋರಿಸಿದರು. ಹೀಗೆ ಹನ್ನೆರಡನೆಯ ಶತಮಾನದಲ್ಲಿ ಒಂದು ಜನ ಸಮೂಹ ಹೊಸ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ತರಲು ವಚನ ಚಳುವಳಿ ಮೂಲಕ ಹೋರಾಟ ನಡೆಸಿದ್ದು ಕರ್ನಾಟಕದ ಇತಿಹಾಸದಲ್ಲಿ ದಾಖಲೆಯಾದ ಒಂದು ಉಜ್ವಲ ನಿದರ್ಶನ. ಶಿವಭಕ್ತರೆಲ್ಲಾ ಕುಲಜರೆಂದು ಭಾವಿಸಿ ಒಂದು ಸಮೂಹ ಈ ನಾಡಿನಲ್ಲಿ ಒಂದು ಅದ್ಭುತವಾದ ಚಳುವಳಿಯನ್ನು ನಡೆಸಿತು. ಈ ಶಿವಭಕ್ತರೆಲ್ಲ ಶರಣಾದರು. ಅನೇಕ ಶರಣರು ರಚಿಸಿದ ವಚನಗಳು ಕನ್ನಡದ 'ಉಪನಿಷತ್ತು' ಗಳು ಎನ್ನುವ ಗೌರವಕ್ಕೆ ಪಾತ್ರವಾದವು. ವಚನ ಸಾಹಿತ್ಯ ಕನ್ನಡದ ವೈಚಾರಿಕ ಸಾಹಿತ್ಯವಾಯಿತು. ಸುಮಾರು ಮುನ್ನೂರ ಅರವತ್ತು ಜನ, ಅದರಲ್ಲಿ ಮುನ್ನೂರು ಜನ ವಚನಕಾರರು, ಅರವತ್ತು ಜನ ವಚನಕಾರ್ತಿಯರು ತಮ್ಮ ಅಪೂರ್ವ ಆಲೋಚನೆಗಳನ್ನು ಕನ್ನಡದಲ್ಲಿ ವ್ಯಕ್ತಪಡಿಸಿ ಕನ್ನಡವನ್ನು ಬೆಳಗಿಸಿದರು. ಪ್ರಗತಿಪರ, ಇಂದಿಗೂ ಪ್ರಸ್ತುತವೆನಿಸುವ ಚಿಂತನೆಗಳನ್ನು ಇಲ್ಲಿ ಗುರುತಿಸಬಹುದಾಗಿದೆ. ಭಾರತದ ಬಹುಪಾಲು ಭಕ್ತಿ ಚಳುವಳಿಗಳು ಆಧ್ಯಾತ್ಮಿಕವಾಗಿ ಸಮಾನರೆಂದು ಒಪ್ಪಿಕೊಳ್ಳುತ್ತವೆ. ಆದರೆ ಸಾಮಾಜಿಕ ಸಮಾನತೆಯ ಬಗ್ಗೆ ಅವು ಅಷ್ಟು ಕಾಳಜಿವಹಿಸಿದಂತೆ ಕಾಣುವುದಿಲ್ಲ. ಆದರೆ ಶರಣ ಚಳುವಳಿಯಲ್ಲಿ ಮಾತ್ರ ಆಧ್ಯಾತ್ಮಿಕ ಸಮಾನತೆಗೆ ಬೆಲೆ ಬರುವುದು ಸಾಮಾಜಿಕ ಸಮಾನತೆಯಿಂದ ಮಾತ್ರ ಎನ್ನುವ ವಿಚಾರವನ್ನು ಪ್ರತಿಪಾದಿಸಿ ಆಚರಣೆಗೆ ತಂದ ಕೀರ್ತಿ ಶರಣ ಚಳುವಳಿಗೆ ಸಲ್ಲುತ್ತದೆ.

<u>ಹರಿದಾಸ ಚಳುವಳಿ:</u>

ವಿಜಯನಗರದ ವೈಭವದ ಕಾಲ- ಕೃಷ್ಣದೇವರಾಯನ ಆಳ್ವಿಕೆಯ ಕಾಲ- ಹಿಂದೂ ಸಂಸ್ಕೃತಿಯ ಪುನರುದ್ಧಾರಕ್ಕೆ ಹೊಸ ಹುರುಪಿನಿಂದ ಪ್ರಯತ್ನಗಳು ನಡೆಯುತ್ತಿದ್ದವು. ಸಾಯಣರು ವೇಧ ಭಾಷೆಯನ್ನು ರಚಿಸಿದರು. ಸಂಸ್ಕೃತದ ಅನೇಕ ಶಾಸ್ತ್ರಗಳ ವ್ಯಾಸಂಗಕ್ಕೆ ಉತ್ತೇಜನವಿತ್ತು. ಸಂಗೀತ, ನೃತ್ಯ, ವಾಸ್ತುಶಿಲ್ಪ ಮುಂತಾದ ಕಲೆಗಳ ಅಭ್ಯಾಸ ರಾಜರ ಆಶ್ರಯದಲ್ಲಿ ಅಭಿವೃದ್ಧಿಯಾಗುತ್ತಿದ್ದವು. ಸಂಸ್ಕೃತದಲ್ಲಿದ್ದೊ ವಿಷಯಗಳನ್ನು ಜನಸಾಮಾನ್ಯರಿಗೆ ಒದಗಿಸಬೇಕೆಂಬ ಹಂಬಲ ತೀವ್ರವಾಗಿತ್ತು. ಇದು ದಾಸ ಸಾಹಿತ್ಯಕ್ಕೆ ಪ್ರೇರಣೆಯಾಯಿತು. ಕನ್ನಡದಲ್ಲಿ ವಚನ ಚಳುವಳಿಯ ಪ್ರಗತಿಪರ ವಿಚಾರ ಭೋಧನೆಯಿಂದ ದಾಸ ಪಂಥಕ್ಕೆ ಪ್ರಚೋದನೆ ದೊರಕಿದಂತಾಯಿತು. ಕರ್ನಾಟದಲ್ಲಿ ವಚನ ಚಳುವಳಿಯ ನಂತರ ಸುಮಾರು ನಾಲ್ಕು ನೂರು ವರ್ಷಗಳ ಮೇಲೆ ಅಂದರೆ ೧೫-೧೬ನೇ ಶತಮಾನದಲ್ಲಿ ಕಬೀರನು ಉತ್ತರ ಪ್ರದೇಶದಲ್ಲಿ ಮೀರಾಬಾಯಿ, ರಾಜಸ್ಥಾನದಲ್ಲಿ ಚೈತನ್ಯರು; ಬಂಗಾಳದಲ್ಲಿ ತುಕಾರಾಂ; ನಾಮದೇವರು, ಮಹಾರಾಷ್ಟ್ರದಲ್ಲಿ ತ್ಯಾಗರಾಜರು ಆಂಧ್ರದಲ್ಲಿ ಭಕ್ತಿಪಂಥದ ನೇತಾರರಾಗಿ ಭಕ್ತಿ ಚಳುವಳಿ ನಡೆಸಿದರು. ಕರ್ನಾಟಕದಲ್ಲಿ ದಾಸಪಂಥದ ಚಳುವಳಿ ವೈಶಿಷ್ಟ್ಯಪೂರ್ಣವಾಗಿದೆ. ಪುರಂದರ ದಾಸರಿಗಿಂತಲೂ ಪೂರ್ವದಲ್ಲಿ ನರಹರಿ ತೀರ್ಥ, ಶ್ರೀಪಾದತೀರ್ಥರು

ಸಂಸ್ಕೃತದಲ್ಲಿ ಉದ್ದಾಮ ವಿದ್ವಾಂಸರಾಗಿ ಪ್ರಪ್ರಥಮವಾಗಿ ಕನ್ನಡದಲ್ಲಿ ಕೃತಿಗಳನ್ನು ರಚಿಸಿದ್ದು, ಆ ಕಾಲದಲ್ಲಿ ಕ್ರಾಂತಿಕಾರಕ ವಿಚಾರವಾಗಿತ್ತು. ಅನಂತರ ವ್ಯಾಸರಾಯರು, ಪುರಂದರದಾಸರು, ಕನಕದಾಸರು ಇವರೇ ಮೊದಲಾದ ದಾಸರ ಸಮೂಹ ಸಂಗೀತಮಯವಾದ ಕೀರ್ತನೆಗಳನ್ನು ಕನ್ನಡದಲ್ಲಿ ರಚಿಸಿದರು. ಮಾನವ ಜನ್ಮಕ್ಕೆ ಬಂದ ಮೇಲೆ ಹರಿಸೇವೆ ಮಾಡುತ್ತ, ಅವನ ಕರುಣೆಯಿಂದ ಹರಿಗೆ ಸಮರ್ಪಣೆ ಮಾಡಿ ಬದುಕಬೇಕು. ಸಂಸಾರದಲ್ಲಿದ್ದೂ ಅದಕ್ಕೆ ಅಂಟಿಕೊಳ್ಳದಂತಿರಬೇಕು. ಆಡಂಬರ, ಡಾಂಭಿಕತನ ಮೊದಲಾದ ಕರ್ಮಕಾಂಡಗಳನ್ನು ಕೈಬಿಟ್ಟು ಸಿರಿವಂತಿಕೆಗೆ ದಾಸರಾಗದೆ, ಪರಿಶುದ್ಧ ಭಕ್ತಿಯ ಜೀವನವನ್ನು ನಡೆಸಬೇಕು ಎನ್ನುವ ವಿಚಾರಗಳನ್ನು ತಮ್ಮ ಕೀರ್ತನೆಗಳ ಮೂಲಕ ಜನರಿಗೆ ಬೋಧಿಸಿದರು. ಕನ್ನಡ ನುಡಿಯಲ್ಲಿ ಸರಳವಾಗಿ ಜನಸಾಮಾನ್ಯರಿಗೆ ಈ ವಿಚಾರಗಳು ಮುಟ್ಟಿದವು. ಅನೇಕರು ದಾಸ ಪಂಥದ ಚಳುವಳಿಗೆ ಒಲಿದು ಅನುಯಾಯಿಗಳಾದರು. ಎಲ್ಲರೂ ಹರಿದಾಸರಾದರು. ಈ ಹರಿದಾಸರು ಸಮಾಜ ಸುಧಾರಣೆಯ ವಿಚಾರಗಳನ್ನು ಜನರಿಗೆ ತಿಳಿಸಿದರು. ಅನೇಕರು ವ್ಯಕ್ತಿಗತ ಕಾರಣಗಳಿಂದಲೂ ದಾಸಪಂಥಕ್ಕೆ ಸೇರಿದರು. ಆದರೆ ದಾಸರು ಹೊಸ ಸಮಾಜದ ರಚನೆಗಾಗಿ, ಸಮಾಜದ ಪರಿವರ್ತನೆಗಾಗಿ ದುಡಿಯುತ್ತೇವೆ ಎಂದು ಹೇಳಲಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ಹರಿಯಲ್ಲಿ ಶ್ರದ್ಧೆಯನ್ನಿಟ್ಟು ಶುದ್ಧವಾದ ಜೀವನವನ್ನು ನಡೆಸಿ ಸದ್ಗತಿಯನ್ನು ಪಡೆದರೆ ಸಾಕು ಎಂದು ತಿಳಿಸಿದರು. ವ್ಯಕ್ತಿ ಒಳ್ಳೆಯವನಾದರೆ ಸಮಾಜ ಒಳ್ಳೆಯದಾಗುತ್ತದೆ ಎಂದು ಅವರ ನಂಬಿಕೆಯಾಗಿತ್ತು. ಆದರೂ ಪೂರ್ಣ ಪ್ರಮಾಣದ ಸಾಮಾಜಿಕ ಚಳುವಳಿಯಾಗಲಿಲ್ಲ. ಜಾತಿ, ಮತ, ಉಚ್ಚ, ನೀಚ, ಸಿರಿವಂತ, ಬಡವ ಎನ್ನುವ ಸಮಾಜದ ತಾರತಮ್ಯಗಳನ್ನು ಅವರು ಖಂಡಿಸಿದರು.

'ಹಾಡಿದರೆ ಎನ್ನೊಡೆಯನ ಹಾಡುವೆ, ಬೇಡಿದರೆ ಎನ್ನೊಡೆಯನ ಬೇಡುವೆ' ಎಂದು ಹರಿಯಲ್ಲಿ ಅಚಲ ಭಕ್ತಿಯನ್ನಿಟ್ಟಿದ್ದರು ಮತ್ತು 'ಅಲ್ಲಿದೆ ನಮ್ಮ ಮನೆ, ಇಲ್ಲಿ ಬಂದೆವು ಸುಮ್ಮನೆ' ಎಂದು ಜನರನ್ನು ಎಚ್ಚರಿಸಿದರು. ದಾಸರು ಹೇಳಿದ ಮಧುಕರ ವೃತ್ತಿ (ಭಿಕ್ಷಾಟನೆ) ಸಮಾಜದೊಂದಿಗೆ ಅವರನ್ನು ಬೆಸೆಯಲು ಸಾಧನವಾಯಿತು. ಅದನ್ನೇ ಅವರು ವೃತ್ತಿಯನ್ನಾಗಿ ಹಿಡಿದರು. ಹಾದಿ ಬೀದಿಗಳಲ್ಲಿ ಗೆಜ್ಜೆ ಕಟ್ಟಿಕೊಂಡು ತಾಳ, ತಂಬೂರಿ ಹಿಡಿದು ಮನೆ ಮನೆಗೆ ಭಿಕ್ಷೆಗೆ ಹೋಗುವಾಗ ಸಮಾಜದ ಲೋಪ ದೋಷಗಳನ್ನು ಕಾಣ್ಣಾರೆ ಕಂಡು ತಮ್ಮ ಕೀರ್ತನೆಗಳಲ್ಲಿ ಜನರ ಅಜ್ಞಾನ, ಸ್ವಾರ್ಥ, ಡಾಂಭಿಕತನವನ್ನು ತಮಗೆ ಕಂಡಂತೆ ಹೇಳಿ ಜನರನ್ನು ತಿದ್ದಲು ಯತ್ನಿಸಿದರು.

ವೈಷ್ಣವ ಧರ್ಮದ ತಿರುಳು ಸಾಮಾನ್ಯ ಜನರನ್ನು ತಲುಪಬೇಕಾದರೆ ಜನರಾಡುವ ಭಾಷೆಯಲ್ಲಿ ಹೇಳಬೇಕು ಎಂಬುದನ್ನು ಅವರು ಮನಗಂಡರು. ಇದಕ್ಕೆ ನಾಂದೀ ಹಾಡಿದವರು ನರಹರಿತೀರ್ಥರು; ಶ್ರೀಪಾದ ತೀರ್ಥರು ಹಾಗೂ ವ್ಯಾಸರಾಯರು. ಈ ವಿವೇಕ ಅವರಿಗೆ ಬಂದುದು ಕನ್ನಡದ ಭಾಗ್ಯ. ಜನಮನವನ್ನು ತಿದ್ದಲು ಕೀರ್ತನ

ಪದ್ಧತಿಯನ್ನು ಬೆಳೆಸಿ, ಅವುಗಳ ಮೂಲಕ ತತ್ತ್ವಗಳ ಸಾರವನ್ನು ಜನಸಾಮಾನ್ಯರಿಗೆ ತಲುಪಿಸಿದರು. ಈ ಕೀರ್ತನ ಪ್ರಸಾರಕ್ಕೆ ಒಂದು ಭಕ್ತರ ತಂಡವನ್ನೇ ಕಟ್ಟಿದರು. ಹೀಗೆ ಕಟ್ಟಿದ ಭಕ್ತರ ಸಮೂಹವೇ ದಾಸಕೂಟ-ಎನಿಸಿತು. ಶ್ರೀಪಾದರಾಯರು ಅವರ ಶಿಷ್ಯರಾದ ವ್ಯಾಸರಾಯರು ಕನ್ನಡದಲ್ಲಿ ಕೀರ್ತನೆಯನ್ನು ರಚಿಸಿದರು. ಈ ಪರಂಪರೆಯೇ ಉಳಿದ ದಾಸರಲ್ಲೂ ಮುಂದುವರಿಯಿತು. ಆದರೆ ಈ ಕಾರ್ಯ ಮಠ, ದೇಗುಲಗಳಿಗೆ ಮಾತ್ರ ಸೀಮಿತವಾಗದೆ. ಜನರ ನಡುವೆ ಅವರ ಮನೆ ಮನೆ ಬಾಗಿಲುಗಳಿಗೆ ವೈಷ್ಣವ ಧರ್ಮದ ಸಾರವನ್ನು ತಲುಪಿಸಿಲು ದಾಸರಿಗೆ ಆದೇಶ ನೀಡಿದರು. ಭಕ್ತಿಯೇ ದಾಸಕೂಟದ ಕೇಂದ್ರ ಬಿಂದು ಆಗಿತ್ತು. ಹರಿದಾಸರು ವೇದಾಗಮಗಳನ್ನು ಬಲ್ಲವರಾಗಿದ್ದರು ಮತ್ತು ಭಕ್ತಿ, ಭಾವ, ವೈರಾಗ್ಯಗಳ ತ್ರಿವೇಣೀ ಸಂಗಮವಾಗಿದ್ದರು. ದಾಸಕೂಟವನ್ನು ಕಟ್ಟುವಾಗ ವ್ಯಾಸ ರಾಯರು ಜಾತಿ, ಕುಲಗಳನ್ನು ಗಮನಸಲಿಲ್ಲ. ಕನಕದಾಸನ ಜಾತಿಯನ್ನು ನೋಡದೆ ಅವನ ದೈವಭಕ್ತಿ, ಜ್ಞಾನವನ್ನು ಗುರ್ತಿಸಿ ದೀಕ್ಷೆ ಕೊಡುತ್ತಾರೆ. ವ್ಯಾಸರಾಯರಿಂದ ದೀಕ್ಷೆಯನ್ನು ಪಡೆದ ಪುರಂದರ, ಕನಕರು ತಮ್ಮ ದಿವ್ಯ ಬೋಧೆಯನ್ನು ತಿರುಳು ಕನ್ನಡದಲ್ಲಿ ಜನರಿಗೆ ತಲುಪಿಸಿಲು ದೀಕ್ಷಾಬದ್ಧರಾಗಿ ಕೆಲಸ ಮಾಡಿದರು. ಹಿಂದೆ ಕನ್ನಡವು ಬ್ರಾಹ್ಮಣರ ಮಠಗಳಲ್ಲಿ ಬಳಕೆಯಲ್ಲಿರಲಿಲ್ಲ. ಸ್ನಾನ ಮಾಡುವಾಗ ಕನ್ನಡ ಬಳಸಿದರೆ ಅದು ಮೈಲಿಗೆ ಎನ್ನುವ ಮನೋಭಾವವಿತ್ತು. ನರಹರಿತೀರ್ಥ, ಶ್ರೀಪಾದತೀರ್ಥರಿಂದ ಈ ಭಾವನೆ ಕಡಿಮೆಯಾಗುತ್ತಾ ಬಂತು.

ಹರಿದಾಸ ಪಂಥದವರಲ್ಲಿ ಕೆಲವರು ಒಲವಿನಿಂದ ದಾಸಕೂಟಕ್ಕೆ ಸೇರಿದವರಿದ್ದರು. ಮತ್ತೆ ಕೆಲವರು ಜೀವನದ ದುರ್ಘಟನೆಗಳನ್ನು ಸಹಿಸಲಾಗದೆ ಸೇರಿದವರೂ ಇದ್ದರು. ಉದಾಹರಣೆಗಾಗಿ: ಪುರಂದರ ದಾಸರು ಹೆಂಡತಿಯ ಮೂಗುತಿಯ ಘಟನೆಯಿಂದ ಹರಿಯ ಹಿರಿಮೆಗೆ ಮಣಿದು ಹರಿದಾಸರಾದರು.

ಹರಿಯ ಕರುಣೆಯಿಂದ ತಿಮ್ಮಪ್ಪ ಕನಕನಾದ. ಹರಿದು ತಿನ್ನುವ ಬಡತನಕ್ಕೆ ಹೇಸಿ ದಾಸಪ್ಪ ವಿಜಯದಾಸನಾದ. ಬಡತನದಲ್ಲಿ ಬೆಂದು ಸಾಕಾಗಿ ಪ್ರಸನ್ನ ವೆಂಕಟದಾಸ ಹರಿದಾಸನಾದ. ಜಗನ್ನಾಥದಾಸ ಕ್ಷಯರೋಗದಿಂದ ಪಾರಾಗಿ ಸಾಕು ಸಾಕಾಗಿ ದಾಸಕೂಟ ಸೇರಿದ. ಹೀಗೆ ಅವರವರ ಜೀವನ ಸಂದರ್ಭ, ಸನ್ನಿವೇಶಗಳಿಗನುಕೂಲವಾಗಿ ದಾಸರಾದರು. ಹರಿದಾಸರು ವೈರಾಗ್ಯದ ಉಪದೇಶ ಮಾಡುವಾಗ ವಸ್ತುಸ್ಥಿತಿಯನ್ನು ಮರೆಯಲಿಲ್ಲ. ವಾಸ್ತವ ಬದುಕಿಗೂ ಒತ್ತುಕೊಟ್ಟರು. 'ಹೋಗದೂರಿನ ದಾರಿ ಕೇಳಿ ಮಾಡುವುದೇನು?' ಎಂದು ಪರಲೋಕದ ವಿಚಾರವನ್ನು ಅಲ್ಲಗಳೆದರು. ವ್ಯಕ್ತಿಯ ಚಾರಿತ್ರ್ಯದಿಂದ ಸಮಾಜ ನಿರ್ಮಲವಾಗಿರುತ್ತದೆ. ಇಲ್ಲಿ ಒಳ್ಳೆಯವರಾಗಿ ಬಾಳಿದರೆ ಸದ್ಗತಿ ಸಾಧ್ಯ ಎನ್ನುವ ವಿಚಾರವನ್ನು ಪರ್ಯಾಯವಾಗಿ ತಿಳಿಸುತ್ತಾ 'ಬುತ್ತಿ ಕಟ್ಟೋ ಮನುಜ ಬುತ್ತಿ ಕಟ್ಟಿದರೆ ಎತ್ತಲಾದರೂ ಉಣಬಹುದು' ಎಂದು ಜನರಿಗೆಲ್ಲ ಉಪದೇಶ ಮಾಡಿದರು.

ಪುರಂದರ, ಕನಕದಾಸರು 'ಕುಲಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯ ಏನಾದರೂ ಬಲ್ಲಿರಾ?' ಎಂದು ಪ್ರಶ್ನಿಸಿ, 'ಕುಲವಿಲ್ಲ ಜ್ಞಾನಿಗಳಿಗೆ' ಮತ್ತು 'ಆವ ಕುಲವಾದರೇನು ಆತ್ಮಭಾವವರಿತಮೇಲೆ' ಎಂದು ಕುಲದ ಹಂಗನ್ನು ತೊರೆದು ಬಾಳಲು ತಿಳಿಸುತ್ತಾರೆ. ಸಮಾಜದ ಮೇಲುವರ್ಗದ ರೀತಿ-ನೀತಿಗಳನ್ನು ವಿಮರ್ಶಿಸಿ ಜನಸಾಮಾನ್ಯರ ಕಷ್ಟ ಸುಖಗಳಲ್ಲಿ ಅನುತಾಪವನ್ನು ತೋರಿದರು. ಮೇಲುವರ್ಗದವರು ಗುಡಿ ದೇವಾಲಯ, ಮಠಗಳನ್ನು ತಮ್ಮ ಸೊತ್ತಾಗಿರಿಸಿಕೊಂಡಿದ್ದರು. ಕೆಳವರ್ಗದ ಜನರು ಮಾರಿ, ದುರ್ಗಿ ಚೌಡಿ ಮುಂತಾದ ಶುದ್ರ ದೇವತೆಗಳನ್ನು ನಂಬಿ ಅವುಗಳ ಭೀತಿಯಲ್ಲಿ ಪ್ರಾಣಬಲಿ ಕೊಡುತ್ತಿರುವ ದುಸ್ಥಿತಿಯನ್ನು ಕಂಡು ಕನಿಕರಿಸಿದ್ದಾರೆ. ಮತ್ತು ಇದರಿಂದ ಶ್ರೀಸಾಮಾನ್ಯರನ್ನು ಬಿಡುಗಡೆ ಮಾಡಿ ಹರಿಯ ಕೃಪೆಗೆ ಪಾತ್ರರಾಗಿರಿ ಎಂದು ಒತ್ತಿ ಹೇಳಿದರು. ಹೀಗೆ ಕರ್ನಾಟಕದಲ್ಲಿ ಶರಣ ಚಳುವಳಿಯ ನಂತರ ನಾಲ್ಕು ನೂರು ವರ್ಷಗಳ ಮೇಲೆ ಮಧ್ಯಕಾಲೀನ ಧಾರ್ಮಿಕ ಪರಿಸ್ಥಿತಿಯಲ್ಲಿ ದಾಸರು ಸಮಾಜದಿಂದ ಪೂರ್ಣ ವಿಮುಖರಾಗದೆ ಹಳಿ ತಪ್ಪಿದ ಈ ಸಮಾಜವನ್ನೂ, ಜನ ಸಮೂಹವನ್ನೂ ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯುವ ಹರಿಕಾರರಾಗಿ ವರ್ತಿಸಿದರು. ಕರ್ನಾಟಕದಲ್ಲಿ ಹರಿದಾಸರ ಚಳುವಳಿ ಈ ನಿಟ್ಟಿನಲ್ಲಿ ವೈಶಿಷ್ಟ್ಯಪೂರ್ಣವಾದ ಚಳುವಳಿಯಾಗಿದೆ.

❖

೩. ಮಹಾರಾಷ್ಟ್ರದಲ್ಲಿ ಭಕ್ತಿಚಳುವಳಿಗಳು

ಭಕ್ತರು ದೇವರ ಪಟ್ಟಣದ ಪೌರರು. ಅವರ ಭಕ್ತಿ ಪ್ರಭಾವ ಪ್ರಾಂತ ಮತ್ತು ರಾಷ್ಟ್ರಗಳ ಗಡಿಯನ್ನು ಮೀರಿದ್ದು. ದೈವಭಕ್ತರ ಭಾಷೆ ಬೇರೆ ಆದರೂ ಅವರ ವಿಚಾರಗಳು ಮಾತ್ರ ಒಂದೇ ಆಗಿವೆ. ಅವರೆಲ್ಲರ ಚಿಂತನೆಗಳ ಕೇಂದ್ರ ಭಗವಂತನೇ ಆಗಿದ್ದಾನೆ. ಭಕ್ತರು ಜಗತ್ತಿನ ನೈತಿಕ, ಧಾರ್ಮಿಕ ಸಂಸ್ಕೃತಿಯ ಪ್ರಗತಿಯ ಪರಿಪಕ್ವ ಫಲಗಳು. ಜಗತ್ತಿಗೆ ಅವರು ಜ್ಞಾನದ ಬೆಳಕನ್ನು ನೀಡಿ ಹೋಗಿದ್ದಾರೆ. ಹದಿಮೂರನೆಯ ಶತಮಾನದಿಂದ ಹದಿನೇಳನೆ ಶತಮಾನದವರೆಗೆ ಸುಮಾರು ಐನೂರು ವರ್ಷಗಳ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ ನಡೆದ ಭಾಗವತ ಚಳುವಳಿಗೆ 'ವಾರಕರಿ ಸಂಪ್ರದಾಯ' ಎಂದು ಕರೆಯುತ್ತಾರೆ. ಪಂಡರಾಪುರದ ವಿಠೋಬನು ಅಥವಾ ಪುಂಡಲೀಕನು, ಆ ಸಂಪ್ರದಾಯದ ದೇವರು. ವಾರಕರಿ ಪಂಥ ಮಹಾರಾಷ್ಟ್ರದ ಭಕ್ತಿಪಂಥ, ಪಂಡರಾಪುರ ಮಹಾರಾಷ್ಟ್ರದ ಕಾಶಿ ಎಂದು ಜನರಲ್ಲಿ ನಂಬಿಕೆ. ವಾರೀ=ಯಾತ್ರಾ, ಕರೀ=ಕರ್ನೇವಾಲಾ (ಅಂದರೆ ಮಾಡುವವನು) ಎಂದರೆ ವಿಠಲನ ಯಾತ್ರಿಕರಿಗೆ 'ವಾರಕರಿ'ಗಳು ಎಂದು ಹೆಸರು. ಒಂದು ವರ್ಷದಲ್ಲಿ ಭಕ್ತರು ಎರಡು ಬಾರಿ ಯಾತ್ರೆಗೆ ಹೋಗುತ್ತಾರೆ. ಅಷಾಢ ಏಕಾದಶಿ ಮತ್ತು ಕಾರ್ತೀಕ ಏಕಾದಶಿ ಬೇರೆ ಬೇರೆ ಜಾತಿಯ ಜನ ತಮ್ಮ ತಮ್ಮ ಜಾತಿಯ ಅಭಿಮಾನ ಬಿಟ್ಟು ಈ ಯಾತ್ರೆಯಲ್ಲಿ ' ನಾಮ ಸಂಕೀರ್ತನ'ದಲ್ಲಿ ಪಾಲುಗೊಳ್ಳುತ್ತಾರೆ. ಭಗವಂತನಿಗೆ ಎಲ್ಲವನ್ನು ಅರ್ಪಿಸುವ ಭಾವನೆ ಉಳ್ಳವರಾದ್ದರಿಂದ ಇವರಿಗೆ 'ಭಾಗವತ ಪಂಥ' ವೆಂದೂ ಕರೆಯುತ್ತಾರೆ. ವಿಠಲ ಮೂರ್ತಿಯ ಕೈಯಲ್ಲಿ ಶ್ರೀ ವಿಷ್ಣು ಚಕ್ರ ಮತ್ತು ಕಮಲವಿದೆ. ಶಿರದ ಮೇಲೆ ಶಿವಲಿಂಗವಿದೆ. ಆದ್ದರಿಂದ ಶೈವವೈಷ್ಣವರಿಬ್ಬರಿಗೂ ಇದು ಪೂಜ್ಯವಾಗಿದೆ. ಈ ಪಂಥದ ಇತಿಹಾಸ ಕ್ರಿ. ಶ. ಹನ್ನೆರಡರಿಂದ ಹದಿನೇಳವರೆಗೂ ಇದೆ. ಭಕ್ತರು ಭಗವಂತನನ್ನು ಪ್ರೇಮಸ್ವರೂಪದಲ್ಲಿ ಕಾಣುತ್ತಾರೆ. ವಾರಕರಿ ಸಂಪ್ರದಾಯದ ಭಕ್ತರಿಗೆ ಪಂಡರಾಪುರವೇ ಸುಕ್ಷೇತ್ರವಾಗಿದೆ. ಕತ್ತಿನಲ್ಲಿ ತುಳಸೀ ಮಾಲೆ, ಕೈಯಲ್ಲಿ ಧ್ವಜ, ಹಣೆಯಲ್ಲಿ ಗೋಪೀಚಂದನ ಮತ್ತು ಕಪ್ಪು ಚುಕ್ಕೆ ಇವು ಮಂಗಲ ಚಿಹ್ನೆಗಳು. ರಾಮ, ಕೃಷ್ಣ, ಹರಿ ಅವರ ಮಂತ್ರ.

ನಾಮ ಸಂಕೀರ್ತನೆ ಭಕ್ತಿ ಸಾಧನೆಯಲ್ಲಿ ಸುಲಭ ಸರಳವೆಂದು ಅವರ ನಂಬಿಕೆ.

ಎಲ್ಲರನ್ನೂ ಸಮ ಭಾವನೆಯಿಂದ ಕಾಣುವುದು ಸತ್ಯ ನುಡಿವುದು, ಸ್ತ್ರೀಯರನ್ನು ಗೌರವಿಸುವುದು, ಪರಧನವನ್ನು ಉಪೇಕ್ಷಿಸುವುದು, ಮೃದು ಮಾತು ಪರೋಪಕಾರ, ಮದ್ಯ, ಮಾಂಸ ವರ್ಜನೆ, ಶುದ್ಧ ಆಹಾರ- ಆಚರಣೆಗೆ ಕೊಡುವುದು ಇವು ಅವರು ಪಾಲಿಸಬೇಕಾದ ನಿಯಮಗಳು. ಇವರಿಗೆ ಪೂಜ್ಯ ಗ್ರಂಥ 'ಜ್ಞಾನೇಶ್ವರಿ' ಮತ್ತು 'ಅಭಂಗಗಳು'. ಮಹಾರಾಷ್ಟ್ರದಲ್ಲಿ ನಡೆದ ಈ ಭಾಗವತ ಚಳುವಳಿಯಲ್ಲಿ ಮೊದಲು ಬ್ರಾಹ್ಮಣರಿಂದ ಮೊದಲುಗೊಂಡು ಹಲವಾರು ಜಾತಿಯ ಭಕ್ತರು ಭಾಗವಹಿಸಿದ್ದರು. ಪ್ರಸಿದ್ಧಿಯನ್ನು ಪಡೆದ ಇಪ್ಪತ್ತೊಂದು ಜನ ವಾರಕರಿಗಳಲ್ಲಿ ಹತ್ತು ಜನ ಬ್ರಾಹ್ಮಣರು. ಉಳಿದವರು ಬ್ರಾಹ್ಮಣೇತರರು. ಈ ಗುಂಪಿನಲ್ಲಿ ಇಬ್ಬರು ಮಹಿಳೆಯರೂ ಮತ್ತು ಇಬ್ಬರು ಹರಿಜನರು ಇದ್ದಾರೆ. ಜ್ಞಾನದೇವ ಮತ್ತು ಏಕನಾಥರು ಬ್ರಾಹ್ಮಣರು, ನಾಮದೇವ- ಸಿಪಿ; ಗೋರ-ಕುಂಬಾರ; ತೋಟಿಗ-ಸಾವರ್; ಕ್ಷೌರಿಕ- ಸೇನ; ಕುಣಬಿ-ತುಕಾರಾಮ ಮತ್ತು ಮಹಾರ್-ಜೋಕಮೇಲ ಇತ್ಯಾದಿ. ಇವರೆಲ್ಲ ದೀನ ದಲಿತರಲ್ಲಿ ತೋರಿದ ಪ್ರೀತಿ-ವಿಶ್ವಾಸ, ಔದಾರ್ಯಗಳು, ಜಾತಿಪದ್ಧತಿ ಖಂಡನೆ, ದೈವಭಕ್ತಿ, ಸಮಾನತೆ, ಮೇಲುವರ್ಗದವರ ವಿಡಂಬನೆಯ ಧ್ವನಿಗಳು, ಅವರು ಹಾಡಿದ ಅಭಂಗಗಳಲ್ಲಿ ಸ್ಪಷ್ಟವಾಗಿ ಕಾಣತ್ತದೆ. ವಾರಕರಿ ಭಕ್ತಿ ಚಳುವಳಿ ಪ್ರಧಾನವಾಗಿ ಧಾರ್ಮಿಕ ಚಳುವಳಿ ಆಗಿದೆ. ತಮ್ಮ ಕಾಲದ ಸಾಮಾಜಿಕ ಜೀವನದಲ್ಲಿ ತೀವ್ರವಾದ ವೈಷಮ್ಯಗಳಿದ್ದರೂ, ಅವು ಲೌಕಿಕ ವಿಷಯಗಳೆಂದು ಉದಾಸೀನ ಮಾಡುತ್ತಿದ್ದರು. ವಾರಕರಿಗಳು ಹಾಡಿದ ಭಕ್ತಿಗೀತೆಗಳ ಮುಖ್ಯ ಉದ್ದೇಶ ಪಂಡರಾಪುರದ ವಿಠಲನ ಕಾರುಣ್ಯವನ್ನು ಪಡೆವುದೇ ಆಗಿತ್ತು. ಎಲ್ಲ ಸಮಸ್ಯೆಗಳ ಮೂಲ ಮನುಷ್ಯ. ಅವನು ದೈವಭಕ್ತಿಯಿಂದ ಪರಿಶುದ್ಧನಾದರೆ ಸಾಕು. ನೀತಿವಂತನಾದರೆ ಸಾಕು. ಎಲ್ಲ ಸಮಸ್ಯೆಗಳು ಅಲ್ಲಿಯೇ ಪರಿಹಾರ ಎನ್ನುವ ಭಾವನೆ ಅವರದಾಗಿತ್ತು. ಈ ಭಕ್ತಿ ಚಳುವಳಿ ಮಹಾರಾಷ್ಟ್ರದ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿ ಜನಗಳಲ್ಲಿ ದೈವಭಕ್ತಿ, ಪ್ರೀತಿ, ಕರುಣೆ, ದಯೆ, ವಿನಯ ಮುಂತಾದ ಮಾನವೀಯ ಗುಣ ಮೌಲ್ಯಗಳನ್ನು ಪ್ರಚಾರ ಮಾಡಿದ್ದಿತು. ಈ ಚಳುವಳಿ ಹಿಂದೂ ಸಮಾಜದಲ್ಲಿ ಸಂಘಟನೆಗೆ ಕಾರಣವಾಯಿತು. ಧಾರ್ಮಿಕ, ಸಾಂಸ್ಕೃತಿಕ ರಂಗದಲ್ಲಿ ಅಭಿವೃದ್ಧಿಯನ್ನು ಸಾಧಿಸಿತು.

'ವಾರಕರಿ'- ಸಂಪ್ರದಾಯದ ಪ್ರಮುಖ ವ್ಯಕ್ತಿ ಜ್ಞಾನದೇವ. ಈತನು ವೇದಗಳ ಪವಿತ್ರತೆಯನ್ನು ವರ್ಣಾಶ್ರಮ ಧರ್ಮವನ್ನು ಗೌರವಿಸಿದರೂ, ಎಲ್ಲರನ್ನೂ ಸಮಾನವಾಗಿ ಕಾಣುತ್ತಾನೆ. ಈತನು ಬ್ರಾಹ್ಮಣನಾಗಿದ್ದರೂ ಇತರ ಸಂತರ ಪಾದಮುಟ್ಟಿ ನಮಸ್ಕರಿಸುತ್ತಿದ್ದ. ನಾಮ ಸಂಕೀರ್ತನದಲ್ಲಿ ಎಲ್ಲರೂ ಭಾಗವಹಿಸುತ್ತಿದ್ದರು. ಜಾತಿ ನಿರಪೇಕ್ಷಾ ಭಾವನೆಗೆ ಇದೊಂದು ಉತ್ತಮ ಉದಾಹರಣೆ. ಏಕನಾಥನು ಪ್ರಭಾವಶಾಲಿಯಾದ ವಾರಕರಿ. ಮಹಾರ್ ಜೋಕಮೇಲು ಏಕನಾಥನ ಪರಮ ಮಿತ್ರನಾಗಿದ್ದ. ಏಕನಾಥ ಬ್ರಾಹ್ಮಣನಾಗಿದ್ದರೂ ಹರಿಜನರ ಬಗ್ಗೆ ಆತನಿಗೆ ತುಂಬಾ

ಅನುಕಂಪವಿತ್ತು. ಅವನು ಹರಿಜನರ ಬಗ್ಗೆ ಪ್ರೇಮ, ಸಹೃದಯತೆಯನ್ನು ವ್ಯಕ್ತಪಡಿಸಲು ಸುಮಾರು ಮುನ್ನೂರು ಭಕ್ತಿಗೀತೆಗಳನ್ನು ಹಾಡಿದ್ದಾನೆ. ಮಹಾರ್ ಜೋಕಮೇಲನ ಗೀತೆಗಳನ್ನು ಹಿಂದುಳಿದವರ ಬಗ್ಗೆ ಮೇಲುವರ್ಗದವರ ಅವಹೇಳನ ಮತ್ತು ತಿರಸ್ಕಾರ ದೃಷ್ಟಿ ಅಭಿವ್ಯಕ್ತವಾಗಿದೆ. ಅವನು ತನ್ನ ಮಹಾರನ್ ಭಾಷೆಯಲ್ಲಿ ಧರ್ಮ ಪ್ರಚಾರ ಮಾಡಿದ. ಈ ಭಾಗವತ ಭಕ್ತರಲ್ಲಿ ವಿಭಿನ್ನ ಸ್ವಾಭಾವದರ ಜನರಿದ್ದರು. ಹೆಚ್ಚಾಗಿ ಗೃಹಸ್ಥರೇ ಆಗಿದ್ದರು. ಕೆಲವರಿಗೆ ವಿಠಲನ ಬಗ್ಗೆ ಅತೀವ ನಿಷ್ಠೆ. ಭಕ್ತಿಯ ಅತಿಶಯ ಭಾವನೆಯಲ್ಲಿ ತಮ್ಮ ಕುಟುಂಬ ಜೀವನವನ್ನು ಕಡೆಗಾಣಿಸಿದವರೂ ಇದ್ದರು. ಹೆಂಡಿರು. ಮಕ್ಕಳು ಮನೆಯಲ್ಲಿ ಉಪವಾಸದಿಂದ ಬಳಲುತ್ತಿದ್ದರೂ ಅವರನ್ನು ಲಕ್ಷಿಸುತ್ತಿರಲಿಲ್ಲ. ಉದಾಹರಣೆಗೆ ನಾಮದೇವನ ತಾಯಿ ಹೇಳುತ್ತಾಳೆ: 'ಮಗುವೆ, ದೇವರ ಮೇಲಿನ ಹುಚ್ಚನ್ನು ಬಿಡು. ನಿನ್ನ ಕುಟುಂಬವನ್ನು ಹಾಳುಮಾಡಬೇಕೆಂದಿರುವೆಯಾ? 'ಎಂದೆಲ್ಲ ಗೋಳಾಡುತ್ತಾಳೆ. ಆಕೆ ಹೇಳುತ್ತಾಳೆ: 'ತೊಡಲು ಬಟ್ಟೆಯಿಲ್ಲ, ಅಡುಗೆ ಮಾಡಲು ಪಾತ್ರೆಗಳಿಲ್ಲ, ಉಣಲು ಮನೆಯಲ್ಲಿ ಬರಿದಾಗಿದೆ. ಅದೊಡೆಯು ನಾಚಿಕೆ ಇಲ್ಲದೆ ನಮ್ಮ ನಾಮದೇವರು ದಿನಾರಾತ್ರಿ ಕುಣಿಯುತ್ತಿರುವರು' ಎಂದು. ಹೀಗೆ ತಮ್ಮ ಕುಟುಂಬದ ಕಷ್ಟ ಕಾರ್ಪಣ್ಯಗಳನ್ನು ಬದಿಗೊತ್ತಿ ಭಕ್ತಿ ಪರವಶತೆಯಿಂದ ನಾಮದೇವರು ತನ್ನ ಜೀವನದುದ್ದಕ್ಕೂ ಅಭಂಗಗಳನ್ನು ಹಾಡಿದ್ದಾನೆ. ತುಕಾರಾಮನು ಸಹ ಹೆಂಡತಿ ಮಕ್ಕಳು ಹೊಟ್ಟೆಗಿಲ್ಲದೆ ಬಳಲಿ ಸಾವನ್ನಪ್ಪುವ ಸ್ಥಿತಿಯಲ್ಲಿದ್ದರೂ ಆ ಕಡೆಗೆ ತಮ್ಮ ಗಮನವನ್ನು ಹರಿಸುತ್ತಿರಲಿಲ್ಲ. ದೈವಭಕ್ತಿಯಲ್ಲಿ ತಲ್ಲೀನನಾಗಿ ತಮ್ಮ ಕುಟುಂಬವನ್ನೇ ಅಲಕ್ಷಿಸಿದ್ದ. ಈ ಭಾಗವತ ಭಕ್ತರಲ್ಲಿ ಜಾತಿ ಶ್ರೇಣಿಯ ಕೆಳಗಿನ ಅಂಚಿನಲ್ಲಿ ನಿಂತವನು. ಮಹಾರ್ ಜಾತಿಗೆ ಸೇರಿದ್ದ ಜೋಕಮೇಲ ಸತ್ತ ದನಗಳನ್ನು ಹೊತ್ತು ಊರ ಹೊರಗೆ ಹಾಕುವುದು, ಊರಿನ ಸಾರ್ವಜನಿಕ ಮಂದಿರಗಳ ಗೋಡೆಗಳನ್ನು ದುರಸ್ತಿ ಮಾಡುವುದು ಅವನ ಕಾಯಕವಾಗಿತ್ತು. ಆದರೂ ವಾರಕರಿ ಭಕ್ತರು ಆತನನ್ನು ಪ್ರೀತಿ ಗೌರವಗಳಿಂದಲೇ ಕಾಣುತ್ತಿದ್ದರು. ಹೀನ ಜಾತಿಯವನೂ, ಕಡು ಬಡವನೂ ಆದ 'ಜೋಕಮೇಲ' ಎರಡು ನೂರ ಹನ್ನೊಂದು ಅಭಂಗಗಳನ್ನು ಹಾಡಿದ್ದಾನೆ. ಅವನ ಹಾಡಿನಲ್ಲಿ ಮಹಾರ್‌ರ ನೋವು, ನಲಿವು, ಸಂಕಟಗಳು ತುಂಬಿ ತುಳುಕುತ್ತವೆ. ಈ ಭಾಗವತ ಪಂಥದ ಭಕ್ತರಲ್ಲಿ ಸ್ವಭಾವದಲ್ಲಿ ಭಿನ್ನತೆಯಿತ್ತು. ಬುದ್ಧಿ ಪ್ರಧಾನ ಜ್ಞಾನದೇವ, ಪ್ರಜಾಪ್ರಭುತ್ವವಾದಿ ನಾಮದೇವ, ಸಮಾನತೆಗೆ ಏಕನಾಥ, ವ್ಯಕ್ತಿಗತ ವಾದಕ್ಕೆ ತುಕಾರಾಮ, ಕರ್ಮ ಪ್ರಧಾನತೆಗೆ ರಾಮದಾಸರು ಎಂದು ಅವರ ಸ್ವಭಾವ ವೈವಿಧ್ಯತೆಯನ್ನು ಕುರಿತು ಆರ್. ಡಿ. ರಾನಡೆಯವರು ತಿಳಿಸುತ್ತಾರೆ. ತುಕಾರಾಮ ಹೇಳುತ್ತಾನೆ. 'ಭಗವಂತ ಇದ್ದಾನೆ ಎಂದು ಹೊರಗೆ ಹೇಳಬೇಕು. ಆದರೆ ಅವನು ಇಲ್ಲ ಎಂಬ ಬಗ್ಗೆ ಅಂತರಂಗದಲ್ಲಿ ದೃಢವಾದ ನಂಬಿಕೆ ಇರಬೇಕು' ಅಂದರೆ ಅವನ ಅಭಿಪ್ರಾಯದಲ್ಲಿ ದೇವರು ವಸ್ತುತಃ ನಮ್ಮ ಆತ್ಮವೇ ಈ ಜೀವಾತ್ಮ, ಪರಮಾತ್ಮರ ಐಕ್ಯವೇ ಕೇವಲ ಸತ್ಯ-ಎಂದು ಹೇಳುತ್ತಾನೆ.

ಪ್ರಪಂಚ ಹಾಗೂ ಆಧ್ಯಾತ್ಮಿಕ ಜೀವನದ ಸಂಬಂಧದ ಬಗ್ಗೆ ಮಹಾರಾಷ್ಟ್ರದ ಸಂತರಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ತುಕಾರಾಮ ಹೇಳುತ್ತಾನೆ; 'ಪ್ರಾಪಂಚಿಕ ಸುಖ ಆಧ್ಯಾತ್ಮ ಸುಖಗಳನ್ನು ಏಕಕಾಲದಲ್ಲಿ ಅನುಭವಿಸುವುದು ಅಸಾಧ್ಯ' ಎಂದು. ಆತ ಹೇಳುತ್ತಾನೆ; 'ಮೊಲದ ಜೊತೆಯಲ್ಲಿ ಓಡಿ ನಾಯಿಯ ಜೊತೆಯಲ್ಲಿ ಬೇಟೆಯಾಡುವುದು ಸಾಧ್ಯವಿಲ್ಲ. 'ಇದು ಸಾಧ್ಯವಾಗಿದ್ದರೆ ಸನಕ ಮೊದಲಾದ ಋಷಿಗಳು ಲೌಕಿಕವನ್ನು ತ್ಯಜಿಸಿ ಕಾಡಿಗೆ ಹೋಗುತ್ತಿರಲಿಲ್ಲ. ಆದರೆ ಏಕನಾಥರು ಮತ್ತು ರಾಮದಾಸರು ಲೌಕಿಕ ಹಾಗೂ ಅಧ್ಯಾತ್ಮದಲ್ಲಿ ಹೊಂದಾಣಿಕೆ ಸಾಧ್ಯ ಎನ್ನುತ್ತಾರೆ. ಜೀವನದ ಅನಂತ ಕಷ್ಟಗಳ ನಡುವೆ ಪಾರಾಗಲು ಒಂದೇ ದಾರಿ ಎಂದರೆ ಅಂಟಿಯೂ ಅಂಟದಂತಿರುವುದು. ಭಗವಂತನಲ್ಲಿ ಭಕ್ತಿಯನ್ನಿಡುವುದು. ನೀರಿನಲ್ಲಿ ತಾವರೆಯಂತೆ ಬಾಳುವುದು. ಇದು ಬಹುಪಾಲು ಭಕ್ತರ ಸಂದೇಶ.

ಆದರ್ಶ ಸಂತನ ಲಕ್ಷಣವನ್ನು ಕುರಿತು ಹೇಳುತ್ತಾರೆ; ಸಂತರು ಮೋಡದಂತೆ ಅವರು ಲೌಕಿಕ ಸುಖಗಳಿಂದ ವರ್ಜಿತರು. ಮೇಣಕ್ಕಿಂತ ಮೃದು, ವಜ್ರಕ್ಕಿಂತ ಕಠಿಣರು ವಿಶ್ವವೇ ಅವರ ಮನೆ. ಜನರು ದೋಷಗಳನ್ನು ಮನ್ನಿಸಿ ಒಳ್ಳೆಯ ಗುಣಗಳನ್ನು ಬೆಳೆಸಲು ಅವರು ನೆರವಾಗುತ್ತಾರೆ. ನಿಜವಾದ ಸಂತನು ಎಲ್ಲರನ್ನು ಕಾರ್ಯೋನ್ಮುಖರನ್ನಾಗಿ ಮಾಡಿ, ತಾನು ಹಿಂದೆ ನಿಲ್ಲುತ್ತಾನೆ. ಮೌನವಾಗಿ ತನ್ನ ಕೆಲಸ ಮಾಡುತ್ತಾನೆ. ಆತ್ಮಜ್ಞಾನದ ಪವಿತ್ರ ಗಂಗೆಯಲ್ಲಿ ಜನರ ಮನಸ್ಸನ್ನು ಶುದ್ಧಗೊಳಿಸುವುದು ದಿವ್ಯಪ್ರೇಮದಲ್ಲಿ ಜನರನ್ನು ತುಂಬುವುದು ಸಂತರ ಬದುಕಿನ ಗುರಿ.

ವಾರಕರಿ ಭಕ್ತಿಪಂಥದಲ್ಲಿ ಎಲ್ಲ ಜಾತಿಯ ಜನ ಒಂದುಗೂಡಿ ಕಾಲು ನಡಿಗೆಯಿಂದ ಸಾಮೂಹಿಕವಾಗಿ ಭಗವಂತನ ಕೀರ್ತನೆ ಮಾಡುತ್ತಾ ಪಂಡರಾಪುರಕ್ಕೆ 'ದಿಂಡಿ' ಹೋಗುವ ನಿಯಮವಿದೆ. ಇಲ್ಲಿ ಭಕ್ತರೆಲ್ಲ ಒಂದೇ. ಅವರಲ್ಲಿ ಭೇದ ಭಾವ ಇಲ್ಲ. ಹೆಣ್ಣು ಮಕ್ಕಳ ಬಗ್ಗೆ ಗೌರವವಿತ್ತು. ಜ್ಞಾನದೇವನ ಕಾಲದ ಜಾನಾಬಾಯಿ ಒಬ್ಬಸೇವಕಿ. ಕನೋಪಾತ್ರ ಒಬ್ಬ ವೇಶ್ಯೆ. ಇಬ್ಬರೂ ಮರಾಠಿಯಲ್ಲಿ ಕೃತಿ ರಚನೆ ಮಾಡಿದ್ದಾರೆ. ಇವರು ಭಕ್ತಿ ಚಳುವಳಿಯಲ್ಲಿ ಭಾಗವಹಿಸಿ ಸರ್ವಮಾನ್ಯತೆ ಪಡೆಯುತ್ತಾರೆ. ಈ ಭಕ್ತಿ ಚಳುವಳಿಯಿಂದ ಹಿಂದುಳಿದ ವರ್ಗದವರಲ್ಲಿ ಆತ್ಮವಿಶ್ವಾಸ ಮೂಡಿತು. ಮಹಾರಾಷ್ಟ್ರದಲ್ಲಿ ನಡೆದ ಈ ಚಳುವಳಿಯಲ್ಲಿ ಜ್ಞಾನದೇವ ತಳಪಾಯದ ಕಲ್ಲಾದರೆ, ನಾಮದೇವ ಗುಡಿಯ ಗೋಡೆ, ಅನಂತರ ಬಂದ ಏಕನಾಥ ಆ ಗುಡಿಯ ಆಧಾರ ಸ್ತಂಭವಾದರೆ ತುಕಾರಾಮ ಅದರ ಶಿಖರವೇ ಆಗಿದ್ದಾನೆಂದು ಭಕ್ತರಲ್ಲಿ ಒಬ್ಬಳಾದ ಬಹಿಣಾಬಾಯಿ ಹೇಳುತ್ತಾಳೆ. ಈ ಭಕ್ತಿ ಚಳುವಳಿಯಲ್ಲಿ ಬಹುಪಾಲು ಜನ ಅಕ್ಷರ ವಿದ್ಯೆಗೆ ದೂರಾದವರಿದ್ದರು. ಆದರೂ ಅವರ ತಿಳಿವಳಿಕೆ ಅಕ್ಷರ ವಿದ್ಯೆಯನ್ನೂ ಮೀರಿತ್ತು. ಈ ಚಳುವಳಿಯು ದೀನ ದಲಿತರ ಆಶಾಕಿರಣವಾಗಿತ್ತು. ಹೆಂಗೆಳೆಯರು ತಲೆ ಎತ್ತಿ ನಡೆಯುವಂತಾಗಿತ್ತು. ಗಂಡಸರಾಗಲಿ, ಹೆಂಗಸರಾಗಲಿ ಸಂಸಾರದಲ್ಲಿದ್ದು ಕೊಂಡೇ

ಸಂತರಾಗುವ ಹೊಸ ರೀತಿಯನ್ನು ತೋರಿಸಿತ್ತು. ಈ ಚಳುವಳಿಯಲ್ಲಿ ಪ್ರಮುಖ ಸಂತರು 'ಗೋಸಾವಿ'ಗಳು. ಅಂದರೆ ನಾಥ ಪಂಥದ ದೀಕ್ಷೆ ಪಡೆದವರು. ನಾಥಪಂಥ ಭಾರತದ ಜನಪ್ರಿಯ ಪಂಥ. ಇದು ಜಾತಿ ಭೇದವನ್ನು ಒಪ್ಪುತ್ತಿರಲಿಲ್ಲ. ಗುರು ಪರಂಪರೆ, ಹಠಯೋಗ, ತಾಂತ್ರಿಕ ಆಚರಣೆಗಳನ್ನು ಒಪ್ಪಿಕೊಂಡ ಪ್ರಗತಿಪರ ಪಂಥವಾಗಿತ್ತು.

ವಾರಕರಿ ಪಂಥದಲ್ಲಿ ಮೂಕರಾಗಿದ್ದ ಮುಕ್ತಾಬಾಯಿ, ಜಿನಾ ಬಾಯಿ, ಆಶಾಬಾಯಿ, ವೇನುಬಾಯಿಯಂಥ ಮನೆ ಕೆಲಸದ ಆಳುಗಳು, ಜೀತಾದಾಳುಗಳು, ವೇಶ್ಯೆಯರು, ಆತ್ಮೋನ್ನತಿಯ ಸಾಧನೆಯಲ್ಲಿ ಗಂಡಸರಿಗೆ ಸರಿಸಮಾನವಾದ ಮೇಲು ಸ್ಥಾನ ಪಡೆದರು. ಬೇರೆ ಬೇರೆ ವೃತ್ತಿಗಳಿಂದ ಸಮಾಜದಲ್ಲಿ ಹೊಟ್ಟೆ ಹೊರೆಯುತ್ತಿದ್ದ ಎಲ್ಲರು ಭಕ್ತಿಪಂಥದಲ್ಲಿ ಸಾಗಿ ಸಮಾಜದಲ್ಲಿ ಗೌರವವನ್ನು ಪಡೆದರು. ಯಾರು ಬೇಕಾದರೂ ವಾರಕರಿ ದೀಕ್ಷೆ ಪಡೆಯಬಹುದಾಗಿತ್ತು. ಗುರವಿನಿಂದ ದೀಕ್ಷೆ ಪಡದವರು ವಿಠಲನ ಸಮೀಪಕ್ಕೆ ಹೋಗಬಹುದಾಗಿತ್ತು. ವಿಠಲನನ್ನು ಮುಟ್ಟಿ ಪೂಜಿಸಬಹುದಾಗಿತ್ತು. ಈ ಪಂಥದಲ್ಲಿ ಭಕ್ತ ಮತ್ತು ದೇವರ ಮಧ್ಯೆ ಪೂಜಾರಿಗಳ ಮಧ್ಯಸ್ಥಿಕೆ ಇರಲಿಲ್ಲ. ವಾರಕರಿಗಳು ಸಂಸಾರಿಗಳಾಗಿದ್ದರು. ಮುಕ್ತಿಯನ್ನು ಕಾಣಲು ಸಾಧನೆ ಮಾಡಿದರು. ತಮ್ಮ ಭಾಷೆಯನ್ನು ಭಕ್ತಿಯ ಭಾಷ್ಯವನ್ನಾಗಿ ಮಾಡಿದರು.

ಈ ಭಕ್ತಿ ಚಳುವಳಿ ಜನರ ನಡುವೆ ಮೂಡಿ ಬಂದುದರಿಂದ ಅದು ಸಗುಣ ದೇವರ ಆರಾಧನೆಯನ್ನು ಬೆಳೆಸಿಕೊಂಡಿತು. ಪಂಢರಾಪುರದ ಭಕ್ತರಿಗೆ ಶೈವ, ವೈಷ್ಣವ ಎಂಬ ಭೇದವಿರಲಿಲ್ಲ. ಈ ಭೇದವನ್ನು ದಾಟಲು ಅವರು ಪ್ರಯತ್ನಿಸಿದರು. ಈ ಪಂಥದ ಇತಿಹಾಸವನ್ನು ಅವಲೋಕಿಸಿದಾಗ ಪ್ರಾರಂಭದಲ್ಲಿ ಇದು ಚಳುವಳಿಯ ಸ್ವರೂಪ ಪಡೆದಿರಲಿಲ್ಲ. ಮೊದಲು ಅದು ಕೇವಲ ಒಬ್ಬ ಗುರುವಿನ ಸುತ್ತ ಸೇರಿದ ಭಕ್ತರ ಗುಂಪಾಗಿತ್ತು. ಪಂಡರಾಪುರದ ಯಾತ್ರೆ ಬಹಳ ಜನ ಭಕ್ತರು ಸೇರುವಂತೆ ಮಾಡಿತು. ವಾರಕರಿ ಪಂಥವನ್ನು ಬೆಳೆಸಿದವರು ಜ್ಞಾನದೇವ, ನಾಮದೇವ, ತುಕಾರಾಮ ಹಾಗೂ ಏಕನಾಥರು. ಇವರೆಲ್ಲರು ಭಕ್ತಿಯ ತಳಹದಿಯ ಮೇಲೆ ಈ ಪಂಥವನ್ನು ಕಟ್ಟಿದರು. ಇವರು ದೇಶೀ ಭಾಷೆಯನ್ನು ಬೆಳೆಸಿದರು, ಬಳಸಿದರು. ಸಂಸ್ಕೃತವಲ್ಲದ ಜನಭಾಷೆಯಲ್ಲಿ ಹಾಡುವುದನ್ನು ಕೀರ್ತನೆ ಮಾಡುವುದನ್ನು ಕೇಳಿ ಸಂಸ್ಕೃತ ಪಂಡಿತರು ದಿಗ್ಭ್ರಮೆಗೊಂಡರು. ಇದರಿಂದ ಜನ ಭಾಷೆ ಸಂತರ ಅನುಭವದಿಂದ ಸಶಕ್ತವಾಯಿತು. ಈ ಸಂತರ ಕೀರ್ತನೆಗಳು ಹಳ್ಳಿಯ ಜನಗಳ ಮೇಲೆ ತುಂಬಾ ಪ್ರಭಾವ ಬೀರಿದವು. ಇವುಗಳನ್ನು ಕೇಳಲು ಜನರು ತಂಡೋಪತಂಡವಾಗಿ ಸೇರುತ್ತಿದ್ದರು. ಇವರ ಧರ್ಮ ಗುಡಿ ಗುಂಡಾರಗಳಾಚೆನ ಸರಳ ಧರ್ಮ ವಾಗಿತ್ತು. ಓದಲೂ ಬರೆಯಲೂ ಬಾರದ ಅನಕ್ಷರಸ್ಥರು, ಮನೆ ಮುಸುರೆ ತೊಳೆಯುವ ಹೆಣ್ಣು ಮಕ್ಕಳು, ದನ ಕಾಯುವ ಗಂಡಸರು ಎಲ್ಲರೂ ಇವರುಗಳ ಕೀರ್ತನೆಯನ್ನು ಹಾಡುವಂತಾಯಿತು. ಜನಗಳಲ್ಲಿ

ಧಾರ್ಮಿಕ ನೈತಿಕ ತಿಳುವಳಿಕೆ ಮೂಡಿ ಸಮಾನತೆಯ ಎಚ್ಚರ ಮೂಡುವಂತಾಯಿತು. ನೂರಾರು ದೇವರುಗಳು ಬೇಕಿಲ್ಲ. ವಿಠಲನ ಭಕ್ತಿ ಒಂದೇ ಸಾಕು. ಕಾವಿ ಬಟ್ಟೆಧರಿಸುವುದು, ಮಾಟ ಮಂತ್ರ ಮಾಡಿಸುವುದು, ವ್ರತಗಳನ್ನು ಆಚರಿಸುವುದು, ದೇಹ ದಂಡಿಸುವುದು ಬ್ರಾಹ್ಮಣರಿಗೆ ದಾನ ನೀಡುವುದು- ಇವು ಧರ್ಮವಲ್ಲ ಎಂದು ಸಾರಿದರು. ಮಾನವ ಜಾತಿ ಒಂದೇ ಎಂದು ಸಾರಿದರು. ಜ್ಞಾನೇಶ್ವರ ಹೇಳುತ್ತಾನೆ; 'ದೇವರಿಗೆ ಜಾತಿ, ಕುಲ, ವರ್ಣ, ಗಂಡು, ಹೆಣ್ಣೆಂಬ ಭೇದವಿಲ್ಲ. ದೇವರಲ್ಲಿ ಭಕ್ತಿಯೇ ಮುಖ್ಯ. ದೇವರ ಹತ್ತಿರ ಜಾತಿಗಳೆಲ್ಲಾ ಒಂದಾಗುತ್ತವೆ. ಗಂಗೆಯಲ್ಲಿ ಸೇರುವ ಉಪನದಿಗಳೆಲ್ಲ ಗಂಗೆಯೇ ಆಗುವಂತೆ' ಎಂದು.

ಮಹಾರಾಷ್ಟ್ರದ ಸಂತರ ಈ ಚಳುವಳಿ ಒಂದು ಪ್ರತಿಭಟನೆಯಾಗಿತ್ತು. ಮೇಲು ವರ್ಗದವರಿಗೆ ಸವಾಲಾಗಿತ್ತು. ಮಹಾರಾಷ್ಟ್ರದಲ್ಲಿ ಸಂತ ಪರಂಪರೆ ದೊಡ್ಡದು. ನಾಥರು, ಮಹಾನುಭಾವರು, ಗೋಸಾವಿಗಳು, ದತ್ತರು, ವಾರಕರಿಗಳು-ಎಲ್ಲ ಭಕ್ತಿ ಚಳುವಳಿಗಳು ಸಮಾಜದಲ್ಲಿಯ ಅಸಮಾನತೆ, ಮೇಲು ಕೀಳುಗಳ ಕಲ್ಪನೆ, ಅಂಧಶ್ರದ್ಧೆ, ಮೂಢನಂಬಿಕೆಗಳನ್ನು ಕಿತ್ತೊಗೆಯಲು ಪ್ರಯತ್ನಿಸಿದವು. ಎಲ್ಲ ವರ್ಗದ ಜನ ಸಮಾನ ಭಾವನೆಯಿಂದ ಪಂಢರಾಪುರದೆಡೆ ಆಕರ್ಷಿತವಾದರು. ಏಕದೇವೋಪಾಸನೆಗೆ ಒಲಿದರು. ಈ ಚಳುವಳಿ ಮಹಾರಾಷ್ಟ್ರದ ಎಲ್ಲ ಚಳುವಳಿಗಿಂತ ಪ್ರಭಾವಶಾಲಿ ಯಾಗಿತ್ತು. ವಿಠಲನು ಮರಾಠಿ ಮಾತನಾಡುವ ಬಹುತೇಕ ಜನರಿಂದ ಪೂಜಿಸುವ ದೇವರಾದನು. ವಾರಕರಿ ಚಳುವಳಿ ಲೌಕಿಕ ಮತ್ತು ಅಲೌಕಿಕ ವಿಚಾರಗಳನ್ನು ಕುರಿತು ಉಪಯುಕ್ತ ವಿಚಾರ ಹೇಳಿದೆ. ಈ ಭಕ್ತಿ ಚಳುವಳಿ ತಮ್ಮ ವಿಚಾರಗಳನ್ನು ಓದಿ, ಅಭಂಗ, ಕಠಾವ್, ದಿಂಡಿ ಹಾಗೂ ಸಾಕಿ ವಿವಿಧ ಛಂದಸ್ಸುಗಳಲ್ಲಿ ಕೀರ್ತನೆಗಳನ್ನು ಹಾಡುವ ಮೂಲಕ ಮಹಾರಾಷ್ಟ್ರದ ಜನಮನದಲ್ಲಿ ವೈಚಾರಿಕ ಅಲೆಗಳನ್ನೆಬ್ಬಿಸಿದವು. ಮತ್ತು ಸಾಹಿತ್ಯವನ್ನು ಶ್ರೀಮಂತಗೊಳಿಸಿದವು.

ನಾಥಪಂಥ:

ನಾಥಪಂಥ (ಸುಮಾರು ಒಂಬತ್ತನೆಯ ಶತಮಾನದಿಂದ ಹನ್ನೊಂದನೆಯ ಶತಮಾನದವರೆಗೆ). ಉತ್ತರ ಹಿಂದೂಸ್ತಾನದಲ್ಲಿ ನಾಥಪಂಥ ಅತ್ಯಂತ ಪ್ರಾಚೀನವಾದ ಭಕ್ತಿಪಂಥವಾಗಿದೆ. ಭಾರತದ ಎಲ್ಲ ಭಕ್ತಿ ಪಂಥಗಳಿಗೆ ಇದು ಮೂಲವೆನಿಸುವಷ್ಟು ಹಳೆಯದು. ಮಹಾರಾಷ್ಟ್ರದ ಭಕ್ತಿ ಚಳುವಳಿಗಳ ಮೇಲೆ ಇದರ ಪ್ರಭಾವ ದಟ್ಟವಾಗಿದೆ. ಗೋರಖನಾಥನು ಈ ಪಂಥದ ಅದ್ಯಪ್ರವರ್ತಕ. ಮಹಾರಾಷ್ಟ್ರದಲ್ಲಿ ಇದರ ಪ್ರಚಾರ ಮೊದಲು ಆರಂಭವಾಯಿತೆಂದು ಹೇಳುತ್ತಾರೆ. ಜ್ಞಾನೇಶ್ವರನ ವಂಶದ ಹಿಂದಿನ ಹಿರಿಯರೆಲ್ಲ ನಾಥ ಪಂಥದ ಭಕ್ತರಾಗಿದ್ದರು. ನಾಥಪಂಥದ ಗುರು ಪರಂಪರೆ ಸುದೀರ್ಘವಾಗಿದೆ. ಆದಿನಾಥ, ಮತ್ಸ್ಯೇಂದ್ರನಾಥ, ಗೋರಖನಾಥ, ಗಾಹಿನೀನಾಥ,

ನಿವೃತ್ತಿನಾಥ-ಹೀಗೆ ಈ ಪರಂಪರೆ ಮುಂದುವರೆಯುತ್ತದೆ. ಗೋರಖನಾಥನು ಹನ್ನೊಂದನೆಯ ಶತಮಾನದಲ್ಲಿ ಈ ಪಂಥದ ಪ್ರಚಾರ ಮಾಡಿದ. ಮಹಾರಾಷ್ಟ್ರದಲ್ಲಿ ನಾಥ ಪಂಥ ಕೃಷ್ಣಭಕ್ತಿಯನ್ನಳವಡಿಸಿಕೊಂಡು ತುಂಬಾ ಪ್ರಚಾರವನ್ನು ಪಡೆಯಿತು. ಕಾರಣ, ಪಂಡರಾಪುರದ ವಿಠಲ ವಿಷ್ಣು ಮತ್ತು ಕೃಷ್ಣನ ಅವತಾರವೆಂದೇ ಜನರು ಭಾವಿಸುತ್ತಾರೆ. ನಾಥ ಪಂಥ ಪ್ರಾದೇಶಿಕ ಭಾಷೆಗಳಲ್ಲಿ ತತ್ವ ಪ್ರಚಾರ ಮಾಡಿತು. ಸ್ತ್ರೀ-ಶೂದ್ರರಿಗೆ ಮುಕ್ತಿ ಬಾಗಿಲನ್ನು ತೆರೆಯಿತು. ಜಾತಿ ಪಂಥಗಳ ಮೇಲು-ಕೀಳುಗಳನ್ನು ಹೊಡೆದುಹಾಕಿತು. ವರ್ಣಾಶ್ರಮ ಧರ್ಮವನ್ನು ವಿರೋಧಿಸಿತು. ಭಾರತದಲ್ಲಿ ಅಧ್ಯಾತ್ಮಿಕ ಹಾಗೂ ಧಾರ್ಮಿಕ-ಸಾಮಾಜಿಕ ಸಮಾನ ತತ್ತ್ವವನ್ನು ಮೊದಲು ಸಾರಿದ ಶ್ರೇಯಸ್ಸು ನಾಥ ಪಂಥಕ್ಕೆ ಸೇರುತ್ತದೆ. ನಾಥ ಪಂಥ ಶಕ್ತಿವಿಶಿಷ್ಟ ಶಿವನನ್ನು ಕೊನೇ ಸತ್ಯವೆಂದು ಭಾವಿಸುತ್ತದೆ. ಶಿವನ ಸಾಕ್ಷಾತ್ಕಾರ ಮನುಷ್ಯನ ಅಂತಿಮ ಗುರಿಯಾಗಿದೆ. ನಾಥಪಂಥದ ವೈಶಿಷ್ಟ್ಯ ಯೋಗ ಸಾಧನೆ. ಎಲ್ಲರೂ ಸಮಾನರೂ ಎನ್ನುವ ಅದ್ವೈತ ತತ್ತ್ವವನ್ನು ಪ್ರತಿಪಾದಿಸುತ್ತದೆ. ಈ ಪಂಥದ ಸಾಧಕನು ಯೋಗ ಸಾಧನೆಯಿಂದ ಕುಂಡಲಿಯನ್ನು ಜಾಗೃತಗೊಳಿಸಿ ಜೀವಶಿವರ ಐಕ್ಯತೆಯನ್ನು ಸ್ಥಾಪಿಸುತ್ತಾನೆ. ವಾಸ್ತವವಾಗಿ ನಾಥಪಂಥ ಶಿವಪಂಥವಾಗಿದೆ. ಆದರೂ ಹರಿಹರರಲ್ಲಿ ಸಮನ್ವಯ ಭಾವವುಳ್ಳದಾಗಿದೆ. ಭಾರತದಲ್ಲಿ ಎಲ್ಲ ಕಡೆಗಳಲ್ಲೂ ನಾಥಪಂಥದ ಪ್ರಭಾವ, ಕುರುಹುಗಳನ್ನು ಕಾಣಬಹುದಾಗಿದೆ. ಎಲ್ಲ ಭಕ್ತಿ ಚಳುವಳಿಗೆ ಇದು ನಾಂದೀ ಎನಿಸಿದೆ.

ಮಹಾನುಭಾವ ಪಂಥ:

ಈ ಪಂಥ ಮಹಾರಾಷ್ಟ್ರದ ಒಂದು ಪ್ರಮುಖ ಪಂಥವಾಗಿದೆ. ಇದು ಕೃಷ್ಣಭಕ್ತಿ ಪಂಥ. ಇದಕ್ಕೆ ಮಹಾತ್ಮಪಂಥ, ಅಚ್ಯುತ ಪಂಥ ಎನ್ನುವ ಪರ್ಯಾಯ ನಾಮಗಳಿವೆ. (ಇದರ ಕಾಲ ಸುಮಾರು ಹನ್ನೊಂದನೆಯ ಶತಮಾನದಿಂದ- ಹನ್ನೆರಡನೆಯ ಶತಮಾನ). ಈ ಪಂಥದ ಸ್ಥಾಪಕ ಚಕ್ರಧರ. ಈತ ಮೂಲತಃ ಗುಜರಾತಿವನು. ಈತನ ಮೊದಲ ಹೆಸರು ಹರಪಾಲದೇವ. ಮುಂದೆ ಚಕ್ರಧರನೆಂಬ ಹೆಸರಿನಿಂದ ಪ್ರಸಿದ್ಧಿ ಹೊಂದಿದ. ಮಹಾನುಭಾವ ಪಂಥ ಸ್ಥಾಪಿಸಿದ. ಈ ಪಂಥದ ವಿಚಾರಗಳು ಕ್ರಾಂತಿಕಾರಕಗಳಾಗಿದ್ದವು. ಈ ಪಂಥ ಬಹುದೇವತೆಗಳ ಉಪಾಸನೆಯನ್ನು ವಿರೋಧಿಸಿತು. ಈಶ್ವರ ಶ್ರೇಷ್ಠ, ಅನ್ಯ ದೈವಗಳು ಗೌಣ. ಈಶ್ವರನ ಉಪಾಸನೆಯಿಂದ ಮೋಕ್ಷ ಸಾಧ್ಯ ಎಂಬುದು ಈ ಪಂಥದ ವಿಚಾರ ಮತ್ತು ಕೃಷ್ಣನ ಉಪಾಸನೆಯನ್ನು ಬೋಧಿಸಿದ. ಸ್ತ್ರೀಯರು ದೀಕ್ಷೆ ಪಡೆದು ಪುರುಷರಿಗೆ ಸಮಾನರಾಗಿ ಧರ್ಮಾಚರಣೆ ನಡೆಸಲು ತಿಳಿಸಿದ. ಚಕ್ರಧರನು ದ್ವೈತವನ್ನು ಪ್ರತಿಪಾದಿಸಿದ, ಅದ್ವೈತವನ್ನು ಅಲ್ಲಗಳೆದ. ವೇದಗಳನ್ನು ವಿರೋಧಿಸಿದ. ಕಾರಣ ಅವು ದೇವ ನಿರ್ಮಿತವಲ್ಲ, ಋಷಿ ಪ್ರಣೀತ ಎಂದು ಚಾತುರ್ವರ್ಣಗಳನ್ನು ನಿರಾಕರಿಸಿದ. ಸಮಾಜದಲ್ಲಿ ಧಾರ್ಮಿಕ ಸಮಾನತೆಯ್ನು ತರಲು ವರ್ಣಾಶ್ರಮ

ವಿರೋಧಿಸಿದ. ಸ್ತ್ರೀ ಪುರುಷರ ಸಮಾನತೆಗೆ ಪ್ರಯತ್ನಿಸಿದ. ಮಧುಕರ ವೃತ್ತಿಯನ್ನು ಘೋಷಿಸಿದ. ತನ್ನ ಶಿಷ್ಯರಿಗೆ ಭಿಕ್ಷಾನ್ನ ಸೇವಿಸಲು ತಿಳಿಸಿದ. ಅಸ್ಪೃಶ್ಯತೆಯನ್ನು ನಿರಾಕರಿಸಿದ. ಅಸ್ಪೃಶ್ಯನ ಕೈಯಿಂದ ಆಹಾರ ಸೇವಿಸುವುದಕ್ಕೆ ಈತ ಸಂಕೋಚ ಪಡುತ್ತಿರಲಿಲ್ಲ. ಅಸ್ಪೃಶ್ಯರ ಮನೆಯಲ್ಲಿ ತಾನೂ ಉಂಡು ಅನ್ಯರಿಗೂ ಬಡಿಸುತ್ತಿದ್ದ. ಅಹಿಂಸಾ ತತ್ವದ ಜೊತೆಗೆ ಸನ್ಯಾಸಕ್ಕೆ ಗೌರವ ನೀಡಿದ. ಶ್ರೀ ದತ್ತಾತ್ರೇಯ, ಶ್ರೀಕೃಷ್ಣ, ಶ್ರೀಚಕ್ರಪಾಣಿ, ಶ್ರೀ ಗೋವಿಂದಪ್ರಭು ಮತ್ತು ಚಕ್ರಧರ ಇವರು ಸಾಕ್ಷಾತ್ ಪರಮೇಶ್ವರರ ಅವತಾರಗಳೆಂದು ಭಾವಿಸುತ್ತಿದ್ದನು. ಇದು ಸಗುಣವಾದಿಪಂಥ. ಈ ಮಹಾನುಭಾವ ಪಂಥದಲ್ಲಿ ಸನ್ಯಾಸಿಗಳು ಭಿಕ್ಷುಕ ವೃತ್ತಿಯಿಂದ ಜೀವಿಸಬೇಕು. ಸದಾ ಸಂಚಾರದಲ್ಲಿರಬೇಕು. ಸಂಯಮ ಜೀವನ ನಡೆಸಬೇಕು ಎನ್ನುವ ನಿಯಮಗಳಿದ್ದವು. ಇಲ್ಲಿ ಜ್ಞಾನಮಾರ್ಗಕ್ಕಿಂತ ಭಕ್ತಿಮಾರ್ಗ ಪ್ರಧಾನವಾಗಿತ್ತು. ಮಹಾರಾಷ್ಟ್ರದಲ್ಲಿ ಇದು ನಿಜಕ್ಕೂ ಕ್ರಾಂತಿಕಾರಿ ಪಂಥವಾಗಿತ್ತು. ಮೊದಮೊದಲು ಬಹಳ ಜನ ಈ ಪಂಥಕ್ಕೆ ಆಕರ್ಷಿತರಾದರು. ಕ್ರಮೇಣ ಇದರ ಆಕರ್ಷಣೆ ಕಡಿಮೆಯಾಯಿತು. ಕಾರಣ ಸನ್ಯಾಸ ಜೀವನಕ್ಕೆ ಮತ್ತು ನಿವೃತ್ತಿ ಮಾರ್ಗಕ್ಕೆ ಒತ್ತು ಕೊಟ್ಟಿದ್ದರಿಂದ ಸಾಧಾರಣ ಜನರಿಗೆ ಇದನ್ನು ಅನುಸರಿಸಲು ಕಷ್ಟವಾಯಿತು. ಸ್ತ್ರೀಯರಿಗೆ ಸನ್ಯಾಸ ನೀಡುವುದು. ತಲೆ ಬೋಳಿಸುವುದು, ಮೃತದೇಹಗಳನ್ನು ಹೂಳುವುದು, ರಜಸ್ವಲ ಸ್ತ್ರೀಯನ್ನು ಅಸ್ಪೃಶ್ಯರಂತೆ ಭಾವಿಸದಿರುವುದು, ವಿಶಿಷ್ಟ ಉಡುಗೆಗಳನ್ನು ಧರಿಸುವುದು ಇತ್ಯಾದಿ ಆಚರಣೆಗಳನ್ನು ಕಂಡು ಜನ ಕ್ರಮೇಣವಾಗಿ ಈ ಪಂಥದಿಂದ ದೂರ ಸರಿದರು. ಈ ಪಂಥದ ಪ್ರಚಾರ ಕ್ರಮೇಣ ಕಡಿಮೆ ಆಯಿತು. ಇದು ಮೊದಲು ಪಂಜಾಬಿನಿಂದ ಕಾಬೂಲ್ ವರೆಗೂ ಪ್ರಚಾರದಲ್ಲಿತ್ತು. ಚಕ್ರಧರ ಮೂಲತಃ ಗುಜರಾತಿನವನಾಗಿದ್ದ. ಮರಾಠಿ ಭಾಷೆಗೆ ಈ ಮಹಾನುಭಾವ ಪಂಥದ ತತ್ವ ಪ್ರಸಾರದಿಂದ ತುಂಬ ಉಪಕಾರ ಮಾಡಿದ. ಅದನ್ನು ಧರ್ಮಭಾಷೆಯನ್ನಾಗಿ ಮಾಡಿದ. ಸಂಸ್ಕೃತಕ್ಕೆ ಸಮಾನವಾಗಿ ಮರಾಠಿ ಭಾಷೆಗೆ ಗೌರವ ತಂದ ಶ್ರೇಯಸ್ಸು ಚಕ್ರಧರನಿಗೆ ಸಲ್ಲುತ್ತದೆ.

❖

೪. ಅಸ್ಸಾಂರಾಜ್ಯದ ಭಕ್ತಿಚಳುವಳಿ

(ಏಕಶರಣ ನಾಮಪಂಥ) ೧೪-೧೫ನೇ ಶತಮಾನ (ಸು)

ಉತ್ತರ ಪೂರ್ವದಲ್ಲಿರುವ ಅಸ್ಸಾಂ ರಾಜ್ಯಕ್ಕೆ ಹಿಂದೆ ಕ್ರಿ. ಶ. ೧೫ನೇ ಶತಮಾನದ ಮಧ್ಯಭಾಗದಲ್ಲಿ ಕಾಮರೂಪ ಎಂದು ಕರೆಯುತ್ತಿದ್ದರು. ಈ ರಾಜ್ಯದಲ್ಲಿ ಶಕ್ತಿಯ ಆರಾಧನೆ ವಿಶೇಷವಾಗಿ ನಡೆಯುತ್ತಿತ್ತು. ಮೂಢನಂಬಿಕೆಗಳು ತುಂಬ ಹರಡಿಕೊಂಡಿದ್ದವು. ಯಂತ್ರ- ಮಂತ್ರ-ತಂತ್ರಗಳ ಆಧಾರದ ಮೇಲೆ ದೇವತೆಗಳ ಹೆಸರಿನಲ್ಲಿ ಮುಗ್ಧರ ಸುಲಿಗೆ ನಡೆಯುತ್ತಿತ್ತು. ಭಕ್ತಿಗಿಂತ ಭಯದ ವಾತಾವರಣ ಅಲ್ಲಿ ಹೆಚ್ಚಾಗಿತ್ತು. ಸನ್ಯಾಸಿಗಳು, ಬೈರಾಗಿಗಳು ಜನರನ್ನು ಮೋಸದ ಜಾಲದಲ್ಲಿ ಸಿಲುಕಿಸಿ ಮಂಕುಬೂದಿ ಎರಚುತ್ತಿದ್ದರು. ರಾಜಕೀಯ ರಂಗದಲ್ಲೂ ಅಸ್ಸಾಂ ರಾಜ್ಯ ಛಿದ್ರಗೊಂಡಿತು. ಟಿಬೇಟ್. ಬರ್ಮಾ ಬುಡಕಟ್ಟಿನ ಜನಾಂಗದ ಸಂಪ್ರದಾಯಗಳು ಹಿಂದೂಗಳ ಮೇಲೆ ಸಾಕಷ್ಟು ಪರಿಣಾಮ ಬೀರಿದ್ದವು. ಮೊದಲು ಅಸ್ಸಾಂನಲ್ಲಿ ಶೈವಧರ್ಮವಿತ್ತು. ಅನಂತರ ಶಕ್ತಿಪೂಜೆ ಆರಂಭವಾಯಿತು. ಶಕ್ತಿಯ ಅನೇಕ ರೂಪದ ಆರಾಧನೆ, ಪ್ರಾಣಿಬಲಿಗಳು ನಿರಂತರವಾಗಿ ನಡೆಯುತ್ತಿದ್ದವು. ಗೌಹಾತಿಯ ನೀಲಾಚಲವೆಂಬ ಬೆಟ್ಟದಲ್ಲಿ ಕಾಮಾಕ್ಯ ದೇವತೆಯ ಯೋನಿಪೀಠವು ಧರ್ಮಪೀಠವಾಗಿತ್ತು. ನೀಲಾಚಲದ ಭೈರವಿ ದೇವಾಲಯದಲ್ಲಿ ನರಬಲಿ ನಡೆಯುತ್ತಿತ್ತು. ಬೌದ್ಧ ಮಾಂತ್ರಿಕ ಗುಪ್ತ ಪದ್ಧತಿಗಳನ್ನು, ವಿಗ್ರಹ ಪೂಜೆಗಳನ್ನು ಜನರಿಗೆ ತೋರಿಸಿ ಶೋಷಣೆ ಮಾಡುತ್ತಿದ್ದರು. ಧರ್ಮದ ಹೆಸರಿನಲ್ಲಿ ಆಮೆ, ಸರ್ಪಗಳೇ ದೇವತೆಗಳಾಗಿದ್ದು ಬೈರಾಗಿಗಳೇ ಧರ್ಮರಕ್ಷಕರಾಗಿದ್ದರು. ಮೋಡ, ನದಿ, ಬತ್ತದ ತೆನೆಗಳು ದೈವ ಸಮಾನವಾಗಿದ್ದವು. ಮಾಟ, ಮಂತ್ರ, ಮೂಢನಂಬಿಕೆಗಳು ಎಲ್ಲಕಡೆಗೂ ಹರಡಿದ್ದವು. ಕಾಮರೂಪ ಪ್ರದೇಶ ಇಂದಿನ ಅಸ್ಸಾಂ ಕರಟೋಯ ಉಪನದಿ ಬ್ರಹ್ಮಪುತ್ರ ಹರಿವ ಕಣಿವೆಯಲ್ಲಿ ಅಡಗಿದೆ. ಈ ಕಾಮರೂಪದಲ್ಲಿ ಹದಿನೈದನೆಯ ಶತಮಾನದಲ್ಲಿ ಕವಿ, ವಿಚಾರವಂತ, ಸಮಾಜ ಸುಧಾರಕ ಶಂಕರದೇವನ ಜನನವಾಯಿತು. ಮೌಢ್ಯದಲ್ಲಿದ್ದ ಜನರನ್ನು ಬೆಳಕಿ ನತ್ತ ನಡೆಸಲು ಈತನ ಜನನವಾಯಿತೆಂದು ತೋರುತ್ತದೆ. ಶಿರೋಮಣಿ ಕುಸುಮ ಅವರ ಕಾಯಸ್ಥ ದ್ವಿತೀಯ ಭೂಯಾನನಿಗೆ ದ್ರಿತೀಯ ಪತ್ನಿಯ ಮಗನಾಗಿ ೧೪೪೯ರಲ್ಲಿ ಜನಸಿದ. ಮಗನಿಗೆ ಶಂಕರನೆಂದು ಹೆಸರಿಟ್ಟರು. ಚಿಕ್ಕ ವಯಸ್ಸಿನಲ್ಲಿಯೇ

ತಂದೆ ತಾಯಿಗಳ ವಿಯೋಗವಾಯಿತು. ಅಜ್ಜಿಯ ಆಶ್ರಯದಲ್ಲಿ ಬೆಳೆದ. ಒಂದು ದಿನ ಅವನ ಅಜ್ಜಿ ಊಟ ಬಡಿಸುತ್ತಿದ್ದಾಗ, 'ನಿನ್ನ ಅಪ್ಪ, ಅಜ್ಜ, ಮುತ್ತಜ್ಜರೆಲ್ಲರೂ ಎಂತಹ ಪಂಡಿತರಾಗಿದ್ದರು. ನೀನು ಇನ್ನೂ ಹುಡುಗಾಟದಲ್ಲಿ ಕಾಲ ಕಳೆಯುತ್ತಿರುವೆ. ಇದರಿಂದ ಶಿರೋಮಣಿ ವಂಶಕ್ಕೆ ಕಳಂಕ ಬರುತ್ತದೆ- ಎಂದು ಹೇಳುತ್ತಾಳೆ. ಈ ಮಾತುಗಳು ಶಂಕರನ ಮೇಲೆ ತುಂಬ ಪರಿಣಾಮ ಬೀರುತ್ತವೆ. ಮುಂದೆ ಅವನು ಹನ್ನೆರಡನೆಯ ವರ್ಷದ ನಂತರ ಗುರು ಮಹೇಂದ್ರ ಕುಂಡಲಿ ಅವರಲ್ಲಿ ಅಧ್ಯಯನ ಮಾಡಿದ, ದೊಡ್ಡ ವಿದ್ವಾಂಸನಾದ. ಗುರುಗಳು ಅವನನ್ನು ಶಂಕರದೇವ ಎಂದು ಕರೆಯಲು ಶಿಷ್ಯರಿಗೆ ಹೇಳಿದರು. ವೇದ, ಉಪನಿಷತ್ತು, ಪುರಾಣ, ತಂತ್ರ, ವ್ಯಾಕರಣಗಳನ್ನು ಅಭ್ಯಾಸ ಮಾಡಿದ. ಅವನಿಗೆ ಕವನಗಳನ್ನು ರಚಿಸುವ ಹವ್ಯಾಸವಿತ್ತು. ವಿದ್ಯಾರ್ಥಿಯಾಗಿದ್ದಾಗ ಯೋಗಾಭ್ಯಾಸವನ್ನೂ ರೂಢಿಸಿಕೊಂಡಿದ್ದ. ಯೌವನಕ್ಕೆ ಬಂದ ಶಂಕರದೇವ ಕಾಯಸ್ಥರ ಹುಡುಗಿ ಸೂರ್ಯವತಿಯನ್ನು ಮದುವೆಯಾದ. ಒಂದು ಹೆಣ್ಣುಮಗು ಇವರಿಗೆ ಜನಿಸಿತು. ಹೆಂಡತಿ ನಿಧನಳಾದಳು. ಇದು ಶಂಕರದೇವನಿಗೆ ತುಂಬ ಆಘಾತವನ್ನುಂಟು ಮಾಡಿತು. ಮುಂದೆ ಮಗಳು ಬೆಳೆದು ದೊಡ್ಡವಳಾದಳು. ಆಕೆಯ ವಿವಾಹವನ್ನು ಮಾಡಿದ. ೧೪೮೦ರಲ್ಲಿ ಅಳಿಯ ಹಾಗೂ ಮಗಳಿಗೆ ಮನೆತನ ಜವಾಬ್ದಾರಿಯನ್ನು ಬಿಟ್ಟು ತೀರ್ಥಯಾತ್ರೆಗೆ ಹೊರಟ.

ಅವನೊಂದಿಗೆ ಅವನ ಮಿತ್ರರು, ಆಪ್ತರು ಹದಿನೇಳು ಜನ ಪ್ರವಾಸಕ್ಕೆ ಹೊರಟರು. ಉತ್ತರ ಭಾರತದ ಎಲ್ಲ ದೇವಾಲಯಗಳನ್ನು ಸಂದರ್ಶಿಸಿದ. ಸಂಚಾರದಲ್ಲಿ ಅನೇಕ ಜನ ವಿದ್ವಾಂಸರನ್ನೂ ಭೇಟಿಯಾದ. ಮತ ಸಿದ್ಧಾಂತಗಳನ್ನು ಕುರಿತು ಚರ್ಚೆ ಮಾಡುತ್ತಿದ್ದ. ಪುರಿಯ ಜಗನ್ನಾಥನನ್ನು ತನ್ನ ದೈವವೆಂದು ನಂಬಿದ. ಯಾತ್ರೆ ಮುಗಿಸಿ ಹಿಂದಿರುಗುವಾಗ ಇದ್ದಕ್ಕಿದ್ದಂತೆ ಅವನ ಮನಸ್ಸಿನಲ್ಲಿ ಹೊಸ ವೈಷ್ಣವ ಚಳುವಳಿ ಮೂಡಿತು. ಪುರಿಯ ಗೋವರ್ಧನ ಮಠ ಮಹಾಂತರಾದ ಶ್ರೀಧರಸ್ವಾಮಿ ಅವರ ಭಾಗವತವನ್ನು ಕೇಳಿದ ಮೇಲೆ ಅವನ ಮನಸ್ಸಿನ ಮೇಲೆ ಅದರ ತೀವ್ರ ಪರಿಣಾಮವಾಯಿತು. ಮತ್ತೆ ಅವನು ಹಿಂತಿರುಗಿ ಮನೆಗೆ ಬಂದ. ಅಜ್ಜಿ ಜೀವಂತವಾಗಿದ್ದಳು. ಇವನ ಅಲೆದಾಟವನ್ನು ಕಂಡು ಮತ್ತೆ ಗೃಹಸ್ಥನಾಗಲು ಒತ್ತಾಯಿಸಿದಳು. ೧೪೯೭ರಲ್ಲಿ ಅಜ್ಜಿಯ ಆಸೆಯಂತೆ ಕಾಲಿಂದಿಯನ್ನು ವಿವಾಹವಾದ. ಆದರೂ ಅವನಿಗೆ ಗೃಹಾಸ್ಥಾಶ್ರಮದಲ್ಲಿ ಆಸಕ್ತಿ ಇರಲಿಲ್ಲ. ಶಾಸ್ತ್ರ ಅಧ್ಯಯನ ಚರ್ಚೆ ಮತ್ತು ಪ್ರಾರ್ಥನೆಯಲ್ಲಿ ತೊಡಗಿದ. ತಾನಿರುವ ಸ್ಥಳದಲ್ಲೇ ಒಂದು ದೇವಸ್ಥಾನವನ್ನು ಕಟ್ಟಿಸಿದ. ಭಾಗವತ ಪುರಾಣವನ್ನು ಅವನು ಹೆಚ್ಚು ಹೆಚ್ಚಾಗಿ ಓದುತ್ತಿದ್ದ. ಅಲ್ಲಿ ಅವನು ವಿಷ್ಣು-ಕೃಷ್ಣರ 'ಏಕಶರಣ' ತತ್ತ್ವವನ್ನು ಗ್ರಹಿಸಿದ. ನಾಮ, ಸಂಕೀರ್ತನ, ಸತ್ಸಂಗ ಈ ವಿಚಾರಗಳೇ ಅವನಿಗೆ ಪ್ರಿಯವಾದವು. ವಿಷ್ಣು, ಕೃಷ್ಣರ ಏಕಶರಣ ತತ್ತ್ವವನ್ನು ತಾನು ರಚಿಸಿದ ಗೀತೆಗಳ ಮೂಲಕ ಜನರಲ್ಲಿ ಪ್ರಚಾರ ಮಾಡಿದ. ಅವನು ರಚಿಸಿದ ಗೀತೆಗಳು ಜನರ ಆಡುಭಾಷೆಯಲ್ಲಿ ಇದ್ದವು. ಜನಗಳಲ್ಲಿ ಭಕ್ತಿ,

ಪ್ರೀತಿ, ಏಕದೇವ ಉಪಾಸನೆ ಇವುಗಳನ್ನು ಪ್ರಚಾರ ಮಾಡಿದ. ಇದಕ್ಕಾಗಿ ಊರು ಊರಿಗೆ ಸಂಚಾರ ಮಾಡಿದ. ಜನ ಇವನ ಹೊಸ ಮತಕ್ಕೆ ಆಕರ್ಷಿತರಾದರು. ಕೇವಲ ಕೀರ್ತನೆಗಳಿಂದಲ್ಲದೆ ನಾಟಕಗಳ ಮೂಲಕವಾಗಿಯೂ ಆತ ವೈಷ್ಣವ ತತ್ತ್ವವನ್ನು ಪ್ರಚಾರ ಮಾಡಿದ. ಸ್ವತಃ ನಾಟಕ ಮೂಲಕವಾಗಿಯೂ ಆತ ವೈಷ್ಣವ ತತ್ತ್ವವನ್ನು ಪ್ರಚಾರ ಮಾಡಿದ. ಸ್ವತಃ ನಾಟಕಗಳನ್ನೇ ತಾನೇ ರಚಿಸುತ್ತಿದ್ದ, ಪಾತ್ರವನ್ನೂ ವಹಿಸುತ್ತಿದ್ದ. ವೈಷ್ಣವ ಚಳುವಳಿ ಬಿರುಗಾಳಿಯಂತೆ ಭರದಿಂದ ಸಾಗಿತು. ಬೇರೆ ಬೇರೆ ಪಂಥದವರು ಇವನಿಗೆ ಶಿಷ್ಯರು ಆದರು. ಇವನ ವಿಚಾರ ಹೀಗಿತ್ತು-'ಬೇರಿಗೆ ನೀರು ಬಿಡುವುದ ರಿಂದ ರೆಂಬೆ, ಗೊಂಚಲು, ಎಲೆಗಳು ಪೋಷಿಸುವಂತೆ ವಿಷ್ಣುವನ್ನು ಪೂಜಿಸುವುದರಿಂದ ಮಿಕ್ಕ ದೇವರನ್ನು, ದೇವತೆಗಳನ್ನು ಪ್ರಸನ್ನಗೊಳಿಸ ಬಹುದು' ಎಂದು ಈ ವಿಚಾರಗಳು ಅನೇಕರಿಗೆ ಹಿಡಿಸಿದವು. ಅನೇಕರು ಇವನ ವಿಚಾರಕ್ಕೆ ಮಾರುಹೋಗಿ ಈತನ ಶಿಷ್ಯರಾದರು ಇವನಿಗೆ ಕಂಠಶ್ರೀ ಚೆನ್ನಾಗಿತ್ತು. ಸುಶ್ರಾವ್ಯವಾಗಿ ಹಾಡುತ್ತಿದ್ದ. ಇದರಿಂದ ಭಕ್ತರ ಸಂಖ್ಯೆ ಬೆಳೆದು ಶಂಕರದೇವನ ನೇತೃತ್ವದಲ್ಲಿ ಸಾಮೂಹಿಕ ಚಳುವಳಿ ನಡೆಯಿತು. ಈ ಚಳುವಳಿಯ ವಿಚಾರಧಾರೆ ಹೀಗಿತ್ತು; 'ಭಕ್ತಿ, ಜಾತಿ, ಮತ ಭೇದವಿಲ್ಲದೆ ಎಲ್ಲರಿಗೂ ನಿಲುಕುವಂತಹುದು. ಬ್ರಾಹ್ಮಣ, ಬ್ರಾಹ್ಮಣೇತರ ಎಲ್ಲರೂ ಒಂದೇ. ಬ್ರಾಹ್ಮಣನಿಂದ ಚಾಂಡಾಲನವರೆಗೂ ಹರಿಯ ಪ್ರೀತಿಗೆ ಪಾತರಾಗಲು ಎಲ್ಲರೂ ಅರ್ಹರು ಎಂದು ಸಾರಿದ.

ದೇವರಲ್ಲಿ ಭಕ್ತಿ ತೋರಿಸಲು ವಿದ್ಯಾವಂತನೇ ಆಗಬೇಕಿಲ್ಲ. ಯಾರು ಬೇಕಾದರೂ ಭಕ್ತರು ಆಗಬಹುದು. ಭಾಗವತ ತತ್ತ್ವವನ್ನು ತನ್ನ ಹಾಡುಗಳ ಮೂಲಕ ಅಸ್ಸಾಂ ಭಾಷೆಯಲ್ಲಿ ಮನೆ ಮನೆಗೂ ಮುಟ್ಟಿಸಿದ. ದೇವರ ಪೂಜೆಗೆ ಪೂಜಾರಿಗಳ ಅಗತ್ಯವಿಲ್ಲ ಎಂದು ಹೇಳಿದ. ಸ್ವತಂತ್ರವಾಗಿ ಎಲ್ಲರೂ ದೇವರನ್ನು ಪೂಜಿಸಬಹುದು ಎಂದು ತಿಳಿಸಿದ. ಇವನ ಕೆಲವು ಕ್ರಾಂತಿಕಾರಿ ವಿಚಾರಗಳು ಸಂಪ್ರದಾಯಸ್ಥರಿಗೆ, ಪೂಜಾರಿಗಳಿಗೆ ಹಿಡಿಸಲಿಲ್ಲ. ಮತ್ತು ವಿದ್ವಾಂಸರಿಗೂ ಹಿಡಿಸಲಿಲ್ಲ. ಹೀಗಾಗಿ ಅವನು ಇವರೆಲ್ಲರಿಂದ ತೊಂದರೆಗೊಳಗಾದ. ಆದರೂ ಅವನು ತನ್ನ ವಿಚಾರಗಳಿಗೆ ಬದ್ಧನಾಗಿದ್ದ. ಎಲ್ಲ ಪಂಡಿತರನ್ನು ಕರೆಯಿಸಿ ಅವರೊಂದಿಗೆ ಆಧಾರಪೂರ್ವಕವಾಗಿ ಚರ್ಚಿಸಿದ. ಅವನ ವಿಚಾರವೇ ಸರಿ ಎಂದು ಪಂಡಿತರು ತಲೆದೂಗುವಂತೆ ಮಾಡಿದ. ಇದರಿಂದ ಇವನ ಚಳುವಳಿ ಮತ್ತಷ್ಟು ಜನಪ್ರಿಯವಾಯಿತು. ಅಸ್ಸಾಂನ ಹರಿಜನರು, ಗಿರಿಜನರು, ಮಹಮದೀಯರು ಇವನ ಚಳುವಳಿಯಲ್ಲಿ ಭಾಗವಹಿಸಿದರು. ಇವರಲ್ಲಿ ಚಾಂದಸಾಮ್ ಎನ್ನುವ ದರ್ಜಿಯು ಉನ್ನತ ಮಟ್ಟದ ಸಾಧಕನಾಗಿದ್ದ. ಬ್ರಾಹ್ಮಣರಾದ ದಾಮೋದರ ದೇವ, ಹರಿದೇವ, ಅನಂತ ಕಂಡಾಲ ಇವರೂ ಇವನ ಹೊಸ ಮತಕ್ಕೆ ಸೇರಿದರು. ಶಂಕರದೇವನ ಚಳುವಳಿ ಅಲ್ಲಲ್ಲಿ ಗೋಷ್ಠಿಗಳನ್ನು ನಡೆಸುವುದು, ಜನಗಳಿಗೆ ದೀಕ್ಷೆ ಕೊಡುವುದು, ಧರ್ಮ ಪ್ರಚಾರ ಕಾರ್ಯ-ಹೀಗೆ ಭರದಿಂದ ಸಾಗಿತು. ವೈಷ್ಣವ ಭಕ್ತಿ

ಚಳುವಳಿ ಎಷ್ಟೇ ಭರದಿಂದ ಸಾಗಿದರೂ ಬ್ರಾಹ್ಮಣರು ಮತ್ತು ಪುರೋಹಿತರು ಅವನ ಹಿತಶತ್ರುಗಳು ಆಗೇ ಇದ್ದರು. ಈ ಚಳುವಳಿಯ ಬಗ್ಗೆ ಅವರು ಅಪಪ್ರಚಾರ ಮಾಡುತ್ತಿದ್ದರು. ಆ ಕಾಲದಲ್ಲಿ ರಾಜನಾಗಿದ್ದ ನರನಾರಾಯಣನಿಗೆ ದೂರುಗಳನ್ನು ಹೇಳಿ ಶಂಕರದೇವನಿಗೆ ಅಪಮಾನ ಮಾಡಲು ಮುಂದಾದರು. ಸಮಾಜದಲ್ಲಿ ಜನಗಳ ಭಾವನೆಯಲ್ಲಿ ಅಲ್ಲೋಲಕಲ್ಲೋಲವಾಗಿರುವುದನ್ನು ಕಂಡು ರಾಜನು ಇವನನ್ನು ಕೊಲ್ಲುವುದಾಗಿ ಘೋಷಿಸುತ್ತಾನೆ. ಅಷ್ಟೇ ಅಲ್ಲ, ಇವನ ಚರ್ಮದಿಂದ ಡೋಲನ್ನು ತಯಾರಿಸಿ ಅವನ ಮೂಳೆಗಳಿಂದ ಅದನ್ನು ಬಾರಿಸುವುದಾಗಿ ತಿಳಿಸುತ್ತಾನೆ. ಈ ವಿಚಾರವನ್ನು ತಿಳಿದು ಶಂಕರದೇವ ಕೆಲವು ಕಾಲ ಅಜ್ಞಾನವಾಸದಲ್ಲಿರುತ್ತಾನೆ. ಕೆಲವಾರು ತಿಂಗಳುಗಳ ನಂತರ ಮತ್ತೆ ಜನಗಳ ಮಧ್ಯೆ ಬರುತ್ತಾನೆ. ಮತ್ತೆ ಧರ್ಮ ಪ್ರಚಾರಕ್ಕೆ ತೊಡಗುತ್ತಾನೆ. ಅಷ್ಟು ಹೊತ್ತಿಗೆ ರಾಜ ನರನಾರಾಯಣನಿಗೆ ಇವನ ಆಧ್ಯಾತ್ಮ ಪ್ರವೃತ್ತಿ, ಸಮಾಜ ಸುಧಾರಣೆಯ ಕಳಕಳಿಯನ್ನು ಕಂಡು ತಾನು ಹಿಂದೆ ಮಾಡಿದ ಘೋಷಣೆಗೆ ಪಶ್ಚಾತ್ತಾಪ ಪಡುತ್ತಾನೆ ಮತ್ತು ತನಗೂ ವೈಷ್ಣವ ದೀಕ್ಷೆ ಕೊಡಬೇಕೆಂದು ಕೇಳಿಕೊಳ್ಳುತ್ತಾನೆ. ಆದರೆ ಶಂಕರದೇವನಿಗೆ ಸಂಶಯ ಬರುತ್ತದೆ. ಕಾರಣ ಮುಂದೆ ಒಂದು ದಿನ ಈ ಏಕಶರಣ ಪಂಥವನ್ನು ಬ್ರಾಹ್ಮಣರು ಮತ್ತು ಪುರೋಹಿತರು ಹಾಗೂ ರಾಜರು ಕೂಗಿ ಕೆಡಿಸಬಹುದು ಎಂದು ತಿಳಿದು ರಾಜನಿಗೆ ದೀಕ್ಷೆ ಕೊಡಲು ನಿರಾಕರಿಸುತ್ತಾನೆ.

ಹೀಗೆ ಅಸ್ಸಾಂನಲ್ಲಿ ಶಂಕರದೇವನ ಭಕ್ತಿ ಚಳುವಳಿ ದೊಡ್ಡ ಕ್ರಾಂತಿಯನ್ನೇ ಮಾಡಿತು. ಇವನ ಚಳುವಳಿ ಅಸ್ಸಾಂ, ಕಾಮರೂಪ, ಕೂಚ್ ಬಿಹಾರ್ ಎಲ್ಲ ಕಡೆಗೂ ಹರಡಿತು. ಈ ಚಳುವಳಿಯ ಮತ್ತೊಂದು ವೈಶಿಷ್ಟ್ಯವೆಂದರೆ ಮೂರ್ತಿಪೂಜೆಯ ನಿರಾಕರಣೆ. ದೇವರಿಗೆ ಮಂತ್ರದ ವಿನಾ ಬೇರೆ ರೂಪವಿಲ್ಲ. ದೇವರನ್ನ ಆಂತರಿಕವಾಗಿ ಪೂಜಿಸಬೇಕು. ಹೊರಗಡೆ ದೇವರನ್ನು ಹುಡುಕುವುದು ತಪ್ಪು. ಶಂಕರದೇವನ ಈ ಚಳುವಳಿಯಲ್ಲಿ ಎಲ್ಲರೂ ದೀಕ್ಷೆ ಪಡೆಯುತ್ತಿದ್ದರು. ಶೂದ್ರ ಗುರುಗಳಿಗೆ ಬ್ರಾಹ್ಮಣ ಶಿಷ್ಯರಿರುತ್ತಿದ್ದರು. ಶಂಕರದೇವನ ಶಿಷ್ಯರಲ್ಲಿ ಚಾಂದಸಾಮ್, ಜಯಹರಿ ಎನ್ನುವವರು ಮುಸಲ್ಮಾನರು. ಗೋವಿಂದ ಎನ್ನುವವನು ಗಾರೋ, ಜಯಾನಂದ ಭೂತಿಯ, ಜಯಂತಿ ಮಾಧವ ಕುಂಬಾರ, ಅಂಬಿಗನಾದ ಶ್ರೀರಾಮ, ಬನಿಯನಾದ ದಾಮೋದರ ಹಾಗೂ ಶ್ರೀರಾಮದೇವ, ಕೋಚಿನವರು, ಕಾಚಾರಿಗಳು, ಮಾರರು-ಹೀಗೆ ವಿವಿಧ ಜಾತಿಯ ಜನಗಳು ಈ ಏಕಶರಣ ಪಂಥದಲ್ಲಿ ಸಮಾವೇಶರಾಗಿದ್ದರು. ಅನೇಕ ಜನ ಗೃಹಸ್ಥರೂ ಇದ್ದರು. ಸ್ತ್ರೀಯರು ಮಾತ್ರ ಪುರುಷರೊಂದಿಗೆ ಬೆರೆತು ಗೋಷ್ಠಿಯಲ್ಲಿ ಸೇರಲು ಅವಕಾಶವಿರಲಿಲ್ಲ. ಆದರೂ ಅವರನ್ನು ಗೌರವದಿಂದ ಕಾಣಲಾಗುತ್ತಿತ್ತು. ಇವನ ಶಿಷ್ಯರು ಈ ಚಳುವಳಿಯಿಂದ ದುಶ್ಚಟಗಳನ್ನು ಬಿಟ್ಟು ಪವಿತ್ರ ಜೀವನ ನಡೆಸುವಂತಾದರು. ಜನಸಮೂಹ ದಲ್ಲಿ ತುಂಬಾ ಪರಿವರ್ತನೆಯಾಯಿತು. ಪ್ರಾಣಿಹಿಂಸೆ ನಿಷೇಧವಾಗಿದ್ದರೂ ಸಂತರು ಮತ್ತು ಶಿಷ್ಯರು ಮೀನುಗಳನ್ನು ತಿನ್ನಬಹುದಾಗಿತ್ತು. ಈ ಚಳುವಳಿ ಜನರನ್ನು

ದೈವಭಕ್ತಿಯ ಕಡೆ ಆಕರ್ಷಿಸಿ ನೀತಿವಂತರನ್ನಾಗಿ ಮಾಡಲು ಅನುವು ಮಾಡಿಕೊಟ್ಟಿತು. ಜನರ ಮತ-ಮತಗಳಲ್ಲಿ ಸಮಭಾವ ಮೂಡಿತು. ಅಸ್ಸಾಂ ಜನರ ಮನದಲ್ಲಿ ವೈಷ್ಣವ ಭಕ್ತಿ ಆಳವಾಗಿ ಬೇರೂರಿತು. ಅಸ್ಸಾಂನ ಭಾಷೆಗೆ ಬೆಲೆ ಬಂದಿತು. ಸಾಹಿತ್ಯದ ಪುನರುಜ್ಜೀವನವಾಯಿತು. ಈ ಚಳುವಳಿಯಿಂದ ನಾಮ ಸಂಕೀರ್ತನೆಗಳ ಮೂಲಕ ದ್ರುಪದ ರೀತಿಯ ಸಂಗೀತ ಶೈಲಿಯು ಹೆಚ್ಚು ಪ್ರಚಾರಕ್ಕೆ ಬಂತು.

ಶಂಕರದೇವ ಎಲ್ಲ ಕಡೆಗೂ ಪ್ರೀತಿಯ ಸಂದೇಶಗಳನ್ನು ಸಾರಿದ. ಸಾಧಾರಣ ಮನುಷ್ಯನ ಆತ್ಮವನ್ನು ಪುರೋಹಿತರಿಂದ ಬಿಡುಗಡೆ ಮಾಡಿದನು. 'ಪ್ರೀತಿಯಿಂದ ಕರೆದರೆ ದೇವರು ಓಗೂಡುತ್ತಾನೆ ಎಂದು ಸಾರಿದನು. ಈ ಭಕ್ತಿಪಂಥದಿಂದ ಜನರಲ್ಲಿ ಉಚ್ಚ ನೀಚ ಭೇದಭಾವಗಳು ಮಾಯವಾಗಿ ಎಲ್ಲರೂ ಒಂದಾಗಿ ಬಾಳುವಂತಾಯಿತು. ಈ ಮತ ಅನೇಕ ತೊಂದರೆಗಳನ್ನು ಎದುರಿಸಿತು. ಆದರೂ ಸಾಮಾಜಿಕವಾಗಿ ಒಳ್ಳೆಯ ವಾತಾವರಣವನ್ನುಂಟುಮಾಡಿತು. ಕಾಮರೂಪ ರಾಜ್ಯ ಬದಲಾವಣೆ ಯನ್ನು ಹೊಂದಿತು. ಶಂಕರದೇವನಿಂದ ಪುನರ್ಜನ್ಮವನ್ನೆ ಪಡೆಯಿತು. ಈ ಭಕ್ತಿಘಂಥದ ಅತ್ಯಂತ ಮಹತ್ವದ ಕ್ರಾಂತಿಕಾರಿ ವಿಚಾರವೆಂದರೆ ಸರಳ ಪದ್ಧತಿಯಿಂದ ದೇವರನ್ನು ಪೂಜಿಸುವುದು. ಅಂದರೆ ವಿಷ್ಣು ಅಥವಾ ಕೃಷ್ಣನ ಪ್ರತಿಮೆಯನ್ನು ಸ್ಥಾಪಿಸಿದರೆ ಅದರ ಪೂಜೆಗೆ ಬ್ರಾಹ್ಮಣರೇ ಬೇಕಾಗುತ್ತಿತ್ತು. ಇದಕ್ಕೆ ಬದಲಾಗಿ ಪ್ರಾರ್ಥನಾ ಮಂದಿರದಲ್ಲಿ ಭಕ್ತರೆಲ್ಲ ಕೀರ್ತನೆಗಳನ್ನು ಹಾಡುವ ಸ್ಥಳಗಳಲ್ಲಿ ಎತ್ತರವಾದ-ಪೀಠದಲ್ಲಿ ಮೇಲೆ ಧರ್ಮಗ್ರಂಥವನ್ನು ಇಟ್ಟು ಪೂಜಿಸುವ ಆಚರಣೆಯನ್ನು ರೂಢಿಗೆ ತಂದ. ಈ ಬದಲಾವಣೆ ಬ್ರಾಹ್ಮಣರನ್ನು ರೊಚ್ಚಿಗೆಬ್ಬಿಸಿತು. ಶಂಕರದೇವನನ್ನು ವಿಗ್ರಹಭಂಜಕನೆಂದು ಅವರು ಸಾರಿದರು. ಹೀಗೆ ಶಂಕರದೇವ ತನ್ನ ಅನೇಕ ಕ್ರಾಂತಿಕಾರಿ ವಿಚಾರ ಮತ್ತು ಆಚರಣೆಗಳಿಂದ ಅಸ್ಸಾಂನಲ್ಲಿ ಜನ ಸಮೂಹದ ದಿಕ್ಕನ್ನೇ ಬದಲಾಯಿಸಿದ. ಕೊನೆಗೆ ಅವನು ೧೪೯೦ರಲ್ಲಿ ನಿಧನನಾದ. ಅವನ ಅಂತ್ಯ ಸಂಸ್ಕಾರಕ್ಕೆ ಮಹಾರಾಜ ಗೌರವದಿಂದ ಎಲ್ಲ ವ್ಯವಸ್ಥೆ ಮಾಡಿದ. ಟೋರೋಜಾ ನದಿಯ ದಂಡೆಯಲ್ಲಿ ಅವನಿಗೆ ಅಗ್ನಿ ಸಂಸ್ಕಾರ ಮಾಡಲಾಯಿತು. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತರು ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಿ ತಮ್ಮ ಕಣ್ಣೀರಿನಿಂದ ಶ್ರದ್ಧಾಂಜಲಿ ಅರ್ಪಿಸುತ್ತಾರೆ.

ಉತ್ತರಪ್ರದೇಶದ ಭಕ್ತಿಚಳುವಳಿ (ಕಬೀರ ಪಂಥ)

ಕ್ರಿ.ಶ.೧೪-೧೫ನೇ ಶತಮಾನ

ಕ್ರಿ. ಶ. ೧೪-೧೫ ಶತಮಾನದಲ್ಲಿ ಭಾರತದಲ್ಲಿ ಮುಸಲ್ಮಾನರು ರಾಜ್ಯಭಾರ ನಡೆಸುತ್ತಿದ್ದರು. ಅವರು ಉಳಿದ ಧರ್ಮಗಳ ಮೇಲೆ ತಮ್ಮ ಪ್ರಭಾವವನ್ನು ಬೀರಿದರು. ಇಸ್ಲಾಂ ಅರಸರ ದಬ್ಬಾಳಿಕೆಗೆ ಹಿಂದೂಗಳು ಒಳಗಾದ ಪ್ರಸಂಗಗಳು ಇವೆ. ಮತ್ತು ಕೆಳವರ್ಗಗಳ ಮೇಲೂ ಅವರ ದಬ್ಬಾಳಿಕೆ ನಡೆದಿತ್ತು. ಆಗ ಭಾರತೀಯ ಸಮಾಜ ವರ್ಣ ಪದ್ಧತಿಯ ವ್ಯವಸ್ಥೆಯಿಂದ ಜಾತಿ, ಉಪಜಾತಿಗಳಲ್ಲಿ ಒಡೆದು ಚೂರು ಚೂರಾಗಿ ಹೋಗಿತ್ತು ಇಸ್ಲಾಂ ಸಂಸ್ಕೃತಿ ಹಿಂದೂ ಸಂಸ್ಕೃತಿಯನ್ನು ನಾಶಗೊಳಿಸಲು ಪ್ರಯತ್ನಿಸಿದರೆ, ಹಿಂದೂಗಳಲ್ಲೆ ಅನೈಕ್ಯತೆ ಇತ್ತು. ಹೀಗಾಗಿ ಹಿಂದೂ- ಮುಸಲ್ಮಾನರು ಪರಸ್ಪರ ದ್ವೇಷ, ಅಸೂಯೆಗಳಿಂದ ಕಾಲ ಕಳೆಯುತ್ತಿದ್ದರು. ಆದರೂ ಒಟ್ಟಿಗೆ ಇರಬೇಕಾದ ಅನಿವಾರ್ಯತೆ ಇತ್ತು. ಭಾರತದಲ್ಲಿ ಅನೇಕ ಮತ, ಪಂಥಗಳು ಯಂತ್ರ, ಮಂತ್ರ, ವಶೀಕರಣ, ಮಾಯ, ಮಾಟಗಳಿಂದ ತುಂಬಿಹೋಗಿದ್ದವು. ಕರ್ಮಕಾಂಡದ ಹಾವಳಿ ಹೆಚ್ಚಾಗಿ ನಡೆದಿತ್ತು. ಪ್ರಾಣಿವಧೆ-ಯಜ್ಞ ಯಾಗಾದಿಗಳಿಂದ ಮುಲ್ಲಾ- ಮೌಲ್ವಿಗಳು, ಪುರೋಹಿತರು ಅಟ್ಟಹಾಸದಿಂದ ಮೆರೆಯುತ್ತಿದ್ದರು. ಇಂತಹ ಸಂದರ್ಭದಲ್ಲಿ ಭಕ್ತಿಕಾಲದ ಯುಗಪ್ರವರ್ತಕನಾಗಿ, ಸಮಾಜದ ಸುಧಾರಕನಾಗಿ, ಸಮಾನತೆಯ ಹರಿಕಾರನಾಗಿ, ಮಾನವ ಪ್ರೇಮಿಯಾದ, ಮಂಗಳಮೂರ್ತಿ ಕಬೀರನ ಆಗಮನವಾಗುತ್ತದೆ.

ಕಬೀರನ ಜನನದ ಬಗ್ಗೆ ವಾದ-ವಿವಾದಗಳಿವೆ. ಆದರೂ ಡಾ: ಶ್ಯಾಮಸುಂದರದಾಸ್ ಅವರ ಅಭಿಪ್ರಾಯದಂತೆ ಕಬೀರದಾಸ್ ಹುಟ್ಟಿನಿಂದ ಹಿಂದುವಾಗಿ ಮುಸಲ್ಮಾನರ ಕುಟುಂಬದಲ್ಲಿ ಬೆಳೆದುದರಿಂದ ಅವನಲ್ಲಿ ಎರಡೂ ಸಂಸ್ಕೃತಿಗಳ ಸಮನ್ವಯ ಇದೆ ಎಂದು ಬಹಳ ಜನ ವಿದ್ವಾಂಸರ ಅಭಿಪ್ರಾಯ ಕಬೀರನ ಜನನ ೧೩೯೮ ಹಾಗೂ ಕ್ರಿ. ಶ. ೧೫೧೮ ಎಂದು. ಕಬೀರದಾಸ್ ಸುಮಾರು ೧೨೦ ವರ್ಷ ಬದುಕಿದ್ದಿರಬೇಕೆಂದು ಹೇಳುತ್ತಾರೆ. ಕಬೀರದಾಸನು ಮಗಹರ್‌ದಲ್ಲಿ ಹುಟ್ಟಿ ಕಾಶಿಯಲ್ಲಿ ಬಹಳ ಕಾಲ ಇದ್ದು ಧರ್ಮ ಪ್ರಸಾರ ಮಾಡಿ ಕಡೆಯ ದಿನಗಳನ್ನು ಮಗಹರ್‌ನಲ್ಲಿ ಕಳೆದ ಎಂದು ಹೇಳುತ್ತಾರೆ. ಈತ ಗೃಹಸ್ಥನಾಗಿದ್ದ. ಲೋಹಿ ಎಂಬ ಪತ್ನಿ ಕಮಾಲೆ ಎಂಬ ಪುತ್ರ ಹಾಗೂ ಕಮಾಲಿ ಎಂಬ ಪುತ್ರಿ ಇದ್ದಳು. ಕಬೀರ

ಗೃಹಸ್ಥನಾಗಿ ನೇಕಾರ ಕೆಲಸ ಮಾಡಿಕೊಂಡಿದ್ದ. ಕಬೀರನ ಗುರು ಸ್ವಾಮಿ ರಮಾನಂದರು ಕಬೀರನಿಗೆ ಚಿಕ್ಕ ವಯಸ್ಸಿನಿಂದ ದೈವಭಕ್ತಿ ಇತ್ತು. ಸಂಪ್ರದಾಯದ ಮನೆಯಲ್ಲಿ ಬೆಳೆದು ಬಂದಿದ್ದ. ಕಬೀರನು ಒಬ್ಬ ಒಳ್ಳೆಯ ಗುರುವನ್ನು ಹುಡುಕುತ್ತಿದ್ದ. ಅವನ ಅಗಾಧ ಶ್ರದ್ಧೆ, ದೈವಭಕ್ತಿಯನ್ನು ಕಂಡು ಉತ್ತರ ಭಾರತದ ಸದ್ಗುರು ರಮಾನಂದರು ಈತನನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಕಬೀರ್ ಜುಲಾಹಾ (ನೇಕಾರ) ಎಂದು ಹಿಂದೂಗಳು ಹೀನಾಯವಾಗಿ ಕಾಣುತ್ತಿದ್ದರು. ಮುಸಲ್ಮಾನರ ಆಗಮನದಿಂದ ಈ ಜುಲಾಹಾಗಳು ಇಸ್ಲಾಂ ಧರ್ಮ ಸ್ವೀಕರಿಸಿದರು. ಇವನ ಜಾತಿಯನ್ನು ಸಂಪ್ರದಾಯಸ್ಥರು ಕೀಳಾಗಿ ಕಾಣುತ್ತಿದ್ದರು. ಸುತ್ತಮುತ್ತಲಿನ ವಾತಾವರಣವನ್ನು ಕಂಡು ಅವನು ರೋಸಿಹೋಗಿದ್ದ. ಕಬೀರದಾಸ ಸ್ವತಂತ್ರವಾಗಿ ಆಲೋಚಿಸುತ್ತಿದ್ದ. ನಿರ್ಭಿಡೆಯಿಂದ ಯಾರ ಮುಲಾಜೂ ಇಲ್ಲದೆ ಮೂಢ ನಂಬಿಕೆಗಳನ್ನು, ಸಂಪ್ರದಾಯಗಳನ್ನು ತೀವ್ರವಾಗಿ ಖಂಡಿಸುತ್ತಿದ್ದ. ಶಾಸ್ತ್ರ, ಪುರಾಣ, ಕಂದಾಚಾರ, ಕರ್ಮಕಾಂಡಗಳನ್ನು ವಿರೋಧಿಸುತ್ತಿದ್ದ. ಹಿಂದೂ ಮುಸ್ಲಿಮರ ಬಾಹ್ಯಡಂಬರಗಳನ್ನು, ಧರ್ಮದ ಮಿಥ್ಯಾಚಾರಗಳನ್ನು ಖಂಡಿಸಿದ. ಇವನು ಕವನಗಳನ್ನು ರಚಿಸುತ್ತಿದ್ದ. ಇವನ ದೋಹೆಗಳು ಹಿಂದಿ ಭಕ್ತಿ ಸಾಹಿತ್ಯದಲ್ಲಿ ಪ್ರಸಿದ್ಧವಾಗಿವೆ. ಜನಸಮೂಹದ ಬಳಕೆಯ ಭಾಷೆಯನ್ನು ಈತ ಬಳಸುತ್ತಿದ್ದ. ಹಾಗೂ ಬೇರೆ ಬೇರೆ ಪ್ರದೇಶದ ಭಾಷೆಯನ್ನೂ ತನ್ನ ಕಾವ್ಯದಲ್ಲಿ ಬಳಸುತ್ತಿದ್ದ. ಇವನ ಭಾಷಾ ಶೈಲಿಗೆ ಸಮ್ಮಿಶ್ರ ಭಾಷೆ, ಮಿಲಿಜುಲಿ, ಪಂಚರಂಗಿ ಭಾಷೆಗಳೆಂದು ಹೇಳುತ್ತಾರೆ. ಕಬೀರ ಹಿಂದೂ ಮತ್ತು ಮುಸಲ್ಮಾನರ ಐಕ್ಯತೆಗಾಗಿ ಹೋರಾಟ ಮಾಡಿದ. ಸತ್ಯವನ್ನು ನಿರ್ಭಯವಾಗಿ ಬಿಚ್ಚಿಡುತ್ತಿದ್ದ. ಕಬೀರದಾಸ ಸದಾ ಸಂಚಾರದಲ್ಲಿ ಇರುತ್ತಿದ್ದ. ಮತ್ತು ಸಾಧು ಸಂತರೊಂದಿಗೆ ಚರ್ಚಿಸಿ ತನ್ನ ಸಂದೇಹ, ಸಂಶಯಗಳನ್ನು ಪರಿಹರಿಸಿಕೊಳ್ಳುತ್ತಿದ್ದ. ಅನೇಕ ದಾರ್ಶನಿಕ ವಿಚಾರ ಮತ್ತು ಯೋಗವಿದ್ಯೆಯನ್ನು ಸಾಧು ಸಂತರ ಸಂಪರ್ಕದಿಂದ ಕಲಿತುಕೊಂಡಿದ್ದ. ಇವನ (ಕಬೀರನ) ತಂದೆಯ ಧಾರ್ಮಿಕ ಶ್ರದ್ಧೆ ಆಚರಣೆಗಳು ಇವನ ಜೀವನ ದೃಷ್ಟಿಗೆ ಮಾರ್ಗದರ್ಶನ ನೀಡಿತು. ಕಬೀರದಾಸನು ಓದು, ಬರಹ ಬಾರದ ನಿರಕ್ಷರಿ ಆಗಿದ್ದ. ಲೋಕಾನುಭವವೇ ಅವನ ವಿದ್ಯೆಯಾಗಿ ಲೋಕವೇ ಪಾಠಶಾಲೆಯಾಗಿತ್ತು. 'ಮಸಿ ಕಾಗದ ಹಿಡಿದೇ ಇಲ್ಲ ಲೆಕ್ಕಣಿಕೆ ಗೊತ್ತೇ ಇಲ್ಲ' ಎಂದು ಅವನೇ ಹೇಳುತ್ತಾನೆ. ಕಬೀರದಾಸನು ಹಿಂದೂ ಮುಸಲ್ಮಾನರ ಬಾಹ್ಯಾಡಂಬರಗಳನ್ನು ಒಟ್ಟಾಗಿಯೇ ಖಂಡಿಸುತ್ತಾನೆ. ಮುಲ್ಲಾಗಳು -'ಬೀರಿ ಬೀರಿ ನಮಾಜದ ಕೂಗು ಹಾಕುವುದು ಬಾಹ್ಯಾಡಂಬರದ ಪ್ರದರ್ಶನ. ಅಲ್ಲಾಹನು ಇರುವೆಯ ಕಾಲಿನ ಗೆಜ್ಜೆಯ ಸಪ್ಪಳವನ್ನು ಕೇಳಬಲ್ಲ. ಆದರೆ ನೀವು ದೇವರು ಕಿವುಡನೇನೋ ಎಂಬಂತೆ ಚೀರುವಿರಿ' ಎಂದು ಹೇಳುತ್ತಾನೆ. ಹಿಂದುಗಳ ಮೂರ್ತಿಪೂಜೆಯನ್ನು ಖಂಡಿಸುತ್ತಾ 'ಕಲ್ಲು ಪೂಜೆಯಿಂದ ದೇವರು ಸಿಕ್ಕರೆ ಕಲ್ಲು ಗುಡ್ಡವನ್ನೇ ಪೂಜಿಸುತ್ತೇನೆ' ಎಂದು ವಿಡಂಬಿಸುತ್ತಾನೆ.

ಕಬೀರನ ಇಂತಹ ನಿರ್ಭಯ ವಿಚಾರಗಳಿಗೆ ಜನ ಆಶ್ಚರ್ಯ ವ್ಯಕ್ತಪಡಿಸುತ್ತಿದ್ದರು.

ಅದಕ್ಕಾಗಿ ಈತ ಮೌಲ್ವಿಗಳ ಕಾಟವನ್ನು ಅನುಭವಿಸಬೇಕಾಯಿತು. ಮೌಲ್ವಿಗಳು ಸಿಕಂದರ್ ಲೋದಿಯ ಹತ್ತಿರ ಅನೇಕ ದೂರುಗಳನ್ನು ಒಯ್ದರೆಂದೂ, ಸಿಕಂದರ್ ಲೋದಿ ಕಬೀರನಿಗೆ ಅನೇಕ ಯಾತನೆಗಳನ್ನು ಕೊಟ್ಟರೆನ್ನುವ ಉಲ್ಲೇಖವಿದೆ. ಕಬೀರ ತನ್ನ ತತ್ತ್ವ ಪ್ರಚಾರಕ್ಕಾಗಿ ರಾಜಸ್ತಾನ್, ಗುಜರಾತ್, ಜಗನ್ನಾಥ ಪುರಿ, ಪಂಢರಪುರ, ಮಾಣಿಕಪುರ, ಮಕ್ಕ ಮದೀನಾದವರೆಗೆ ಸಂಚಾರ ಮಾಡುತ್ತಿದ್ದ. ಇವನನ್ನು 'ಘಮಕ್ಕಡ' ಎಂದೇ ಕರೆಯುತ್ತಿದ್ದರು. ಅಂದರೆ ಅರ್ಥ 'ಪ್ರವಾಸಪ್ರಿಯ' ಎಂದು.

ಭಾರತೀಯ ಸಮಾಜ ಕಬೀರನ ಕಾಲದಲ್ಲಿ ವರ್ಣವ್ಯವಸ್ಥೆಯಿಂದ, ಮೇಲು ಕೀಳು ಭಾವನೆಯಿಂದ ಸಾಕಷ್ಟು ಹೋಳು ಹೋಳಾಗಿತ್ತು. ಅಸ್ಪೃಶ್ಯನಂತೂ ಅಪಮಾನಿತನಾಗಿ ಪ್ರಾಣಿಯಂತೆ ಜೀವನ ನಡೆಸುತ್ತಿದ್ದ. ಶಿಕ್ಷಣದಿಂದ ವಂಚಿತನಾಗಿದ್ದ. ಆ ಕಾಲದಲ್ಲಿ ಎಲ್ಲ ಅವಕಾಶಗಳು ಬ್ರಾಹ್ಮಣರ ಮತ್ತು ಆಳುವ ವರ್ಗದ ಮುಸಲ್ಮಾನರ ಸೊತ್ತಾಗಿದ್ದವು. ಸಾಮಾಜಿಕ ವ್ಯವಸ್ಥೆಯ ಏಣಿಯಲ್ಲಿ ಮೇಲಿನ ಮಟ್ಟದಲ್ಲಿ ಬ್ರಾಹ್ಮಣ ಮುಸಲ್ಮಾನರಿದ್ದರೆ ಕೆಳಗಿನ ಶ್ರೇಣಿಯಲ್ಲಿ ಅಂತ್ಯಜ ನಿಂತಿದ್ದ. ಆರೋಗ್ಯಕರ ಸಮಾಜವನ್ನು ಕಟ್ಟಬೇಕುನ್ನುವ ಸಂತರು ಜಾತಿ ಹೆಸರಿನಿಂದ ಸಮಾಜ ಒಡೆದುಹೋಗುವುದನ್ನು ಮನಗಂಡು ಅನಿಷ್ಟ ಜಾತಿ ಪದ್ಧತಿಯನ್ನೇ ನಿರಾಕರಿಸುತ್ತಾನೆ. ಕಬೀರನಂತೂ ವರ್ಣವ್ಯವಸ್ಥೆ ಮತ್ತು ಜಾತಿ ಪದ್ಧತಿಯನ್ನೇ ನಿರಾಕರಿಸುತ್ತಾನೆ. ಆತ ಹೇಳುತ್ತಾನೆ- 'ಅಯ್ಯೋ ಮೂರ್ಖ, ಈ ಜಗತ್ತಿನಲ್ಲಿ ಮೇಲು ಕೀಳೆಂಬುದಿಲ್ಲ, ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿ ತನ್ನನ್ನು ಶ್ರೇಷ್ಠನೆಂದು ಹೇಳಿಕೊಳ್ಳುವವನು ಎಲ್ಲರಂತೆಯೇ ಹುಟ್ಟಲಿಲ್ಲವೇ' ಎಂದು ಪ್ರಶ್ನಿಸಿ 'ಹುಟ್ಟಿನಿಂದ ಯಾರು ಶ್ರೇಷ್ಠರಲ್ಲ ಅಥವಾ ಕನಿಷ್ಠರಲ್ಲ, ಯೋಗ್ಯವಾದ ನಡೆ-ನುಡಿಯಿಂದ ವ್ಯಕ್ತಿ ಶ್ರೇಷ್ಠನಾಗುತ್ತಾನೆ' ಎಂದು ನಾಮ, ತಿಲಕ ಹಣೆಗೆ ಹಚ್ಚಿ, ವಿವೇಕವಿಲ್ಲದೆ ಅನ್ಯರ ಬಗ್ಗೆ ಪ್ರೀತಿ ಪ್ರೇಮಗಳಿಲ್ಲದಿದ್ದರೆ ವ್ಯರ್ಥ ಎಂದು ವಿಡಂಬಿಸುತ್ತಾನೆ. ಮತ್ತೆ ಹೇಳುತ್ತಾನೆ 'ಹುಟ್ಟಿನಿಂದಲೇ ವ್ಯಕ್ತಿ ದೊಡ್ಡವನೆಂದು ಎನಿಸಿಕೊಳ್ಳುವುದಾದರೆ ಬಂಗಾರದ ಬಾಟಲಿಯಲ್ಲಿ ತುಂಬಿದ ಹೆಂಡವು ಶ್ರೇಷ್ಠವೆಂದೇ ಹೇಳಬೇಕಾಗುತ್ತದೆ. ಎಂದು ಉಚ್ಚಕುಲದವರ ಭ್ರಮೆಯನ್ನು ಹಂಗಿಸುತ್ತಾನೆ. ಬ್ರಾಹ್ಮಣ-ಶೂದ್ರರೆಲ್ಲರೂ ಮನುಷ್ಯರೇ. ಅವರೆಲ್ಲ ಸಮಾನರು ಎಂದು ಪ್ರತಿಪಾದಿಸುತ್ತಾನೆ. ಕಬೀರರ ಕಾಲದಲ್ಲಿ ಹಿಂದೂ ಮುಸ್ಲಿಮರ ಘರ್ಷಣೆ ಇದ್ದೇ ಇತ್ತು. ಆಳರಸರು ಇಸ್ಲಾಂ ಧರ್ಮ ಪ್ರಚಾರಕ್ಕಾಗಿ ದಬ್ಬಾಳಿಕೆಯ ಮಾರ್ಗಹಿಡಿದಿದ್ದರು. ಒತ್ತಾಯದಿಂದ ಹಿಂದೂಗಳನ್ನು ಮತಾಂತರ ಗೊಳಿಸುತ್ತಿದ್ದರು. ಹಿಂದೂಗಳು ಅಸಹಾಯಕ ಸ್ಥಿತಿಯಲ್ಲಿದ್ದರು. ಮುಸಲ್ಮಾನರು ಅಹಂಕಾರದಲ್ಲಿ ಮೆರೆಯುತ್ತಿದ್ದರು. ಕಬೀರ ಎರಡೂ ಸಮಾಜದವರಿಗೂ ವಿವೇಕವನ್ನು ಹೇಳುತ್ತಾನೆ. 'ಹಿಂದೂ ಮುಸ್ಲಿಂ ಎಂಬ ಭೇದ ಭಾವ ಎಲ್ಲಿಂದ ಬಂತು? ವಿಚಾರಿಸಿ ನೋಡಿದರೆ ರಾಮ-ರಹೀಂ ಬೇರೆ ಅಲ್ಲ, ಈ ಭೇದ ಭಾವ ವ್ಯರ್ಥ. ನೀವೆಲ್ಲಾ ಒಂದೇ ಎಂದು ಎಚ್ಚರಿಸುತ್ತಾನೆ. ಹಿಂದೂ ಮುಸ್ಲಿಮರ ಸಂಸ್ಕಾರವನ್ನು ಅಲ್ಲಗಳೆಯುತ್ತಾ,

'ಸುನ್ನತಿ ಮತ್ತು ಜನಿವಾರ ಸುಳ್ಳಯ್ಯ, ಹಿಂದೂ ಮುಸ್ಲಿಂಗೆ ಇದು ತಿಳಿಯದಯ್ಯ' ಎಂದು ವಿಡಂಬಿಸುತ್ತಾನೆ. ಮತ್ತೆ ಹೇಳುತ್ತಾನೆ; 'ಹಿಂದೂ ಮುಸ್ಲಿಮರಲ್ಲಿ ತಾತ್ವಿಕವಾಗಿ ಭೇದವೇ ಇಲ್ಲ, ಯಾರೋ ಸ್ವಾರ್ಥಿಗಳು ಇವರ ಮಧ್ಯೆ ಬೆಂಕಿ ಇಟ್ಟಿದ್ದಾರೆ. ಧರ್ಮ ಇರುವುದು ಮನುಷ್ಯರಿಗೆ ಪ್ರೀತಿಸುವ ಪಾಠ ಕಲಿಸಲಿಕ್ಕೆ ಹೊರತು ಕಚ್ಚಾಡುವುದಕ್ಕಲ್ಲ ಎನ್ನುವ ವಾದ ಅವನದು. ಇಂದಿನ ಭಾರತೀಯ ಸಂದರ್ಭದಲ್ಲಿ ಭಾವೈಕ್ಯತೆ ಕೋಮು ಸೌಹಾರ್ದತೆಯ ಅನಿವಾರ್ಯತೆಗಾಗಿ ಕಬೀರದಾಸರ ಈ ವಿಚಾರಗಳು ಅತ್ಯಂತ ಪ್ರಸ್ತುತ ಎನಿಸುತ್ತವೆ.

ಕಬೀರದಾಸ ಸಮಾಜದ ಮೇಲು ಕೀಳು ಎಂಬ ಭಾವನೆ ಕಿತ್ತೊಗೆದು ಮಾನವೀಯತೆಯ ಭಾವದಿಂದ ಸಮಾಜವನ್ನು ಕಟ್ಟಲು ಪ್ರಯತ್ನಿಸಿದನು. ಇದರ ಪರಿಣಾಮವಾಗಿ ಕೆಳಜಾತಿ, ಕೆಳವರ್ಗದ ಜನ ಸ್ವಾಭಿಮಾನಿಗಳಾಗಿ ತಂಡೋಪ ತಂಡವಾಗಿ ಬಂದು ಕಬೀರನ ಅನುಯಾಯಿಗಳಾದರು. ಏಕವ್ಯಕ್ತಿಯಿಂದ ಆರಂಭವಾದ ಈ ಪಂಥ ಜನಸಮೂಹದಿಂದೊಡಗೂಡಿ ಭಕ್ತಿ ಚಳುವಳಿಯ ಸ್ವರೂಪ ಪಡೆಯಿತು. ಕಬೀರನ ಮುಖ್ಯ ತತ್ವಗಳನ್ನು ಹೀಗೆ ಹೇಳಬಹುದು. ಅವನು ಸಂಗ್ರಹ ಪ್ರವೃತ್ತಿಯನ್ನು ಖಂಡಿಸುತ್ತಾನೆ. ಜನವಿರೋಧಿ ಶಿಕ್ಷಣದ ವಸ್ತುವಾದ ಗ್ರಂಥಜ್ಞಾನವನ್ನೂ ವಿರೋಧಿಸುತ್ತಾನೆ. ಜನರ ಬದುಕೇ ಒಂದು ಮಹಾಗ್ರಂಥ, ಗ್ರಂಥಸ್ಥ ಜ್ಞಾನಕ್ಕಿಂತ ಸ್ವಾನುಭವವೇ ಮೇಲು ಎನ್ನುತ್ತಾನೆ.

'ನೀ ಗ್ರಂಥದ್ದು ಮಾತಾಡು ನಾ ಕಂಡದ್ದು ಮಾತಡುವೆ' (ತೂ ಕಹತಾ ಕಾಗಜಿ ಕಿ ಲೇಖ್ ಮೈ ಕಹತಾ ಹೂ ಆಂಖಿನ್ ದೇಖಿ') ಗ್ರಂಥ ಜ್ಞಾನದಿಂದ ಅಹಂಕಾರ ಮೂಡುತ್ತದೆ. ಪ್ರೇಮ ಮಾತ್ರ ಮನುಷ್ಯನನ್ನು ಮನುಷ್ಯನ ಹತ್ತಿರಕ್ಕೆ, ಸಮಾಜದ ಹತ್ತಿರಕ್ಕೆ ತರುತ್ತದೆ. ಗ್ರಂಥ ಓದಿ ಓಧಿ ಜಗವೆಲ್ಲ ಸತ್ತಿತ್ತು. ಜಾಣನಾಗದೆಯೇ ಅದು ಉಳಿಯಿತು ಎಂದು ಬರೀ ಪುಸ್ತಕದ ಬದನೇಕಾಯಿಯಾದ ಪಂಡಿತರನ್ನು ಕುರಿತು ಹೇಳುತ್ತಾನೆ. ಬ್ರಾಹ್ಮಣರು ವೇದಾಧ್ಯಾಯನದಲ್ಲಿ ನಿರತರಾಗಿ ಎಲ್ಲ ಸಮಸ್ಯೆಗಳಿಗೂ ವೇದದಲ್ಲೇ ಉತ್ತರ ಹುಡುಕುತ್ತಿದ್ದವರನ್ನು ಕಂಡು ಕಬೀರ ಹೇಳುತ್ತಾನೆ-'ಸುತ್ತಿ ಸುತ್ತಿ ಸಾಯುತ್ತಾನಲ್ಲ ನಾಲ್ಕು ವೇದಗಳಲ್ಲಿ' ಎಂದು ಗುಡುಗುತ್ತಾನೆ.

ಕಬೀರದಾಸನ ಭಕ್ತಿ ಚಳುವಳಿ ಕೆಳಜಾತಿ ವರ್ಗಗಳಿಂದ ಬಂದ ವಿವಿಧ ವೃತ್ತಿಯ ಜನ ಸಮೂಹವನ್ನು ಆಕರ್ಷಿಸಿತು. ಕಬೀರನ ವಿಚಾರ ವೈಖರಿಗೆ ಅನೇಕರು ತಲೆ ಬಾಗಿದರು. ಹಿಂದುಳಿದ ಜನಾಂಗಕ್ಕೆ ಕಬೀರದಾಸ ಜ್ಞಾನದ ಬಾಗಿಲನ್ನು ತೆರೆದ, ವಿಚಾರಿಸಿ ಆಲೋಚಿಸುವುದನ್ನೂ ಕಲಿಸಿದ. ಕಬೀರನು ಮಹಿಳೆಯನ್ನು ಮಾಯೆ, ಚಂಚಲೆ ಎಂದು ಕರೆಯುತ್ತಾನೆ. ಆದರೆ ತಾಯಿಯಾಗಿ ಆಕೆಯನ್ನು ಗೌರವಿಸುತ್ತಾನೆ. ಕಬೀರ ದಾಸದ ಭಕ್ತಿ ಚಳುವಳಿಯ ಸಮೂಹದಲ್ಲಿ ದಯಾಬಾಯಿ, ಸಹಜೋಬಾಯಿ

ಎಂಬಿಬ್ಬರು ಮಹಿಳೆಯರು ಸಂತರಾಗಿ ಹೋದದ್ದು ಕಂಡುಬರುತ್ತದೆ. ಕಬೀರನ ಕಾಲದಲ್ಲಿ ಸಮಾಜದಲ್ಲಿ ಮೂಢನಂಬಿಕೆಗಳು ಅಂಧಶ್ರದ್ಧೆಗಳು ತಾಂಡವವಾಡುತ್ತಿದ್ದವು. ನರಬಲಿ, ತೀರ್ಥಾಟನೆ, ಗುಡಿಗುಂಡಾರ ಸುತ್ತಾಡುವುದು, 'ಏಕಾದಶಿ, ಶಿರಮಂಡನ, ಜಗನ್ನಾಥಪುರಿ ರಥದ ಕೆಳಗೆ ಬಿದ್ದು ಅಸು ನೀಗುವುದು ಕಾಶಿಯಲ್ಲಿ ಮುಳುಗಿ (ಗಂಗೆಯಲ್ಲಿ) ಪ್ರಾಣ ಬಿಡುವುದು, ನಾಮತಿಲಕ ಮುದ್ರೆ ಹಾಕುವುದು, ಮುಗ್ಧರನ್ನು ಧರ್ಮದ ಹೆಸರಿನಿಂದ ಸುಲಿಯುವುದು ಎಲ್ಲೆಡೆ ನಡೆಯುತ್ತಿತ್ತು. ಇದಕ್ಕೆ ಕಾರಣ ಜನಸಾಮಾನ್ಯರ ಅಜ್ಞಾನ ಮತ್ತು ಬಡತನ. ಇಂತಹ ಸಂಪ್ರದಾಯಗಳ ಮೇಲೆ ಹರಿತವಾದ ವಿಚಾರಧಾರೆಯನ್ನು ಹರಿಸಿ ಇವುಗಳನ್ನು ನಿವಾರಿಸಲು ಜನಸಮೂಹವನ್ನು ವೈಚಾರಿಕತೆಯ ಕಡೆ ಕೊಂಡೊಯ್ಯಲು ಕಬೀರನ ಭಕ್ತಿ ಚಳುವಳಿ ಪ್ರಯತ್ನಿಸಿತು.

ಕಬೀರನ ವಿಚಾರ ವೈಖರಿ ಹೀಗಿದೆ; ಅವನು ಹೇಳುತ್ತಾನೆ. 'ಕೂದಲುಗಳೇನು ಮಾಡಿವೆ? ಪಾಪ ನೂರಾರು ಸಲ ಬೋಳಿಸುತ್ತಿ. ಮೊದಲು ವಿಕಾರಗಳಿಂದ ತುಂಬಿದ ಮನಸ್ಸನ್ನು ಬೋಳಿಸಿಕೋ' ಎಂದು ಸುಮ್ಮನೆ ದೇವರ ಹೆಸರಿನಲ್ಲಿ ಕೇಶಮುಂಡನ ಮಾಡುವವರನ್ನು ಕುರಿತು ನುಡಿಯುತ್ತಾನೆ. ಶ್ರಾದ್ಧ ಮಾಡುವವರನ್ನು ಕಂಡು 'ಬದುಕಿದ್ದಾಗ ತಂದೆ ತಾಯಿಗಳಿಗೆ ಗೌರವಿಸದವರು ಸತ್ತಮೇಲೆ ಶ್ರಾದ್ಧ ಮಾಡುವುದು ಎಷ್ಟು ಅರ್ಥಹೀನ' ಎನ್ನುತ್ತಾನೆ. ಕಲ್ಲುದೇವರನ್ನು ಪೂಜಿಸುವವರನ್ನು ಕಂಡು ' ಕಲ್ಲುದೇವರಿಗಿಂತ ಬೀಸೋಕಲ್ಲು ಎಷ್ಟೋ ಮೇಲು' ಎಂದು ಹೇಳುತ್ತಾನೆ. ಈ ಮಾತಿನಲ್ಲಿ ಜೀವನದ ಉಪಯುಕ್ತತೆ, ವಾಸ್ತವಿಕತೆ ಎದ್ದು ಕಾಣುತ್ತದೆ. ನದೀ ತೀರ್ಥಗಳಲ್ಲಿ ಮುಳುಗುವವರನ್ನು ಕಂಡು 'ನದೀ ತೀರ್ಥಗಳಲ್ಲಿ ಮುಳುಗುವುದರಿಂದ ದೇವರು ಸಿಗುವನಾದರೆ, ತೀರ್ಥದಲ್ಲಿಯೇ ಇರುವ ಮೀನು, ಮೊಸಳೆಗಳಿಗೆ ಮೊದಲು ಸಿಗುತ್ತಾನೆ. ಇವೆಲ್ಲಾ ವ್ಯರ್ಥ. ನಿನ್ನ ದೇವರು ನಿನ್ನಲ್ಲಿಯೇ ಇದ್ದಾನೆ ಎನ್ನುತ್ತಾನೆ. ಮತ್ತೆ ಹೇಳುತ್ತಾನೆ 'ಹೇಳುವವರು ಬಹಳವಯ್ಯ, ಮಾಡುವವರು ಇಲ್ಲವಯ್ಯ, (ಕಹತಾತೋ ಬಹುತ್ ಮಿಲ, ಕರ್ತಾ ಮಿಲ, ನಾ ಕೋಯಿ) ಎಂದು ಹಾಗೂ 'ದಯೆ ಇದ್ದಲ್ಲಿ ಧರ್ಮವಿದೆ- ಎನ್ನುತ್ತಾನೆ. (ಜಹಾ ದಯಾ ತಹಾ ಧರ್ಮ್ ಹೈ) ಮತ್ತು 'ದುಡಿಯಬೇಕು, ಪರಸ್ಪರ ಸಹಾಯ ಮಾಡಬೇಕು, ಯಾರೂ ಹಣವನ್ನು ಸಂಗ್ರಹಿಸಬಾರದು. ಮಾನವ ಸೇವೆಗೆ ಹಣವನ್ನು ವ್ಯಯಿಸಬೇಕು'- ಇಂತಹ ಮೌಲಿಕ ವಿಚಾರಗಳನ್ನು ತನ್ನ ದೋಹೆಗಳ ಮೂಲಕ ಸರಳ ಭಾಷೆಯಲ್ಲಿ ಜನರಿಗೆ ತಿಳಿಸಿದೆ. ಭಾಷೆ ಕುರಿತು ಆತನ ವಿಚಾರ ಹೀಗಿದೆ; 'ಸಂಸ್ಕೃತ ಬಾವಿಯೊಳಗಿನ ನೀರು. ಜನರಾಡುವ ಭಾಷೆ. ಹರಿಯುತ್ತಿರುವ ಹಳ್ಳ ಎಂದು.

ಕೊನೆಯದಾಗಿ ಅವನ ಸಂದೇಶ ಹೀಗಿದೆ; ಶುದ್ಧವಾಗಿರು, ಸಹಜವಾದ ಸಾದಾ ಜೀವನವನ್ನೇ ಬಾಳು. ಕಬೀರದಾಸನ ಈ ಚಿಂತನ ಕ್ರಮ ಅವನ ಭಕ್ತಿಪಂಥ ಉತ್ತರ ಹಿಂದೂಸ್ತಾನದಲ್ಲಿ ದೊಡ್ಡ ಆಂದೋಲನವನ್ನೇ ಮಾಡಿದುದಲ್ಲದೆ ಬಹಳ ಜನರಲ್ಲಿ

ಆತನ ವಿಚಾರದ ಕಿಡಿಗಳು ಮೌಢ್ಯ. ರೂಢಮೂಲ ಪದ್ಧತಿಗಳನ್ನು ಸುಟ್ಟುಹಾಕಿದವು. ಅವನ ವಿಚಾರದ ಗುಡುಗು ಅಂಧಸಂಪ್ರದಾಯದ ಕರ್ಮಠರನ್ನು ಕಂಗಡೆಸಿತು. ಹೆಚ್ಚಾಗಿ ಹಿಂದೂ ಮುಸಲ್ಮಾನರಿಬ್ಬರೂ ಅವರಲ್ಲಿರುವ ಲೋಪ ದೋಷಗಳನ್ನು ತನ್ನ ಕಾವ್ಯವಾಣಿ ಮೂಲಕ ತಿಳಿಯುವಂತೆ ಅವರಿಗೆ ವಿವೇಕವನ್ನು ಹೇಳಿ ಎಚ್ಚರಿಸಿ ಒಂದಾಗಿ ಬಾಳುವಂತೆ ಬೋಧಿಸಿದ. ರಾಮ-ರಹೀಂ ಭಕ್ತರಲ್ಲಿ ಭಾವೈಕ್ಯತೆ ತಂದ ಕೀರ್ತಿ ಕಬೀರನಿಗೇ ಸಲ್ಲುತ್ತದೆ. ಉತ್ತರ ಭಾರತದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಕಬೀರನ ಆಶ್ರಮ ಮತ್ತು ಮಠಗಳು ಸ್ಥಾಪಿತವಾಗಿವೆ.

❖

೬. ಬಂಗಾಳಪ್ರಾಂತದ ಭಕ್ತಿಚಳುವಳಿ (ಚೈತನ್ಯರು-ಕ್ರಿ.ಶ. ೧೪೮೫)

ಕ್ರಿ. ಶ. ೧೪-೧೫ ಶತಮಾನದಲ್ಲಿ ಬಂಗಾಳದಲ್ಲಿ ಧಾರ್ಮಿಕ ಪರಿಸ್ಥಿ ವಿಷಮಸ್ಥಿತಿಯಲ್ಲಿತ್ತು. ಜನರಲ್ಲಿ ಅಂಧಶ್ರದ್ಧೆ, ಮೌಢ್ಯದ ಆಚರಣೆಗಳು ಬಂದಿದ್ದವು. ರಾತ್ರಿ ಜಾಗರಣೆ ಮಾಡುವುದು, ದೇವೀ ಸ್ತೋತ್ರ ಹಾಡುವುದು, ಸರ್ಪವನ್ನು ಪೂಜಿಸುವುದು ಇತ್ಯಾದಿ ಮೌಢ್ಯದ ಆಚರಣೆಗಳು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದವು. ಬ್ರಾಹ್ಮಣರು ಧಾರ್ಮಿಕ ಶ್ರದ್ಧೆ ಕಡಿಮೆಯಾಗಿತ್ತು. ಬಂಗಾಳದ ಜನ ಸಮೂಹದಲ್ಲಿ ದೈವಭಕ್ತಿ ಕಡಿಮೆಯಾಗಿ ಲೌಕಿಕ ವ್ಯವಹಾರವೇ ಎದ್ದು ಕಾಣುತ್ತಿತ್ತು. ಮತ್ತೆ ಕೆಲವರು ವೈಚಾರಿಕತೆಯಿಂದ ನಾಸಿಕರಂತೆ ವರ್ತಿಸುತ್ತಿದ್ದರು. ಬಂಗಾಳದ ದೊಡ್ಡ ವಿದ್ಯಾಕೇಂದ್ರವಾಗಿದ್ದ ನವದ್ವೀಪದಲ್ಲೂ ಜನ ಲೌಕಿಕತೆಯಲ್ಲೇ ಮುಳುಗಿ ಕಲುಷಿತ ವಾತಾವರಣ ನೆಲೆಸಿತ್ತು. ಭಕ್ತಿಪಂಥ ಕ್ಷೀಣ ದೆಸೆಯಲ್ಲಿತ್ತು. ಇಂತಹ ಸಂದರ್ಭದಲ್ಲಿ ೧೪೮೫ರಲ್ಲಿ ಚೈತನ್ಯರು ಜನಿಸಿದರು. ಇವರ ತಂದೆ ಪಂಡಿತ ಜಗನ್ನಾಥ ಮಿತ್ರರು ತಾಯಿ ಶಚೀದೇವಿ. ಇವರ ಬಾಲ್ಯದ ಹೆಸರು ವಿಶ್ವಂಭರ. ಇವರು ಬಹಳ ಸುಂದರವಾಗಿ ಬೆಳ್ಳಗಿದ್ದುದರಿಂದ ಜನಗಳು ಇವರನ್ನು ಗೌರಾಂಗ ಎಂದೂ ಕರೆಯುತ್ತಿದ್ದರು. ತಾಯಿ ಮಾತ್ರ 'ನಿಮಾಯಿ' ಎಂದು ಕರೆಯುತ್ತಿದ್ದರು. ಹುಡುಗ ಓದುವುದರಲ್ಲಿ ಚುರುಕಾಗಿದ್ದ. ಆತನ ಹನ್ನೊಂದನೆಯ ವಯಸ್ಸಿನಲ್ಲೇ ತಂದೆ ತಾಯಿ ನಿಧನರಾದರು. ಆತನ ತಂದೆಯ ತಾಯಿ ಇವನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಿದಳು. ವಿದ್ವಾಂಸರಾದ ವಾಸುದೇವ ಅವರಲ್ಲಿ ನ್ಯಾಯಶಾಸ್ತ್ರ ಅಭ್ಯಾಸ ಮಾಡಿದ ದೊಡ್ಡ ವಿದ್ವಾಂಸನೂ ಆದ.

ವಿದ್ವಾಂಸನಾದ ಮೇಲೆ ಒಂದು ಪಾಠಶಾಲೆಯನ್ನು ತೆರೆದು ಅನೇಕ ವಿದ್ಯಾರ್ಥಿಗಳನ್ನು ಸೇರಿಸಿ ಪಾಠ ಹೇಳುತ್ತಿದ್ದ. ಈತನು ಬಂಗಾಳದ ನವದ್ವೀಪದಲ್ಲಿ ವಾಸಿಸುತ್ತಿದ್ದ. ಒಂದು ಸಲ ಈತ ತಂದೆಯ ಶ್ರಾದ್ಧ ಮಾಡಲು ಗಯೆಗೆ ಹೋದ. ಶ್ರಾದ್ಧ ಮುಗಿಸಿ ಬರುವಾಗ ಅವನಲ್ಲಿ ವಿಚಿತ್ರ ಬದಲಾವಣೆ ಆಗುತ್ತದೆ. ಆಗಾಗ್ಗೆ ಭಾವಪರವಶನಾಗುವುದು. ದೈವೀ ಭಾವದ ನಿಬ್ಬೆರಗಿನಲ್ಲಿ ನೃತ್ಯ ಮಾಡುವುದು, 'ಹರೇಕೃಷ್ಣ, ಹರೇಕೃಷ್ಣ' ನೆಂದು ಕೀರ್ತಿಸುತ್ತಾ ಮೈಮರೆಯುವುದು, ಕೃಷ್ಣನ ವಿರಹದಲ್ಲಿ ಬೆಂದು ಬಸವಳಿದಂತೆ ದೇವರಲ್ಲಿ ಮೊರೆಯಿಡುವುದು, ಊಟ ನಿದ್ರೆಯ ಪರಿವೆಯೇ ಒಮ್ಮೊಮ್ಮೆ ಇರುತ್ತಿರಲಿಲ್ಲ. ಮೈ ಮರೆತು ಹಾಡುತ್ತಿದ್ದ. ಇವನನ್ನು ಅನುಸರಿಸಿ ನೂರಾರು ಜನ

ಇವನ ಕೀರ್ತನೆಯಲ್ಲಿ ಭಾಗವಹಿಸುತ್ತಿದ್ದರು. ಹಾದಿ ಬೀದಿಗಳಲ್ಲಿ ನಡೆಯುತ್ತಾ ಹರಿ ಕೀರ್ತನವನ್ನು ಸೊಗಸಾಗಿ ಹಾಡುತ್ತಿದ್ದ. ಕೃಷ್ಣ ಭಕ್ತಿಯ ಪ್ರವಾಹ ಹರಿಯಲಾರಂಭಿಸಿತು. ಸಂಕೀರ್ತನ ನಡೆಸುತ್ತಿದ್ದರು. ಜನರ ಮನೆ ಮನೆಗಳಿಗೂ ಇದು ಮುಟ್ಟಿತು. ಅವರನ್ನು ತಟ್ಟಿತು. ಚೈತನ್ಯರು ಬೀದಿಯಲ್ಲಿ ನರ್ತಿಸುತ್ತ ಹೋಗುತ್ತಿದ್ದಂತೆ ಜನ ಅವರ ಮಾರ್ಗದಲ್ಲಿ ಹೂ ಚೆಲ್ಲುತ್ತಿದ್ದರು. ಜಾತಿ, ಮತ, ಪಂಥಗಳ ಭೇದವಿಲ್ಲದೆ ಬಂಗಾಳದ ನಾನಾ ಭಾಗಗಳಿಂದ ಭಕ್ತರು ನಮ್ಮದ್ವೀಪಕ್ಕೆ ಬರುತ್ತಿದ್ದರು. ಪತಂಗದ ಹುಳ ದೀಪಕ್ಕೆ ಮುತ್ತುವಂತೆ ಜನಗಳು ಚೈತನ್ಯರನ್ನು ಮುತ್ತುತ್ತಿದ್ದರು.

ಚೈತನ್ಯರಿಗೆ ಕೃಷ್ಣ ಭಕ್ತಿಯೇ ದೊಡ್ಡ ಧರ್ಮವಾಯಿತು. ಈ ಪಂಥದ ಚಳುವಳಿಯಲ್ಲಿ ಬಡವ, ಶ್ರೀಮಂತ, ಮೇಲು, ಕೀಳು ಹಿಂದೂ-ಮುಸ್ಲಿಂ ಎಂಬ ಭೇದಭಾವ ಇರಲಿಲ್ಲ. ಶೈವ, ಶಾಕ್ತ, ವೈಷ್ಣವ ಎಲ್ಲರೂ ತಮ್ಮ ತಮ್ಮ ಭೇದಭಾವಗಳನ್ನು ಮರೆತು ಚೈತನ್ಯರ ಭಕ್ತಿರಸ ಪ್ರವಾಹದಲ್ಲಿ ಮುಳುಗುತ್ತಿದ್ದರು. ಚೈತನ್ಯರ ಕೃಷ್ಣಭಕ್ತಿ ಗಂಗೆಯಲ್ಲಿ ಮಿಂದ ಜನರು ದ್ವೇಷ, ಅಸೂಯೆ, ಮೇಲು ಕೀಳು ಭಾವನೆಯನ್ನು ಕಳೆದುಕೊಂಡು ಸ್ವಚ್ಛವಾಗುತ್ತಿದ್ದರು. ಜನಗಳು ಗೌರವದಿಂದ 'ಗೌರಾಂಗಮ್ಮಹಾಪ್ರಭು' ಎಂದು ಕರೆಯುತ್ತಿದ್ದರು. ಈ ಭಕ್ತಿ ಚಳುವಳಿಯನ್ನು ಕಂಡು ಅಸೂಯಾಪರರು ಇಲ್ಲದೇ ಇರಲಿಲ್ಲ. ಈತನು ಮುಸಲ್ಮಾನರನ್ನೂ ಕೃಷ್ಣ ಭಕ್ತರನ್ನಾಗಿ ಮಾಡುತ್ತಾನೆ ಎಂದು ಮುಸಲ್ಮಾನರು ಮಸೀದಿಯಲ್ಲಿದ್ದ ಖಾಜೀಗೆ ದೂರು ಹೇಳುತ್ತಾರೆ. ಇದನ್ನು ಕೇಳಿದ 'ಖಾಜಿ' ನಗರದಲ್ಲಿ ಕೀರ್ತನೆಯನ್ನು ನಿಲ್ಲಿಸಬೇಕೆಂದು ಆಜ್ಞೆ ಮಾಡುತ್ತಾನೆ. ಆದರೆ ಚೈತನ್ಯರ ಕೀರ್ತನೆಯಲ್ಲಿ ಭಕ್ತಿ, ಸಂಗೀತದ ಮೋಹಕ ಶಕ್ತಿ ಇತ್ತು. ಚೈತನ್ಯರ ಕೀರ್ತನೆಯನ್ನು ತಡೆಯಲು ಬಂದ ಹಾಗೂ ಪ್ರತ್ಯೇಕವಾಗಿ ಕಂಡ ಖಾಜಿ ಇವರೊಂದಿಗೆ ತಾನೂ ನರ್ತಿಸತೊಡಗಿದ. ಇದನ್ನು ಕಂಡು ಅನೇಕ ಜನ ಮುಸಲ್ಮಾನರು ಚೈತನ್ಯರ ಶಿಷ್ಯರಾದರು. ಭಗವನ್ನಾಮ ಕೀರ್ತನೆಗಳ ಚೈತನ್ಯರು ಬಂಗಾಳದ ಹಿಂದೂ-ಮುಸಲ್ಮಾನರನ್ನ ಒಂದೇ ಸೂತ್ರದಲ್ಲಿ ಬಂಧಿಸಿದರು.

ಆ ಕಾಲದ ಬಂಗಾಳ ಸಮಾಜದಲ್ಲಿ ಅನೇಕ ರೂಢಮೂಲ ಅನಿಷ್ಟ ಪದ್ಧತಿಗಳು ಬೆಳೆದು ಬಂದಿದ್ದವು. ಅವುಗಳಲ್ಲಿ ಕಾಳಿಗೆ ಬಲಿ ಕೊಡುವ ಪದ್ಧತಿಯೂ ಇತ್ತು. ಈ ಭಕ್ತಿ ಚಳುವಳಿಯಿಂದ ಅನಿಷ್ಟ ಪದ್ಧತಿಗಳು ದೂರವಾದವು. ಚೈತನ್ಯರಿಗೆ ಆಧ್ಯಾತ್ಮದಲ್ಲಿ ಒಲವು ಇತ್ತು. ಕೃಷ್ಣನಲ್ಲಿ ಅಪಾರ ಭಕ್ತಿ ಇತ್ತು.

ತಾಯಿಯ ಒತ್ತಾಯಕ್ಕೆ ಮಣಿದು ವಿವಾಹ ಮಾಡಿಕೊಂಡರು. ಆದರೂ ಗೃಹಸ್ಥ ಜೀವನ ಅವರಿಗೆ ಸರಿಬರಲಿಲ್ಲ. ತಮ್ಮ ೨೪ನೇ ವಯಸ್ಸಿಗೆ ಸನ್ಯಾಸಿಯಾದರು. ಚೈತನ್ಯರು ಅಲ್ಲಲ್ಲಿ ಸಂಚಾರ ಮಾಡಿ ವೈಷ್ಣವ ಧರ್ಮ ಮತ್ತು ಭಗವದ್ಭಕ್ತಿಯನ್ನು ಪ್ರಚಾರ ಮಾಡಿದರು. ಉತ್ತರ, ದಕ್ಷಿಣ ಭಾರತದಲ್ಲಿ ಸುತ್ತಿದರು. ಅವರ ಸಂಪರ್ಕಕ್ಕೆ ಬಂದ

ಅನೇಕರು ಪವಿತ್ರ ಜೀವನ ನಡೆಸತೊಗಿದರು. ದೇಶದ ಉದ್ದಗಲಕ್ಕೂ ಸಂಚಾರ. ಸದಾ ಭಗವಂತನ ಚಿಂತನೆ. ಧರ್ಮ ಪ್ರಚಾರದಲ್ಲಿ ತೊಡಗಿ ತಮ್ಮ ಆರೋಗ್ಯವನ್ನು ಆಲಕ್ಷಿಸಿದರು. ತಮ್ಮ ೪೮ನೇ ವಯಸ್ಸಿನಲ್ಲೇ ದಿವಂಗತರಾದರು. ಅವರ ಜೀವನದ ಪ್ರಭಾವ ಇಡೀ ಬಂಗಾಳವನ್ನು ಆವರಿಸಿತ್ತು. ಮತ್ತು ಇಡೀ ಭಾರತಕ್ಕೂ ಪರಿಚಿತವಾಗಿತ್ತು.

ಅವರ ಕೃಷ್ಣ ಭಕ್ತಿಯ ಅಲೆ, ದೈವೀ ಭಾವ ಪ್ರೇಮದ ಚಳುವಳಿ ಜನಸಮೂಹದಲ್ಲಿ ಭೇದಭಾವ ಅಳಿಸಿಹಾಕಿ ಭಾವೈಕ್ಯತೆಯನ್ನು ತಂದಿತು. ಸಮಾಜದಲ್ಲಿ ವಿಷಮ ವಾತಾವರಣ ಹರಡಿದಾಗ ಜನಗಳು ತಪ್ಪು ಹಾದಿಯಲ್ಲಿ ಸಾಗುತ್ತಿದ್ದಾಗ ಅವರಿಗೆ ವಿವೇಕ ಹೇಳಲು ಇಂತಹ ಮಹಾಪುರುಷರು ಬರುತ್ತಾರೆ ಎಂದು ತೋರುತ್ತದೆ. ಚೈತನ್ಯರು ಪ್ರೇಮದ ಸಂದೇಶವನ್ನು, ದೈವಭಕ್ತಿಯನ್ನು ದೇಶದ ನಾನಾ ಭಾಗಗಳಿಗೆ ಹೋಗಿ ಪ್ರಚಾರ ಮಾಡಿದರು. ನೊಂದವರಿಗೆ, ದೀನ ದಲಿತರಿಗೆ ಸಮಾಧಾನ ಹೇಳುತ್ತಿದ್ದರು. ರೋಗಿಗಳಿಗೆ ಸಹಾಯ ನೀಡುತ್ತಿದ್ದರು. ಸಾಧು ಸನ್ಯಾಸಿಗಳಂತೆ ಜೀವನ ನಡೆಸುತ್ತಿದ್ದರು. ಎಲ್ಲರೂ ದೈವಭಕ್ತರಾಗಬೇಕು, ಭಕ್ತಿಯ ಮೂಲಕ ಎಲ್ಲರೂ ಪರಿಶುದ್ಧರಾಗಿ, ಸಮಾನರಾಗುತ್ತಾರೆ ಎನ್ನುವುದು ಇವರ ತತ್ತ್ವ. ಮುಸಲ್ಮಾನರಾದಿಯಾಗಿ ಎಲ್ಲ ಧರ್ಮದವರಿಗೂ ದೀಕ್ಷೆ ನೀಡಿ ಶಿಷ್ಯರನ್ನಾಗಿ ಮಾಡಿಕೊಂಡರು. 'ಭಕ್ತಿಉಳ್ಳ ಒಬ್ಬ ಚಾಂಡಾಲನು ಭಕ್ತಿಹೀನನಾಗಿ ವೇದವನ್ನು ಬಲ್ಲ ಬ್ರಾಹ್ಮಣನಿಗಿಂತ ಹೆಚ್ಚು ಗೌರವಕ್ಕೆ ಪಾತ್ರರು' ಎಂದು ಹೇಳುತ್ತಿದ್ದರು. ಚೈತನ್ಯರ ಭಕ್ತಿ ಚಳುವಳಿಯಲ್ಲಿ ಅವಿವಾಹಿತರೂ ಸಮ್ಮಿಳಿತರಾಗಿದ್ದರು. ಅರ್ಥಹೀನ ಮತಾಚರಣೆಗಳನ್ನು ಖಂಡಿಸಿ ಎಲ್ಲ ವರ್ಗದ ಜನರು ಒಟ್ಟಿಗೆ ಸೇರಿ ದೇವರ ಹೆಸರನ್ನು ಹೇಳುತ್ತ ಹಾಡುವ, ಕುಣಿಯುವ ಸಂಕೀರ್ತನ ಎಂಬ ಸರಳ ಪೂಜಾ ವಿಧಾನವನ್ನು ಜಾರಿಗೆ ತಂದದ್ದು ಈ ಭಕ್ತಿ ಚಳುವಳಿಯ ವೈಶಿಷ್ಟ್ಯವಾಗಿದೆ. ಚೈತನ್ಯರು ವರ್ಣಾಶ್ರಮದ ವಿರುದ್ಧ ದನಿಯೆತ್ತದಿದ್ದರೂ ತಮ್ಮ ಪ್ರಯೋಗದಿಂದ ಸುಧಾರಕರಾಗಿದ್ದರು. ಚೈತನ್ಯರ ಸಂದೇಶ ಹೀಗಿದೆ. 'ಇತರರ ಬಗ್ಗೆ ವಿನಯ, ಸಹನೆ, ಗೌರವ ಭಾವನೆ ಇರಬೇಕು, ಕೃಷ್ಣನ ಪ್ರೇಮವನ್ನು ಪಡೆಯಲು ತೃಣಕ್ಕಿಂತ ತಾನು ದೀನನೆಂದು ಭಾವಿಸಬೇಕು. ತನ್ನನ್ನು ಕಡಿಯುವವರರಿಗೆ ಕೂಡ ಮರವು ನೆರಳು, ಹಣ್ಣನ್ನು ಕೊಡುವಂತೆ ಭಕ್ತನು ಮರದಂತೆ ಸಹನಶೀಲನಾಗಬೇಕು, ಪ್ರತಿಫಲವನ್ನು ಅಪೇಕ್ಷೆ ಮಾಡದೆ ಪ್ರತಿಯೊಬ್ಬನಲ್ಲೂ ಕೃಷ್ಣನಿದ್ದಾನೆಂದು ನಂಬಿ ಗೌರವಿಸಬೇಕು' ಎಂದು.

ಇಂತಹ ವಿಚಾರಧಾರೆಯಿಂದ ಬಂಗಾಳದಲ್ಲಿ ಭಕ್ತಿ ಸಾಹಿತ್ಯ ಶ್ರೀಮಂತ ವಾಯಿತು. ಚೈತನ್ಯರ ಭಕ್ತಿ ಚಳುವಳಿ ಬಂಗಾಳದಲ್ಲಿ ದೊಡ್ಡ ಪ್ರಭಾವವನ್ನು ಬೀರಿತು. ಅದು ಉತ್ತರ ಮತ್ತು ದಕ್ಷಿಣ ಭಾರತಕ್ಕೂ ವ್ಯಾಪಿಸಿತು. ಹೀಗೆ ಬಂಗಾಳದಲ್ಲಿ ನಡೆದ ಈ ಭಕ್ತಿ ಚಳುವಳಿ ಜನಗಳ ಮೇಲೆ ವಿಶೇಷ ಪರಿಣಾಮ ಉಂಟುಮಾಡಿತು. ಉತ್ತರ ಹಿಂದೂಸ್ತಾನದಲ್ಲಿ ಚೈತನ್ಯ ಸಂಪ್ರದಾಯದ ಅನುಯಾಯಿಗಳು ಇಂದಿಗೂ ಅಧಿಕ ಸಂಖ್ಯೆಯಲ್ಲಿ ದೊರೆಯುತ್ತಾರೆ.

❖

೭ ಪಂಜಾಬಿನ ಭಕ್ತಿಚಳುವಳಿ

(ಗುರುನಾನಕದೇವ-ಕ್ರಿ.ಶ. ೧೫ನೆಯ ಶತಮಾನ)

ಕ್ರಿ. ಶ. ೧೫ನೇ ಶತಮಾನ ಭಾರತದ ಚರಿತ್ರೆಯಲ್ಲಿ ರಾಜಕೀಯ ಬದಲಾವಣೆ ಕಾಲ. ತೈಮೂರನ್ ದಾಳಿಗಳು ನಡೆದು ಉತ್ತರ ಭಾರತದ ಅರಾಜಕತೆ, ರಕ್ತಪಾತದಿಂದ ತುಂಬಿತ್ತು. ಭಾರತವನ್ನು ಆಳುತ್ತಿದ್ದ ಲೂದಿ ವಂಶದ ರಾಜರು ಜವಾಬ್ದಾರಿ ಇಲ್ಲದವರಂತೆ ವರ್ತಿಸುತ್ತಿದ್ದರು. ಕ್ರಿ. ಶ. ೭ನೆಯ ಶತಮಾನ ಅರಬರ ಆಗಮನದಿಂದ ಮುಸ್ಲಿಂ ಧರ್ಮವು ಭಾರತವನ್ನು ಪ್ರವೇಶಿಸಿತು. ಮುಂದೆ ೧೫ನೆಯ ಶತಮಾನದವರೆಗೆ ಹಿಂದೂ ಮುಸಲ್ಮಾನ ಧರ್ಮಗಳ ವೈವಿಧ್ಯ, ವೈಶಿಷ್ಟ್ಯ, ವ್ಯತ್ಯಾಸಗಳು ಹಾಗೆಯೇ ಘರ್ಷಣೆಗಳು ಉಳಿದುಬಂದವು. ಹಿಂದೂ ಧರ್ಮ ಸಾವಿರಾರು ಜಾತಿ, ಉಪಜಾತಿಗಳಿಂದ ಛಿದ್ರ ವಿಚ್ಛಿದ್ರವಾಗಿತ್ತು. ಮುಸ್ಲಿಮರಲ್ಲಿ ಜಾತಿ, ಉಪಜಾತಿಗಳಿರಲಿಲ್ಲ. ಭಾರತೀಯರು ಕೋಟಿ ಕೋಟಿ ದೇವರನ್ನು ಆರಾಧಿಸುತ್ತ ಇದ್ದರು. ಇದರ ಪರಿಣಾಮವಾಗಿ ಇವರಲ್ಲಿ ಐಕ್ಯತೆ ಇರಲಿಲ್ಲ. ಇಸ್ಲಾಂ ಧರ್ಮದಲ್ಲಿ ಒಂದೇ ದೇವರ ಕಲ್ಪನೆ ಅವರನ್ನು ಒಗ್ಗೂಡಿಸಿತ್ತು. ಹಿಂದೂ ಮುಸ್ಲಿಮರಲ್ಲಿ ಕಾಲ ಕಾಲಕ್ಕೆ ಹಲವು ಹತ್ತು ಕಾರಣಗಳಿಂದಾಗಿ ಕಲಹಗಳು, ಮನಸ್ತಾಪಗಳು ಇರುತ್ತಿದ್ದವು. ಮುಸ್ಲಿಮರು ಹಿಂದೂಗಳನ್ನು 'ಕಾಫಿರ್' ರೆಂದು ಕರೆದರೆ ಹಿಂದೂಗಳು ಮುಸ್ಲಿಮರನ್ನು 'ಮ್ಲೇಚ್ಛ' ರೆಂದು ಕರೆಯುತ್ತಿದ್ದರು.

ಅಂತೂ ಹಿಂದೂ ಮುಸ್ಲಿಮರಲ್ಲಿ ಬಹಳ ಮಟ್ಟಿಗೆ ಸಾಂಸ್ಕೃತಿಕ ಭಾವೈಕ್ಯತೆ ಸಾಧ್ಯವಾಗಲಿಲ್ಲ. ಸುಮಾರು ೬೦ ವಿದೇಶೀ ದಾಳಿಗಳನ್ನು ಕಂಡ ಭಾರತ ಅಪಾರ ಬದಲಾವಣೆಗಳನ್ನು ಕಂಡಿತು. ಭಾರತೀಯ ಜನಜೀವನ ತನ್ನ ಅಂತಃಸತ್ವವನ್ನೇ ಕಳೆದು ಕೊಂಡಿತು. ಜನರು ಮಾನವೀಯ ಮೌಲ್ಯವನ್ನೇ ಮರೆತಿದ್ದರು.

ಪಂಜಾಬ್ ಭಾರತದ ಎಲ್ಲ ಆಕ್ರಮಗಳಿಗೂ ತೆರೆದ ಬಾಗಿಲು ಆಗಿತ್ತು. ಅರಾಜ ಕತೆಯೇ ಇದಕ್ಕೆ ಮುಖ್ಯ ಕಾರಣವಾಗಿತ್ತು. ಕೃಷಿಕರ, ವ್ಯಾಪಾರಸ್ಥರ ಜೀವನ ಹದಗೆಟ್ಟಿತ್ತು. ಜನರು ಧರ್ಮದಲ್ಲಿ ನಂಬಿಕೆಯನ್ನು ಕಳೆದುಕೊಂಡಿದ್ದರು. ಇಂತಹ ಸನ್ನಿವೇಶದಲ್ಲಿ ಜನಾಂಗದ ಉದ್ಧಾರಕ್ಕಾಗಿ ಅವರ ಬಾಳಿನ ಆಶಾಕಿರಣವಾಗಿ ಗುರುನಾನಕರು ಜನಿಸಿದರು. (ಕ್ರಿ. ಶ. ೧೪೬೯) ಗುರುನಾನಕರ ಜನನ ತಳವಂಡಿ

ಎಂಬ ಚಿಕ್ಕ ಗ್ರಾಮದಲ್ಲಿ ಆಯಿತು. ಹತ್ತು ಗುರುಗಳ ಸಿಖ್ ಪರಂಪರೆಯಲ್ಲಿ ಮೊದಲನೆ ಗುರು ಈ ನಾನಕರು. ಮುಂದೆ ೧೭೦೮ರವರೆಗೆ ಈ ಗುರು ಪರಂಪರೆ ಮುಂದುವರೆದು ಗುರು ಗೋವಿಂದಸಿಂಗರ ಮರಣದೊಂದಿಗೆ ಗುರು ಪರಂಪರೆ ಅಂತ್ಯ ಗೊಳ್ಳುತ್ತದೆ. ಈ ಗುರು ಪರಂಪರೆಯ ಬೋಧನೆಯ ಸಂಗ್ರಹವೇ 'ಗುರುಗ್ರಂಥ ಸಾಹಿಬ್' ಈ ಗುರುಗಳ ಅನುಯಾಯಿಗಳನ್ನು 'ಸಿಖ್' ರೆಂದು ಕರೆಯುತ್ತಾರೆ. ಸಿಖ್-ಎಂದರೆ ಶಿಷ್ಯ ಎಂದರ್ಥ.

ಗುರುನಾನಕರ ವಿಚಾರವನ್ನು ತಿಳಿಯಲು ನಮಗೆ ಗುರುಗ್ರಂಥ ಸಾಹಿಬ್, ಗುರುನಾನಕರು ಹಾಡಿದ ಪದ್ಯಗಳು, 'ಜನ್ಮಸಖಿ'ಗಳು ನಮಗೆ ಆಧಾರವಾಗುತ್ತವೆ. ಗುರು ನಾನಕರ ತಂದೆಯ ಹೆಸರು ಮೇಹತ್ ಕಾಲುತ್ರಿಪತ. ಈತ ಒಬ್ಬ ಹಳ್ಳಿಯ ಶ್ಯಾನುಭೋಗ. ನಾನಕರ ವಿದ್ಯಾಭ್ಯಾಸ ಪ್ರಾಥಮಿಕ ಹಂತದಲ್ಲಿ ತಳವಂಡಿಯಲ್ಲಿ ನಡೆಯಿತು. ಅವನಿಗೆ ಹನ್ನೊಂದು ವರ್ಷ ತುಂಬಿದಾಗ ತುಂಬಾ ವಿಚಾರವಂತನಾಗಿದ್ದ. ಇದಕ್ಕೆ ಆವರೆಗೆ ಅವನು ಓದಿದ, ಓದು ಮತ್ತು ಅಧ್ಯಾಪಕರ ವಿಚಾರಗಳು, ಅವನ ಮನಸ್ಸಿನಲ್ಲಿ ಆದ ಪರಿಣಾಮ ಎಂದು ತೋರುತ್ತದೆ. ಒಂದು ದಿನ ಸಂಪ್ರದಾಯದಂತೆ ಹಿರಿಯರು ನಾನಕನಿಗೆ ಯಜ್ಞೋಪವೀತ ಮಾಡಲು (ಉಪನಯನ) ನಿಶ್ಚಯಿಸಿದಾಗ ನಾನಕನು 'ನನಗೆ ಈ ಅಶುದ್ಧವಾದ ಸುಟ್ಟುಹೋಗುವ ದಾರ ಬೇಡ' ಎಂದು ನಿರಾಕರಿಸುತ್ತಾನೆ. ಈ ಉಪನಯನದ ಸಂಸ್ಕಾರಕ್ಕಾಗಿ ಮನೆಗೆ ಬಂದಿದ್ದ ಪುರೋಹಿತರಿಗೆ ಪ್ರಶ್ನೆ ಹಾಕುತ್ತಾನೆ. 'ತುಂಡಾಗದ, ಮಣ್ಣಾಗದ ಸುಟ್ಟು ಬೂದಿಯಾಗದ ಕಳೆದುಹೋಗದ ದಾರ ನಿಮ್ಮ ಬಳಿ ಇದ್ದರೆ ಕೊಡಿ ಪುರೋಹಿತರೆ, ಅದನ್ನು ನಾನು ಖಂಡಿತ ಧರಿಸುವೆ' ಎಂದು ಕೇಳಿ ಉಪನಯುನ ಸಂಸ್ಕಾರವನ್ನೆ ತಿರಸ್ಕರಿಸುತ್ತಾನೆ. ಹೀಗೆ ಬಾಲ್ಯದಲ್ಲಿಯೇ ಸಂಪ್ರದಾಯಗಳನ್ನ ಪ್ರತಿಭಟಿಸುತ್ತಿದ್ದ. ಹೀಗಾಗಿ ಅವನ ಸಮಾಜದವರು ಇವನನ್ನು ತುಂಬ ತಿರಸ್ಕಾರವಾಗಿ ಕಾಣುತ್ತಿದ್ದರು. ಮುಂದೆ ನಾನಕರು ಪ್ರಾಯಕ್ಕೆ ಬಂದಮೇಲೆ ಅವರು 'ಸೂಲಾಕಿನಿ' ಎಂಬ ಕನ್ಯೆಯೊಂದಿಗೆ ಮದುವೆಯಾದರು. ಆ ದಂಪತಿಗಳಿಗೆ ಶ್ರೀಚಂದ್‌ಮತ್ತು ಲಕ್ಷ್ಮೀ ಎಂಬ ಇಬ್ಬರು ಮಕ್ಕಳು ಜನಿಸಿದರು. ನಾನಕರ ತಂದೆ ಮಗ ಸ್ವತಂತ್ರ ಉದ್ಯೋಗ ಮಾಡಬೇಕೆಂದು ಅಂಗಡಿ ಹಾಕಿಕೊಡುತ್ತಾರೆ. ಇವನ ಅಂಗಡಿಗೆ ಬಂದ ದೀನದಲಿತರ ದುಃಖ ಕಂಡು ಅವರಿಗೆ ಆಹಾರ, ಬಟ್ಟೆಗಾಗಿ ವ್ಯಾಪಾರದ ಹಣವನ್ನೆಲ್ಲ ಖರ್ಚುಮಾಡಿ ಬರಿಗೈಯಲ್ಲಿ ಮನೆಗೆ ಬರುತ್ತಿದ್ದ. ಮಗನ ಈ ವರ್ತನೆಯನ್ನು ಕಂಡು ತಂದೆಗೆ ಯೋಚನೆಯಾಯಿತು. ಮತ್ತೆ ಇವನ ತಂದೆ ಸುಲ್ತಾನಪುರದಲ್ಲಿ ಕೆಲಸಗಾರರಿಗೆ ದವಸ ಧಾನ್ಯಗಳನ್ನು ಹಂಚುವ ಇಲಾಖೆಯಲ್ಲಿ ಕೆಲಸ ಕೊಡಿಸುತ್ತಾನೆ. ಅಲ್ಲಿ ನಾನಕರು ಎರಡು ವರ್ಷ ಮಾತ್ರ ಇದ್ದ. ಅಲ್ಲಿಯ ವಾತಾವರಣ ಹಿಡಿಸದೆ ಅಲ್ಲಿಂದ ನೌಕರಿ ಬಿಟ್ಟು ಬಂದರು. ನಾನಕನ ಮನಸ್ಸು ಸದಾ ದೈವ ಚಿಂತನೆಯಲ್ಲಿ ದೀನ ದಲಿತರ, ಬಡವರ, ಕಷ್ಟ ಸುಖವನ್ನು ಕುರಿತು ಸಮಾಜದ

ಮೂಢ ನಂಬಿಕೆ, ಸಂಪ್ರದಾಯಗಳನ್ನು ಕುರಿತು ಸದಾ ಆಲೋಚಿಸುತ್ತಿತ್ತು. ಲೌಕಿಕದಿಂದ ಆಧ್ಯಾತ್ಮದಕಡೆಗೆ ಒಲವು ಹೆಚ್ಚಾಗಿತ್ತು. ನಾನಕನು ಒಂದೊಂದು ಸಲ ಯಾರೊಂದಿಗೂ ಮಾತನಾಡದೆ ಮೌನಿಯಾಗಿ ದೇವರ ಧ್ಯಾನದಲ್ಲಿ ಬಹಳ ಕಾಲ ಕಳೆದ. ಒಂದು ಸಲ ಇದ್ದಕ್ಕಿದ್ದಂತೆ ತನ್ನ ಮೌನವನ್ನು ಮುರಿದು ತುಂಡು ಬಟ್ಟೆಯನ್ನು ಮೈಮೇಲೆ ಸುತ್ತಿಕೊಂಡು ಬೀದಿಯಲ್ಲಿ ನಿಂತು ಹೇಳಿದ ಮಾತಿದು-'ನಾನು ಹಿಂದುವೂ ಅಲ್ಲ, ಮುಸ್ಲಿಮನೂ ಅಲ್ಲ, ಮನುಷ್ಯ ಮಾತ್ರ. ಪ್ರತಿಯೊಬ್ಬರೂ ದುಡಿಯಬೇಕು. ದುಡಿದದ್ದನ್ನು ಹಂಚಿಕೊಂಡು ತಿಂದು ಬದುಕಬೇಕು. ಮನುಷ್ಯನಿಗೆ ಬೇಕಾದ್ದು ಸಮಾನ ಅವಕಾಶ ಮತ್ತು ನ್ಯಾಯ. ಐತಿಹಾಸಿಕ ಕಾರಣಗಳಿಂದ ಇದರಲ್ಲಿ ಅಸ್ತವ್ಯಸ್ತ ಸ್ಥಿತಿ ಉಂಟಾಗಿರಬಹುದು. ಅದನ್ನು ಸರಿಪಡಿಸುವ ಕ್ರಿಯೆಯೇ ನನ್ನ ಬದುಕಿನ ಧ್ಯೇಯ'-ಎಂದು.

ಮತ್ತೆ ಹೇಳುತ್ತಾರೆ; 'ಪ್ರೀತಿಯ ಮೂಲಕವೇ ದೇವರ ಜೊತೆ ಸಂವಾದ ಸಾಧ್ಯ. ಅದು ಈ ನೆಲದಲ್ಲಿಯೇ ನಡೆಯಬೇಕು. ದೇವರ ಬಗ್ಗೆ ಬರೀ ಭ್ರಮೆ ನಿಜವಾದ ಭಕ್ತಿಯಲ್ಲ' ಎಂದು. ಭಕ್ತಿಪಂಥ ಮತ್ತು ಸೂಫಿ ಪಂಥಗಳ ಬಹು ದೊಡ್ಡ ಕೊಡುಗೆಯಾದ ಹಿಂದೂ-ಮುಸ್ಲಿಂ ಬಾಂಧವ್ಯದ ಬಗ್ಗೆ ಅವರ ಭಾವೈಕ್ಯತೆಯ ಬಗ್ಗೆ ಒಂದು ಮೂರ್ತರೂಪ ನೀಡಿ ಅದನ್ನು ಪ್ರತ್ಯಕ್ಷವಾಗಿ ಆಚರಣೆಗೆ ತಂದ ಶ್ರೇಯಸ್ಸು ಗುರುನಾನಕರಿಗೆ ಸಲ್ಲುತ್ತದೆ. ಗುರುನಾನಕರು ತಮ್ಮ ಮೂವತ್ತನೆಯ ವಯಸ್ಸಿಗೆ ಇಂತಹ ವಿಚಾರಗಳನ್ನು ಜನಮನದಲ್ಲಿ ಬಿತ್ತಲು ದೇಶ ಸಂಚಾರ ಕೈಗೊಳ್ಳುತ್ತಾರೆ. ಜೀವನ ವೈರಾಗ್ಯದತ್ತ ಸಾಗುತ್ತದೆ. ಆ ಕಾಲದಲ್ಲಿ ಗುರುನಾನಕರು ಹೊಸ ವಿಚಾರಗಳನ್ನು ತಿಳಿಸುವುದು, ಸಂಪ್ರದಾಯಗಳನ್ನು ಅಲ್ಲಗಳೆಯುವುದು, ಜನರ ನಂಬಿಕೆಯ ಆಚಾರಣೆಗಳನ್ನು ವಿರೋಧಿಸುವುದು ಸುಲಭವಾಗಿರಲಿಲ್ಲ. ಇದಕ್ಕಾಗಿ ಅವರು ತುಂಬಾ ವಿರೋಧವನ್ನು ಎದುರಿಸಬೇಕಾಯಿತು. ಆದರೂ ಯಾರ ವಿರೋಧವನ್ನೂ ಲೆಕ್ಕಿಸದೆ ಗ್ರಾಮ ಗ್ರಾಮಗಳಿಗೆ, ಮನೆ ಮನೆಗಳಿಗೆ, ಪ್ರಾಂತದಿಂದ ಪ್ರಾಂತಕ್ಕೆ ಸಂಚಾರ ಮಾಡಿ ಜನಮನಕ್ಕೆ ತಮ್ಮ ಸಂದೇಶವನ್ನು ಮುಟ್ಟಿಸಲು ಸಂಚಾರ ಕೈಗೊಂಡರು. ಗುರು ನಾನಕರಿಗೆ ಕಂಠಸಿರಿ ಚೆನ್ನಾಗಿತ್ತು. ತುಂಬ ಚೆನ್ನಾಗಿ ಹಾಡುತ್ತಿದ್ದರೂ ಕೂಡ. ಇವರು ತಮ್ಮ ವಿಚಾರಗಳ ಪ್ರಚಾರಕ್ಕೆ ಸಂಗೀತವನ್ನು ಬಳಸಿದರು. ಹಾಡಿನ ಮೂಲಕವೇ ಜನಗಳನ್ನು ಆಕರ್ಷಿಸಿದರು. ಇವರ ಜೊತೆಯಲ್ಲಿ ಒಬ್ಬ ರೆಬೆಕ್ ವಾದಕ ಮರ್ಧನ ಈತ ಹಾಡುತ್ತಿದ್ದಂತೆ (ನಾನಕರು) ವಾದ್ಯ ನುಡಿಸುತ್ತಿದ್ದ. ಇವರ ಭಕ್ತಿ ಪಂಥ ಸುಶ್ರಾವ್ಯ ಹಾಡುಗಳೊಂದಿಗೆ ವ್ಯಾಪಕವಾಗಿ ಪ್ರಚಾರವಾಯಿತು. ನಾನಕರು ತಮ್ಮ ಸಂಚಾರದಲ್ಲಿ ಸನ್ಯಾಸಿಗಳೊಂದಿಗೆ, ವಿದ್ವಾಂಸರೊಂದಿಗೆ, ಯೋಗಿಗಳೊಂದಿಗೆ ಅನೇಕ ಧರ್ಮಸೂಕ್ಷ್ಮಗಳನ್ನು ಚರ್ಚಿಸಿ ತಿಳಿದು ಕೊಂಡರು. ಅಲ್ಲಲ್ಲಿ ದೇವಾಲಯ ಮತ್ತು ಮಸೀದಿಗಳಲ್ಲಿ ನಡೆಯುವ ಅವ್ಯವಹಾರಗಳನ್ನು ಗಮನಿಸಿದರು. ಸುಮಾರು ಇಪ್ಪತ್ಮೂರು ವರ್ಷಗಳ ಕಾಲ ದೇಶದ

ಉದ್ದಗಲಕ್ಕೂ ಸಂಚರಿಸಿ ಧರ್ಮ ಪ್ರಚಾರ ಮಾಡಿದರು. ಕೆಳವರ್ಗದ ಜನ ಶ್ರೀಸಾಮಾನ್ಯರೆಲ್ಲಾ ಇವರ ಶಿಷ್ಯರಾದರು. ಇವರ ಭಕ್ತರ ಸಂಖ್ಯೆ ಬೆಳೆಯಿತು.

ಇವರು ಸರಳ ಜೀವಿಯಾಗಿದ್ದರು. ಶ್ರೀಸಾಮಾನ್ಯರೊಂದಿಗೆ ಬೆರೆತು ಇರುತ್ತಿದ್ದರು. ಇವರ ಹೊಸ ವಿಚಾರಗಳ ಚಿಂತನೆಗಳ ಗಾಳಿ ಎಲ್ಲಕಡೆ ಬೀಸತೊಡಗಿತು. ಇವರ ಸಂಚಾರ ಕಾಲದಲ್ಲಿ ಒಂದು ಸಲ ಒಬ್ಬ ಖಾಜಿ ನಾನಕನನ್ನು ಪ್ರಶ್ನಿಸಿದ-'ನಿನ್ನ ದೃಷ್ಟಿಯಲ್ಲಿ ಮುಸ್ಲಿಮನ ಕಲ್ಪನೆಯೇನು? ಎಂದು ಅದಕ್ಕೆ ನಾನಕರು-'ಕರಣೆಯೇ ಮಸೀದಿ, ಭಕ್ತಿಯೇ ಚಾಪೆ, ಮನುಷ್ಯತ್ವ ಕುರಾನ್, ಸಹನ ಸನ್ನಡತೆಗಳೇ ಉಪವಾಸ, ನಡೆಯುವ ಒಳ್ಳೆ ದಾರಿಯೇ ಕೃತಿ 'ಕಾಬಾ' ಯಾತ್ರೆ, ಪ್ರಾರ್ಥನೆಯೇ ಜಪಮಣಿ. ಎಂದು ಉತ್ತರಿಸಿ ಅನಗತ್ಯ ಆಚರಣೆಗಳನ್ನು ಖಂಡಿಸಿ ಗುಣಾತ್ಮಕ ಆಚರಣೆಗಳನ್ನು ತಿಳಿಸುತ್ತಾರೆ. ಒಂದು ಸಲ ಗುರುನಾನಕರು ಒಬ್ಬ ಕೆಳದರ್ಜೆಯ ಬಡಗಿಯ ಮನೆಯಲ್ಲಿ ಅತಿಥ್ಯ ಸ್ವೀಕರಿಸುತ್ತಾರೆ. ಇದು ಆ ಊರಿನ ಜನತೆಗೂ ಒಬ್ಬ ಭಾರೀ ಶ್ರೀಮಂತನಿಗೂ ಅಸಮಾಧಾನದ ವಿಷಯವಾಗಿತ್ತು. ಶ್ರೀಮಂತನು ತನ್ನ ಮನಗೆ ಆಹ್ವಾನಿಸಿದ್ದ ಆದರೆ ನಾನಕರು ಅವನ ಆಮಂತ್ರಣವನ್ನು ತಿರಸ್ಕರಿಸಿದ್ದರು. ಅವರ ನಿಲುವು ಮಾನವೀಯ ವಾಗಿತ್ತು. ಶ್ರೀಮಂತನು ಜನತೆಯ ತುತ್ತು ಕಿತ್ತುಕೊಂಡು ಸಂಪಾದಿಸಿದವನು. ಶ್ರಮವಹಿಸಿ ದುಡಿದು ಗಂಜಿ ಉಣ್ಣುವ ಈ ಬಡಗಿ ಆ ಶ್ರೀಮಂತನಿಗಿಂತ ಮೇಲು ಎನ್ನುವುದು ನಾನಕರ ವಿಚಾರ.

ಇವರ ಸಂಚಾರ ಕಾಲದಲ್ಲಿ ಎಲ್ಲ ಜಾತೀಯ ವರ್ಗದ ಜನ ಇವರಿಗೆ ಶಿಷ್ಯರಾಗುತ್ತಾರೆ. ಇನ್ನೊಂದು ಘಟನೆ ಹೀಗಿದೆ; ಒಮ್ಮೆ ನಾನಕರು ಹರಿದ್ವಾರದಲ್ಲಿ ವಾಸ ಮಾಡಿದ್ದರು. ಅಲ್ಲಿಯ ಪಂಡರ (ಪುರೋಹಿತರು) ಆಚರಣೆಗಳು ನಾನಕರಿಗೆ ವಿಚಿತ್ರವಾಗಿ ಕಂಡವು. ಒಬ್ಬ ಯಾತ್ರಿಕ ಸೂರ್ಯನಿಗೆ ಗಂಗಾಜಲವನ್ನು ಅರ್ಪಿಸುತ್ತಿದ್ದ. ಅದನ್ನು ಕಂಡ ನಾನಕ 'ಯಾಕೆ ಸೂರ್ಯನ ಕಡೆ ನೀರು ಎರಚುತ್ತಿರುವಿ? ಎಂದು ಪ್ರಶ್ನಿಸಿದ. ಅದಕ್ಕೆ ಅವನು (ಪಂಡ) ಹೇಳಿದ: 'ಸ್ವರ್ಗದಲ್ಲಿರುವ ನನ್ನ ಪೂರ್ವಿಕರಿಗೆ ನೀರು ಅರ್ಪಿಸುತ್ತಿದ್ದೇನೆ ಎಂದು ಆಗ ನಾನಕರು ತಾವೂ ನದಿಗೆ ಇಳಿದು ಪಶ್ಚಿಮದ ಕಡೆಗೆ ತಿರುಗಿ ನೀರು ಎರಚಲು ತೊಡಗುತ್ತಾರೆ. ಇದನ್ನು ಕಂಡ ಆ ಪಂಡ ಯಾಕೆ ನೀನು ವಿರುದ್ಧ ದಿಕ್ಕಿಗೆ ನೀರು ಎರಚುತ್ತಿರುವಿ? ಎಂದು ಪ್ರಶ್ನಿಸಿದ. ಅದಕ್ಕೆ ನಾನಕರು-ನಾನು ಸೂರ್ಯನಿಗೆ ನೀರು ಕುಡಿಸಲು ಯತ್ನಿಸುತ್ತಿಲ್ಲ, ಆದರೆ ಹೊಲಕ್ಕೆ ನೀರು ಕುಡಿಸಲು ಯತ್ನಿಸುತ್ತೇನೆ ಎಂದು ಉತ್ತರಿಸುತ್ತಾರೆ. ಆಗ ಆ ಪಂಡ ಈ ನೀರು ದೂರದ ಹೊಲಕ್ಕೆ ಹೇಗೆ ಮುಟ್ಟಲು ಸಾಧ್ಯ?' ಎಂದು ಕೇಳುತ್ತಾನೆ. ಆಗ ನಾನಕರು 'ನೀನು ಎರಚುವ ನೀರು ಸ್ವರ್ಗದಲ್ಲಿರುವ ನಿನ್ನ ಪೂರ್ವಿಕರಿಗೆ ತಲುಪವುದಾದರೆ ನಾನು ಎರಚುವ ನೀರು ಈ ಭೂಮಿಯ ಮೇಲಿರುವ ನನ್ನ ಜಮೀನಿಗೇಕೆ ಹೋಗಲು ಸಾಧ್ಯವಿಲ್ಲ?

ಎಂದು ಉತ್ತರಿಸಿದಾಗ, ಆ ಪಂಡ ನಿರುತ್ತರನಾಗುತ್ತಾನೆ. ಹೀಗೆ ಇವರ ಮಾತು ಧಾರ್ಮಿಕ ಸಂಪ್ರದಾಯಗಳಿಗೆ ಕಿಡುನುಡಿಯಾಗಿತ್ತು. ಒಂದು ಸಲ ನಾನಕರು ಗೋರಕ ಮಠ ಎಂಬ ಯೋಗಿಗಳ ಕೇಂದ್ರಕ್ಕೆ ಬರುತ್ತಾರೆ. ಅಲ್ಲಿದ್ದ ಯೋಗಿಗಳು ನಾನಕರನ್ನು ಚರ್ಚೆಗೆ ಎಳೆಯುತ್ತಾರೆ. 'ನಿಜವಾದ ಯೋಗಿ ಯಾರು?' ಎಂದು ನಾನಕರು ಹೇಳುತ್ತಾರೆ. 'ಧರ್ಮ ಕಾವಿಯಲ್ಲಿಲ್ಲ ಹಿಡಿಯುವ ದಂಡದಲ್ಲಿಲ್ಲ. ಬಳಿಯುವ ಬೂದಿಯಲ್ಲಿಲ್ಲ. ಕಿವಿಯ ಉಂಗುರದಲ್ಲಿಲ್ಲ, ಬೋಳಿಸಿದ ತಲೆಯಲ್ಲಿಲ್ಲ ಶಂಖನಾದದಲ್ಲಿ ಇಲ್ಲ. ಆದರೆ ಬದುಕಿನ ದೋಷಗಳ ಮಧ್ಯೆ ಇದ್ದೂ ಅವುಗಳನ್ನು ಗೆಲ್ಲುವವನೇ ನಿಜವಾದ ಯೋಗಿ' ಎಂದು ಸಮರ್ಪಕವಾಗಿ ಉತ್ತರಿಸುತ್ತಾರೆ. ಗುರುನಾನಕರ ಈ ತರ್ಕಬದ್ಧ ಆಲೋಚನೆಗೆ ಅನೇಕ ಜನ ನಾಥಪಂಥದ ಸನ್ಯಾಸಿಗಳು ಶರಣಾಗತರಾಗಿ ಈತನ ಅನುಯಾಯಿಗಳಾದರು. ಇನ್ನೊಂದು ಘಟನೆ,... ಗುರುನಾನಕರು ಒಮ್ಮೆ ಒರಿಸ್ಸಾದ ಪುರಿ ಜಗನ್ನಾಥ ದೇವಾಲಯಕ್ಕೆ ಭೇಟಿ ಕೊಟ್ಟರು. ಪುರೋಹಿತರ ಧೂಮ್ ಧಾಮ್ ಪೂಜೆ ನಡೆದಿತ್ತು. ಅಲ್ಲಿ ಬರಿಯ ಆಡಂಬರವಿತ್ತು ಭಕ್ತಿ ಕಾಣೆಯಾಗಿತ್ತು. ಅಲ್ಲಿ ಹೃದಯಪೂರ್ವಕ ಧ್ಯಾನವಿರಲೇ ಇಲ್ಲ. ಈ ದೃಶ್ಯವನ್ನು ಕಂಡ ಗುರುನಾನಕರು ಬೇಸರದಿಂದ ನೊಂದು ಈ ಗೀತೆ ಹಾಡುತ್ತಾರೆ. 'ಆಕಾಶ ಆರತಿ ತಟ್ಟೆ, ಸೂರ್ಯ ಚಂದ್ರರೇ ಹಣತೆ, ನಕ್ಷತ್ರಗಳೇ ಆಭರಣ, ಗಂಧದ ಮರಗಳ ಮೇಲಿನ ಬೀಸುಗಾಳಿಯೇ ಚಾಮರ, ಇಡೀ ಕಾಡೇ ಹೂ, ಎಂತಹ ಅದ್ಭುತ ಆರತಿ ಇದು. ಇದನ್ನು ದೇವಾಲಯದ ಮುಂಭಾಗದಲ್ಲಿ ನಿಂತು ಹಾಡುತ್ತಿದ್ದಂತೆ ಯಾತ್ರಿಗಳು, ಪುರೋಹಿತರು ನಾನಕರ ಸುತ್ತ ನೆರೆದರು. ಆ ಹಾಡಿನ ಮಾಧುರ್ಯಕ್ಕೆ ಮರುಳಾಗಿ ತಾವೂ ಹಾಡತೊಡಗಿದರು. ಹೀಗೆ ಗುರುನಾನಕರು ದೇಶದ ಉತ್ತರ ದಕ್ಷಿಣ ಭಾಗವನ್ನೆಲ್ಲ ಸಂಚಾರ ಮಾಡಿ ಅಲ್ಲಲ್ಲಿ ಜೈನ, ಬೌದ್ಧ, ಇಸ್ಲಾಂ, ಸೂಫಿಗಳೊಂದಿಗೆ ಆಧ್ಯಾತ್ಮಿಕ ವಿಚಾರಗಳನ್ನು ಚರ್ಚಿಸಿ ಎಲ್ಲ ಸಂಪ್ರದಾಯದ ಗುರುಗಳೊಂದಿಗೆ ಸಂವಾದ ನಡೆಸಿ ಸಮನ್ವಯ ಮನೋಭಾವವನ್ನು ಬೆಳೆಸಿಕೊಂಡರು. ಅವರ ಕೊನೆಯ ಪ್ರಯಾಣ ಮಕ್ಕಾ. ನಾನಕರು ಮಕ್ಕಾಗೂ ಹೋಗುತ್ತಾರೆ. ಅಲ್ಲಿ ಒಂದು ಘಟನೆ ನಡೆಯಿತು. ರಾತ್ರಿ ನಾನಕರು ಕಾಬಾದ ಕಡೆ ತಲೆ ಮಾಡಿ ಕಾಲು ಚಾಚಿ ಮಲಗುತ್ತಾರೆ. ಮಧ್ಯರಾತ್ರಿ ಒಬ್ಬ ಕಾವಲುಗಾರ ಬಂದು ಕಾಬಾದ ಕಡೆಗೆ ಕಾಲು ಮಾಡಿ ಮಲಗಬಾರದೆಂದು ತಿಳಿಸುತ್ತಾನೆ. ಅದಕ್ಕೆ ನಾನಕರು 'ದೂರಪ್ರಯಾಣದಿಂದ ಬಂದು ಬಳಲಿದ್ದೇನೆ. ದೇವರಿಲ್ಲದ ದಿಕ್ಕಿಗೆ ನೀನೆ ನನ್ನ ಕಾಲು ತಿರುಗಿಸು ಎಂದು ಹೇಳಿ ಶಾಂತವಾಗಿ ಮಲಗಿಕೊಂಡರು. ಆ ಕಾವಲುಗಾರನಿಗೆ ಇವರ ಮಾತಿನ ಅರ್ಥ ಹೊಳೆದು ಇವರ ಪಾದಗಳಿಗೆ ಶರಣಾದ.

ನಾನಕರು ಬಹಳ ವರ್ಷಗಳ ಕಾಲ ಧರ್ಮ ಪ್ರಚಾರಕ್ಕಾಗಿ ದೇಶ ಸಂಚಾರ ಮಾಡಿ ಕರ್ತಾರಪುರಕ್ಕೆ ಬರುತ್ತಾರೆ. ಹಳ್ಳಿಯ ಜನ ಅವರಿಗೆ ಭೂಮಿಯನ್ನು ಒದಗಿಸುತ್ತಾರೆ. ಅಲ್ಲಿ ಅವರು ಕೃಷಿ ಕೆಲಸದಲ್ಲಿ ತೊಡಗುತ್ತಾರೆ. ಸಾಮಾನ್ಯ ರೈತರಂತೆ

ಉಡುಗೆ ತೊಡುಗೆಗಳನ್ನು ತೊಟ್ಟು ಕೃಷಿ ಕೆಲಸದಲ್ಲಿ ತೊಡಗುತ್ತಾರೆ. ಇವರ ಹೆಂಡತಿ ಮಕ್ಕಳು ಇವರ ಜತೆ ಇದ್ದರು. ಎಲ್ಲ ಜಾತಿ ಮತದವರು ಸೇರಿ ಸಾಮೂಹಿಕ ಬೇಸಾಯವನ್ನು ಜಾರಿಗೆ ತಂದರು. ಇದಕ್ಕೆ ಮಾರ್ಗದರ್ಶಕರು ಗುರುನಾನಕರು. ಅಂದು ಒಂದು ದಿನ ಗುರುನಾನಕರು ಪ್ರಾರ್ಥನೆಗೆ ಕುಳಿತವರು ಮತ್ತೆ ಏಳಲೇ ಇಲ್ಲ. ತಮ್ಮ ಇಹಲೋಕದ ಯಾತ್ರೆಯನ್ನು ಅವರು ಮುಗಿಸಿದ್ದರು (೧೫೩೯, ೭ನೇ ಸೆಪ್ಟೆಂಬರ್). ಎಲ್ಲರಂತೆ ನಾನಕರು ಸಾವನ್ನಪ್ಪಿದರು. ಲಕ್ಷಾಂತರ ಜನರೆದೆಯಲ್ಲಿ ದೀಪ ಹಚ್ಚಿದ್ದರು. ನಾನಕರು ಸಾಯಲಿಲ್ಲ. ಇವರ ನೆನಪಿಗಾಗಿ ಹಿಂದೂ-ಮುಸ್ಲಿಮರು 'ರಾವಿ' ನದೀ ದಂಡೆಯಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಿದರು. ಪಂಜಾಬಿನ ಜನರು ನಾನಕರನ್ನು ಹೀಗೆ ನೆನೆಯುತ್ತಾರೆ. 'ನಾನಕರು ಸತ್ಯ ದೇವರು. ಹಿಂದೂಗಳ ಗುರು ಮುಸಲ್ಮಾನ ಮೌಲ್ವಿ' ಎಂದು ಗೌರವಿಸುತ್ತಾರೆ. ನಾನಕರು ಧರ್ಮಕ್ಕೆ ವಿನೂತನ ವ್ಯಾಖ್ಯಾನವನ್ನೂ ಹೊಸ ದಾರಿಯನ್ನು ನಿರ್ಮಿಸಿದರು. ದೇಶವನ್ನೇ ಸುತ್ತಿ ಸುಳಿದರು. ಮಕ್ಕಾಗೂ ಹೋಗಿ ಬಂದರು. ಅವರು ದೊಡ್ಡ ಪಯಣಿಗ. ಒಣ ಪಂಡಿತರಿಗೆ, ಶ್ರೀಮಂತರಿಗೆ, ಪುರೋಹಿತರಿಗೆ ಹಾಗೂ ಡಾಂಭಿಕರಿಗೆ ನಾನಕರು ಚೆನ್ನಾಗಿಯೇ ಪಾಠ ಕಲಿಸಿದರು.

ಇವರ ಅನುಯಾಯಿಗಳ ತಂಡವೇ ಇತ್ತು. ಜನರನ್ನು ಒಳ್ಳೆಯ ಮಾರ್ಗದಲ್ಲಿ ತಿದ್ದಿ ನಡೆಸುವುದೇ ಇವರ ಗುರಿಯಾಗಿತ್ತು. ನಾನಕ ಪತ್ನಿ ಪುತ್ರರನ್ನು ಬಿಡಲಿಲ್ಲ. ಸಂಸಾರದ ಬಗ್ಗೆ ನಿರಾಸೆ ತಾಳಲಿಲ್ಲ. ಈ ಲೋಕದಲ್ಲಿ ಶ್ರೀಸಾಮಾನ್ಯರಂತೆ ಬಾಳಿ ಬದುಕಿ ಲಕ್ಷ ಜನರ ಮನಸ್ಸಿನ ವಿಕಾಸಕ್ಕೆ ಕಾರಣನಾದ. ಗುರನಾನಕರ ಭಕ್ತಿ ಚಳುವಳಿಯ ಮೂಲ ಆಶಯ- ೧.ಸಾಮಾಜಿಕ ಬಂಧನಗಳನ್ನು ಅಂತ್ಯಗೊಳಿಸುವುದು; ೨. ಹಿಂದೂ ಮುಸ್ಲಿಮರ ಐಕ್ಯತೆ ಸಾಧಿಸುವುದು; ೩. ಸಾಮಾಜಿಕ ಬದಲಾವಣೆಗೆ ಪ್ರಯತ್ನಿಸುವುದು.

ನಾನಕರ ಭಕ್ತಿ ಚಳುವಳಿ ಜಾತೀಯತೆ, ಅಸ್ಪೃಶ್ಯತೆ ಆಚರಿಸುತ್ತಿದ್ದ ಹಿಂದೂ ಧರ್ಮದ ಸುಧಾರಣೆಗೂ ಪ್ರಯತ್ನಿಸಿತು. ಪುರೋಹಿತರ ವಿರುದ್ಧ ಹಾಗೂ ಖಾಜಿಗಳ ವಿರುದ್ಧ ಹೋರಾಟ ಮಾಡಿತು. ಭಕ್ತಿಚಳುವಳಿಗಳಲ್ಲಿ ಸಿಡಿದೆದ್ದ ಸಂತರು ಸಂಸಾರಿಗಳಾಗಿದ್ದರು. ಇದು ಅವರ ವೈಶಿಷ್ಟ್ಯ. ಇವರುಗಳು ಬಳಸಿದ ಭಾಷೆ ಜನಸಾಮಾನ್ಯರ ಭಾಷೆ. ಈ ಚಳುವಳಿಯಲ್ಲಿ ಬಹುಪಾಲು ಸಂತರು ಕೆಳವರ್ಗದಿಂದ ಬಂದವರು. ದುಡಿಯುವ ವರ್ಗಕೆ ಸೇರಿದವರು. ಸಾಮಾಜಿಕ, ಧಾರ್ಮಿಕ ಸುಧಾರಣೆಯಲ್ಲಿ ನಾನಕರ ಕೂಗು ಅರ್ಥಗರ್ಭಿತ ಹಾಗೂ ದಿಟ್ಟತನದಿಂದ ಕೂಡಿತ್ತು. ನಾನಕರ ಜೀವನ ಕ್ರಮ ಆದರ್ಶವಾಗಿತ್ತು. ಒಂದೇ ಭೂಮಿ-ಎಲ್ಲ ಜಾತಿ ಧರ್ಮಗಳ ಜನ ಒಟ್ಟಿಗೆ ಸೇರಿ ದುಡಿದು ಹಂಚಿಕೊಂಡು ಒಂದೇ ಒಲೆಯಲ್ಲಿ ಬೇಯಿಸಿಕೊಂಡು ತಿನ್ನುವ ಪದ್ಧತಿ ಅಪೂರ್ವವಾದುದು.

ತಾವೇ ಹೊಲದಲ್ಲಿ ದುಡಿದರೂ ಹೆಂಡತಿ ಮಕ್ಕಳನ್ನು ತಿರಸ್ಕರಿಸಲಿಲ್ಲ.

ದುಡಿಯುವ ಸಂಸ್ಕೃತಿಗೆ ಬೆಲೆ ತಂದರು. ಪ್ರೀತಿ ಸಮಾನತೆಯನ್ನು ಆಧರಿಸಿದ ಹೊಸ ಸಂಸ್ಕೃತಿ ಚಳುವಳಿಗೆ ನಾನಕರು ನಾಯಕರಾದರು.

ಗುರುನಾನಕರು ಕೆಳಜಾತಿಯಲ್ಲೂ ಅತ್ಯಂತ ಕೆಳಗುಳಿದವರಿದ್ದಾರೆ! ನಾನು ಅವರಿರುವಲ್ಲಿಗೆ ಹೋಗುತ್ತೇನೆ. ದೊಡ್ಡವರೊಂದಿಗೆ ನನಗೇನು ಕೆಲಸ?... ಎಂದು ಹೇಳುತ್ತಿದ್ದರು. ಹಿಂದೂಳಿದ ಎಲ್ಲ ಜಾತಿಯವರನ್ನು ಅಪ್ಪಿಕೊಂಡು ತಮ್ಮ ಭಕ್ತಿಪಂಥವನ್ನು ಬೆಳೆಸಿದರು. ಸ್ತ್ರೀಯರಿಗೆ ಸಲ್ಲಬೇಕಾದ ಸ್ಥಾನಮಾನ ನೀಡಿದರು. ರಾಜರಿಗೂ ಮತ ಪ್ರವರ್ತಕರಿಗೂ ಜನ್ಮ ನೀಡಿದಂಥ ಸ್ತ್ರೀಯರನ್ನು ಪುರುಷರಿಗಿಂತ ಕಡಿಮೆ ಎಂದು ಭಾವಿಸುವುದು ಹೇಗೆ ಸಾಧ್ಯ? ಎಂದು ಪ್ರಶ್ನಿಸುವುದರ ಮೂಲಕ ಧಾರ್ಮಿಕ ಸಮಾರಂಭದಲ್ಲಿ ಸ್ತ್ರೀ ಪುರುಷರಿಗೆ ಸಮಾನ ಸ್ಥಾನ ನೀಡುತ್ತಾರೆ. ಸಿಖ್ ಧರ್ಮದಲ್ಲಿ ನಾಮ್ ಹಾಗೂ ಸೇವಾ ಎಂಬೆರಡು ಅಂಶಗಳು ಮಹತ್ವದವು. ನಾಮ ಸಂಕೀರ್ತನ ಮತ್ತು ಸಮಾಜ ಸೇವೆ ಎಂದು ಅವುಗಳನ್ನು ಕರೆಯುತ್ತಾರೆ. ಗುರು ನಾನಕರು ನಾಮ ಸಂಕೀರ್ತನದ ಮೂಲಕ ಜನ ಸಂಘಟನೆ ಮಾಡಿದರು. ಎಲ್ಲ ಜನಾಂಗವನ್ನು ಪ್ರೀತಿಸಿದರು. ಅವರ ಸಂಘಟಿತ ಮೈತ್ರಿಯ ಹೆಸರು 'ಸಂಗತ್' ಹೀಗೆ ನಾನಕರು ಭಕ್ತಿಪಂಥವನ್ನು ಕಟ್ಟಿ ಅದಕೊಂದು ಸ್ವರೂಪವನ್ನು ನೀಡಿ, ಭಕ್ತಿ ಚಳುವಳಿಯ ಮೂಲಕ ಪಂಜಾಬ್ ಪ್ರಾಂತದಲ್ಲಿ ದೊಡ್ಡ ಕ್ರಾಂತಿಯನ್ನೆ ಮಾಡಿದರು. ಅವರ ಸಂದೇಶ ಭಾರತದ ಎಲ್ಲೆಡೆ ಹರಡಿತು.

❖

೮. ಒರಿಸ್ಸಾಪ್ರಾಂತದ ಭಕ್ತಿಚಳುವಳಿ (ಮಹಿಮಾ ಪಂಥ)

ಕ್ರಿ. ಶ. ೧೮ನೆ ಶತಮಾನ (೧೮೬೦-೧೮೯೫)

ಭಾರತದಲ್ಲಿ ಸಾವಿರಾರು ವರ್ಷಗಳಿಂದ ವರ್ಣಾಶ್ರಮ ಧರ್ಮದ ಕಹಿ ಫಲವಾಗಿ ಜಾತಿ ಪದ್ಧತಿ ಬೆಳೆದು ಬಂದು ಮನುಷ್ಯ-ಮನುಷ್ಯರಲ್ಲಿ ಮೇಲು-ಕೀಳುಗಳ ಸೃಷ್ಟಿಯಾಗಿ ಅಜ್ಞಾನ, ಮೂಢನಂಬಿಕೆ, ಅಂಧಕಾರದಲ್ಲಿ ಮುಳುಗಿದ್ದ ಜನಾಂಗವನ್ನು ಎಚ್ಚರಿಸಲು ಸಂತರು ಮಹಾಂತರು ಆಗಾಗ ಜನ್ಮವೆತ್ತಿ ಬಂದು ಮನುಕುಲಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಸಮಾಜದಲ್ಲಿ ಸಮಾನತೆಯ ಬೆಳಕನ್ನು ಚೆಲ್ಲಿದ್ದಾರೆ. ಅಂತಹವರಲ್ಲಿ ಮಹಿಮಾಗೋಸಾಯಿ ಆತನ ಅನುಯಾಯಿ ಭೀಮಾ ಬೋಯಿ. ಕೆಳವರ್ಗದಿಂದ ಬಂದ ಭೀಮಾ ಬೋಯಿ ಒಂದು ಧರ್ಮದ ಹರಿಕಾರನಾದುದು ಚರಿತ್ರೆಯ ಅಪರೂಪದ ಸೋಜಿಗಳಲ್ಲಿ ಒಂದು; ಅವನು ಒರಿಸ್ಸಾ ಪ್ರಾಂತದ ಕೊಂಡ ಬುಟಕಟ್ಟಿನ ಕವಿ. ಇವನು ಪ್ರತಿಪಾದಿಸಿದ ಧರ್ಮ 'ಮಹಿಮಾ ಧರ್ಮ'.

ಭೀಮ ಬೋಯಿ ಧರ್ಮ ಬೋಧಕನಾಗಿ ಮೇಲು ವರ್ಗದವರಿಂದ ಅನೇಕ ಅಪಮಾನಗಳನ್ನು ನುಂಗಿ ತನ್ನ ಧರ್ಮದ ಪ್ರಚಾರಕ್ಕಾಗಿ ಹೋರಾಟ ನಡೆಸಿದ್ದು ಮಹತ್ತರ ಸಾಧನೆ. ಈತ ಸಂಬಾಲೆಪುರ ಜಿಲ್ಲೆಯ ಕಂಕಡಪುರ ಎಂಬ ಹಳ್ಳಿಯಲ್ಲಿ ಕೊಂಡ್ ಬುಡಕಟ್ಟು ಜನಾಂಗದಲ್ಲಿ ಜನಿಸಿದ (ಹತ್ತೊಂಬತ್ತನೆಯ ಶತಮಾದ ಮಧ್ಯಭಾಗದಲ್ಲಿ) ಇವನ ಪೂರ್ಣ ಹೆಸರು ಭೀಮಸೇನ್ ಅರಖ್ಷಿತ ದಾಸ್ ಎಂದು. ಒಂದು ಐತಿಹ್ಯದಲ್ಲಿ ಉಲ್ಲೇಖವಾಗಿರುವಂತೆ ಮಹಿಮಾ ಸ್ವಾಮಿ ಮತ್ತು ಅವರ ಶಿಷ್ಯನಾದ ಸಿದ್ಧ ಗೋವಿಂದ ಬಾಬು ಇಬ್ಬರೂ ಮಧ್ಯರಾತ್ರಿಯಲ್ಲಿ ಬಂದು ಇವನಿಗೆ ದರ್ಶನವನ್ನು ನೀಡಿ ಇವನಿಗೆ ಆಶೀರ್ವದಿಸಿದರಂತೆ. ಅಂದಿನಿಂದ ಭೀಮ ಬೋಯಿಗೆ ಜ್ಞಾನೋದಯವಾಯಿತಂತೆ. ಅವರು ನೀನು 'ಮಹಿಮಾ ಧರ್ಮ' ವನ್ನು ಜನಗಳಿಗೆ ಬೋಧಿಸು ಎಂದರಂತೆ. ಮಹಿಮಾಧರ್ಮದ ಸ್ಥಾಪಕ ಮೊದಲು ಮಹಿಮಾ ಸ್ವಾಮಿಯೆಂದು ಪ್ರಸಿದ್ಧನಾಗಿದ್ದ ಮಹಿಮಾ ಗೋಸಾಯಿ. ಮೊದಲು ಈ ಧರ್ಮವನ್ನು ಬೋಧಿಸಿದವನು ಅವನೇ. ಅನಂತರ ಈತನ ಶಿಷ್ಯ ವಿಶ್ವನಾಥ ಬಾಬಾ ಈ ಧರ್ಮಕ್ಕೊಂದು ಸ್ವರೂಪವನ್ನು ಕೊಟ್ಟನು. ಅದುವೇ 'ಮಹಿಮಾ ಧರ್ಮ'ವೆಂದು ಪ್ರಸಿದ್ಧವಾಯಿತು. ನಂತರ

ಭೀಮಬೋಯಿ ಈ ಧರ್ಮದ ದೀಕ್ಷೆ ಪಡೆದು ಧರ್ಮ ಪ್ರಚಾರವನ್ನು ಕೈಗೊಂಡ ಮೇಲೆ ಈ ಧರ್ಮಕ್ಕೆ ತನ್ನದೇ ಆದ ಸೈದ್ಧಾಂತಿಕ ನೆಲೆಗಟ್ಟು ದೊರಕಿತು.

ಈ ಧರ್ಮದ ಮೂಲ ತತ್ತ್ವ ಶೂನ್ಯವಾದವನ್ನು ಎತ್ತಿಹಿಡಿಯುತ್ತದೆ. 'ಶೂನ್ಯ' ಎಂದರೆ ಏನೂ ಇಲ್ಲ ಎಂದರ್ಥವಲ್ಲ-ಎಲ್ಲವೂ ಇರುವ ಬ್ರಹ್ಮನೆಂದು-ಇದರ ಅರ್ಥ. ಇದು ಏಕೇಶ್ವರ ವಾದವನ್ನು ಎತ್ತಿಹಿಡಿಯುತ್ತದೆ. ಆದ್ದರಿಂದ ಇದಕ್ಕೆ 'ಅಲೇಖ ಪಂಥ' ವೆಂಬ ಇನ್ನೊಂದು ಹೆಸರು ಇದೆ. ಅಲೇಖ ಎಂದರೆ-ಅವರ್ಣನೀಯ ಎಂದರ್ಥ. ಈ ಧರ್ಮದ ಮುಖ್ಯ ಗ್ರಂಥಗಳೆರಡು: ೧. ಸತ್ಯ ಮಹಿಮಾ ಧರ್ಮ ಇತಿಹಾಸ, ೨. ಸತ್ಯ ಮಹಿಮಾ ಧರ್ಮ ಸಿದ್ಧ ಸಾಧು ಚರಿತಾಮೃತ. ಈ ಎರಡೂ ಗ್ರಂಥಗಳು ವಿಶ್ವನಾಥ ಬಾಬಾರಿಂದ ರಚಿತವಾದವು. ಮಹಿಮಾ ಗೋಸಾಯಿ ೧೮೭೬ರಲ್ಲಿ ಆತ್ಮ ಸಾಕ್ಷಾತ್ಕಾರ ಪಡೆದೆನೆಂದು ಹೇಳುತ್ತಾರೆ. ಆ ಸಂದರ್ಭದಲ್ಲಿ ಕ್ರೈಸ್ತ ಮಿಷನರಿಗಳು ಪುರಿಯಲ್ಲಿ ಧರ್ಮ ಪ್ರಚಾರಕ್ಕಾಗಿ ತೊಡಗಿದ್ದರು. ಒರಿಸ್ಸಾದ ಧಾರ್ಮಿಕ ಕೇಂದ್ರವಾಗಿದ್ದ ಜಗನ್ನಾಥ ದೇವಾಲಯದ ಉಸ್ತುವಾರಿಯನ್ನು ಬ್ರಿಟಿಷ್ ಸರಕಾರ ವಹಿಸಿಕೊಂಡಿತ್ತು. ಹಿಂದೂ ಸಂಪ್ರದಾಯದ ಆಚಾರ-ವಿಚಾರ ಮೂರ್ತಿಪೂಜೆಯನ್ನು ಕ್ರೈಸ್ತರು ಟೀಕಿಸ ತೊಡಗಿದ್ದರು. ಇಂತಹ ಸಂದರ್ಭದಲ್ಲಿ ಕಾಣಿಸಿಕೊಂಡಿದ್ದ ಈ ಮಹಿಮಾ ಧರ್ಮ ಬಹುದೇವತಾ ಆರಾಧನೆ, ಮೂರ್ತಿಪೂಜೆ, ಮೂಢನಂಬಿಕೆ, ಕಂದಾಚಾರ ಸಂಪ್ರದಾಯ. ಜಾತಿ ವ್ಯವಸ್ಥೆ ಎಲ್ಲವನ್ನೂ ಖಂಡಿಸುತ್ತಾ ಏಕದೇವೋಪಾಸನೆಯನ್ನು ಪ್ರತಿಪಾದಿಸುತ್ತ, ಬಹಳ ಬೇಗ ಜನಮನ್ನಣೆ ಗಳಿಸಿತ್ತು. ಸರಳತೆ, ಪ್ರಾಮಾಣಿಕತೆ, ಪರಿಶುದ್ಧತೆಗೆ ಒತ್ತು ನೀಡಿತು. ಪ್ರಾಪಂಚಿಕ ಆಸೆಗಳನ್ನು ನಿರಾಕರಿಸಿತು. ಭಕ್ತಿ, ಜ್ಞಾನ, ಯೋಗಗಳಿಂದ ಮಾತ್ರ ಮುಕ್ತಿ ಸಾಧ್ಯವೆಂದು ಅದು ಘೋಷಿಸಿತು. ಅದೇ 'ಮಹಿಮಾ ಧರ್ಮ'ದ ಬೀಜಮಂತ್ರವಾಯಿತು.

ಒರಿಸ್ಸಾ ಪ್ರಾಂತದ ಪುರಿ ಎಲ್ಲ ಧಾರ್ಮಿಕ-ಸಾಮಾಜಿಕ ಚಟುವಟಿಕೆಗಳ ಉಗಮ ಸ್ಥಾನ. ಹಾಗೆಯೇ ಉತ್ತರ ಮತ್ತು ದಕ್ಷಿಣದ ಸಂಗಮ ಸ್ಥಾನ. ಒಟ್ಟಿನಲ್ಲಿ ಈ ಕಾಲಕ್ಕೆ ಈ 'ಅಲೇಖಪಂಥ' ಕ್ರಾಂತಿಕಾರಿ ಸಿದ್ಧಾಂತಗಳನ್ನೊಳಗೊಂಡ ಒಂದು ಬಂಡಾಯದ ಚಳುವಳಿಯಾಗಿತ್ತು. ಡಾ. ಮಾಯಧರ ಮಾನಸಿಂಹ ಎಂಬ ಸಂಶೋಧಕರು ತಮ್ಮ ಗ್ರಂಥ 'ಅದ್ವಿತೀಯ ಅಲೇಖ ಪಂಥ' ಎಂಬ ಗ್ರಂಥದಲ್ಲಿ ಈ ಪಂಥದ ತತ್ತ್ವಗಳನ್ನು ತಿಳಿಸುತ್ತಾರೆ. ೧. ಜಾತ್ಯತೀತ ಸಮಾಜ; ೨. ಶೂನ್ಯಬ್ರಹ್ಮ ೩. ಬಾಹ್ಯ ಸಂಪ್ರದಾಯಗಳ ನಿರಾಕರಣೆ; (ತೀರ್ಥ-ಯಾತ್ರೆ-ಯಜ್ಞ-ಯಾಗ) ಇತ್ಯಾದಿ; ೪. ಸದಾಚಾರ ಬದುಕು; ೫. ಮಾನವನ ಒಳಿತಿಗಾಗಿ ಚಿಂತನೆ; ೬. ಧಾರ್ಮಿಕ ಶಿಸ್ತು. ಡಾ. ಸುಮತಿ ಕುಮಾರ ಚಟರ್ಜಿ ಈ ಅಲೇಖ ಪಂಥವನ್ನು ಬಂಗಾಳದ ಬ್ರಹ್ಮ ಸಮಾಜಕ್ಕೂ, ಪಂಜಾಬಿನ ಸಿಖ್ ಧರ್ಮಕ್ಕೂ, ಉತ್ತರ ಭಾರತದ ಕಬೀರ ಪಂಥಕ್ಕೂ, ಆರ್ಯ ಸಮಾಜಕ್ಕೂ,

ಹಾಗೆಯೇ ಕರ್ನಾಟಕದ ವಚನ ಚಳುವಳಿಗೂ ಹೋಲಿಸುವುದು ಉಚಿತ ಎಂದು ಅಭಿಪ್ರಾಯ ಪಡುತ್ತಾರೆ. ೧೮೬೨ ರಿಂದ ೧೮೭೬ರವರೆಗೆ 'ಮಹಿಮಾ ಧರ್ಮ' ಮಹಿಮಾ ಸ್ವಾಮಿಯ ನಿರ್ದೇಶನದಲ್ಲಿ ಅತ್ಯಂತ ಶೀಘ್ರವಾಗಿ ಪ್ರಸಾರಕ್ಕಾಗಿ ಸಾಕಷ್ಟು ಅನುಯಾಯಿಗಳನ್ನು ಪಡೆಯಿತು. ಈ ಧರ್ಮ ತನ್ನ ಸರಳತೆ ಹಾಗೂ ನೈತಿಕತೆಯಿಂದೊಡಗೂಡಿ ಅಂಧಕಾರದಲ್ಲಿ ಮುಳುಗಿದ್ದ ಜನಸಾಮಾನ್ಯರನ್ನು ಆಕರ್ಷಿಸಿತು.

ಮಹಿಮಾಧರ್ಮ ತನ್ನದೇ ಆದ ಗುರುಪರಂಪರೆಯನ್ನು ಹೊಂದಿದೆ. ಈ ಪಂಥವನ್ನು ಜನರು 'ಮಹಿಮಾ ಸಮಾಜ' ಎನ್ನುತ್ತಾರೆ. ಭೀಮ ಬೋಯಿಯಿಯು ಈ ಗುರು ಪರಂಪರೆಯ ಒಬ್ಬ ಶಿಷ್ಯ. ಅಕ್ಷರಕ್ಕೆ ವಂಚಿತನಾಗಿ, ಗಿರಿಜನರ ಗುಂಪಿಗೆ ಸೇರಿ, ಗುರು ಕೃಪೆಗೆ ಪಾತ್ರನಾಗಿ ಗುರುಗಳಿಂದ ಜ್ಞಾನಬೋಧೆಯನ್ನು ಪಡೆದು ದೈವಶಕ್ತಿಯ ಬಲದಿಂದ ಕವಿತಾಶಕ್ತಿಯನ್ನು ಗಳಿಸಿ ಸ್ತುತಿ ಭಜನೆಯ ಮೂಲಕ ಮಹಿಮಾಧರ್ಮವನ್ನು ಪ್ರಚಾರ ಮಾಡುವ ಘನ ಉದ್ದೇಶದಿಂದ ಕಂಕಣಬದ್ಧನಾಗುತ್ತಾನೆ. -ಈ ಭೀಮಾಬೋಯಿ. ಊಳಿಗಮಾನ್ಯ ವ್ಯವಸ್ಥೆಯಿದ್ದ ಸೋಣೆಪುರವನ್ನು ತನ್ನ ಪ್ರಧಾನ ನಲೆಯನ್ನಾಗಿ ಮಾಡಿಕೊಳ್ಳುತ್ತಾನೆ. ಧರ್ಮ ಪ್ರಚಾರ ಕಾರ್ಯವನ್ನು ಭೀಮಬೋಯಿ ಒಂದು ಆಶ್ರಮದಲ್ಲಿ ಪ್ರಾರಂಭ ಮಾಡುತ್ತಾನೆ. ಈತನು ಆಧ್ಯಾತ್ಮ ಚಿಂತನೆ ಮಾಡುತ್ತಿದ್ದ. ಆದರೆ ಸಂಪೂರ್ಣ ವಿರಕ್ತನಾಗಿ ಇರಲಿಲ್ಲ. ಅವನ ಸಂಗಾತಿ ಅನ್ನಪೂರ್ಣ ಆಶ್ರಮದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಳು. ಅಷ್ಟೇ ಅಲ್ಲದೆ ನಾಲ್ವರು ಮಹಿಳೆಯರು ಭೀಮಬೋಯಿಯ ಆಧ್ಯಾತ್ಮ ಸಂಗಾತಿಗಳಾಗಿದ್ದರು.

ಭೀಮಬೋಯಿಯು ಜನಪದ ನುಡಿಗಟ್ಟುಗಳನ್ನು ಬಳಸಿ ಕವಿತೆಯನ್ನು ರಚಿಸುತ್ತಿದ್ದ. ಈತ ಗ್ರಾಮ ಕವಿಯೆಂದೇ ಪ್ರಸಿದ್ಧನಾಗಿದ್ದ. ಈತನ ಹಾಡುಗಳಿಗೆ ಅನೇಕರು ಕಿವಿಗೊಡುತ್ತಿದ್ದರು ಅವನ ಭಜನೆಗಳು ಜನಪ್ರಿಯವಾಗಿದ್ದವು. ಇಂದಿಗೂ ದೂರ ದೂರದ ಹಳ್ಳಿಗಳಲ್ಲಿ ಬುಡಕಟ್ಟು ಜನಾಂಗಗಳಲ್ಲಿ ತಂಬೂರಿ ಸ್ವರದೊಡನೆ ಭೀಮ ಬೋಯಿಯ ಭಜನೆಯ ಜಣಾಣಗಳು ಕೇಳಿಬರುತ್ತವೆ. ಇವನ ಧರ್ಮ ಪ್ರಚಾರ ಕೈಂಕರ್ಯಕ್ಕೆ ಇವನೊಂದಿಗೆ ಅನೇಕ ಜನ ಸೇರುತ್ತಾರೆ. ಅವರುಗಳು ಸನ್ಯಾಸಿಗಳಂತೆಯೇ ವಿರಕ್ತ ಜೀವನ ನಡೆಸುತ್ತಾರೆ. ಎಲ್ಲವನ್ನೂ ತೊರೆದವರಾಗಿತ್ತಾರೆ. ಗುರುವಿನ ತಂತ್ರಗಳಿಗೆ ಬದ್ಧರಾಗಿರುತ್ತಾರೆ. ಶುದ್ಧ ಸರಳ ಜೀವನಕ್ಕೆ ಅಂಟಿ ಕೊಂಡಿರುತ್ತಾರೆ. ಒಪ್ಪೊತ್ತು ಭಿಕ್ಷಾನ್ನದ ಊಟ, ಹಳ್ಳಿಯಿಂದ ಹಳ್ಳಿಗೆ ದಿನಪೂರ್ತಿ ಅಲೆದಾಟ ಇವೇ ಅವರ ದಿನಚರಿ, ಬಯಲಿನಲ್ಲಿ ಉಣ್ಣುವುದು, ಬಯಲಿನಲ್ಲೇ ಧ್ಯಾನಿಸುವುದು ಅವರ ಜೀವನ ಕ್ರಮ. ಸಿಕ್ಕಮನೆಯಲ್ಲಿ ಭಿಕ್ಷೆ ಬೇಡಿ ಪಡೆದ ಸರಳ ಆಹಾರದಲ್ಲಿ ತೃಪ್ತಿಗೊಂಡು ಜಂಗಮ ಜೀವನ ನಡೆಸುತ್ತಾರೆ ಮನುಷ್ಯ ಜಾತಿ-ಒಂದೇ ಕುಲ ಎಂಬುದು ಮಹಿಮಾ ಧರ್ಮದ ಮೂಲ ತತ್ತ್ವ.

ಭೀಮಬೋಯಿ ಮನುಷ್ಯನ ಪ್ರೀತಿಯ ಕೊರತೆ, ಮತ್ತು ನೈತಿಕ ಅಧಃ ಪತನವೇ ಕಲಿಯುಗದ ಮುಖ್ಯ ಲಕ್ಷಣವೆಂದು ಹೇಳುತ್ತಾ ಆತ್ಮವಿನಾಶಕ್ಕೆ ಕೊಂಡೊಯ್ಯುವ ಈ ಜಗತ್ತಿನಿಂದ ಮುಕ್ತಿ ಹೊಂದಬೇಕಾದರೆ ಮಹಿಮಾ ಧರ್ಮದ ಆಶ್ರಯವೊಂದೇ ದಾರಿ ಎಂದು ಸಂದೇಶ ನೀಡುತ್ತಾನೆ. ಭೀಮಾ ಬೋಯಿ ಮತ್ತೆ ಹೇಳುತ್ತಾನೆ.-ಕಲ್ಲನ್ನು ದೇವರೆಂದು ಪೂಜಿಸುವ ಈ ಜನರದು ಎಂತಹ ಅಪ್ಪಟ ಮೌಢ್ಯ. ಭಕ್ಷ್ಯಗಳನ್ನು ನೈವೇದ್ಯ ಮಾಡಿ ರಕ್ಷಿಸು ಎಂದು ಕೇಳಿಕೊಳ್ಳುತ್ತಾರೆ. ಅವು ಕೇವಲ ಚಿತ್ರಗಳು ಎಂಬ ಸರಳ ಸತ್ಯವೂ ಇವರಿಗೆ ಗೊತ್ತಿಲ್ಲ. ಸೃಷ್ಟಿಕರ್ತನನ್ನು ಆರಾಧಿಸುವುದನ್ನು ಬಿಟ್ಟು ಲೋಹಗಳ, ಮರದ ವಿಗ್ರಹಗಳತ್ತ ಕಾಪಾಡಿ ಕಾಪಾಡಿ ಎಂದು ಓಡುವುರೆಲ್ಲಾ ಜೀವಿಸುತ್ತಿರುವ ಮನುಷ್ಯರು ನಿರ್ಜೀವ ಮೂರ್ತಿಗಳತ್ತ ದೈನ್ಯದಿಂದ ನೋಡುವುದು ಎಷ್ಟು ಆಲೋಚನಾ ರಹಿತ ವಿಚಾರ. ಮನುಕುಲವನ್ನು ಶೂನ್ಯದಿಂದ ಸೃಷ್ಟಿಸಿದ ಆ ಬ್ರಹ್ಮನನ್ನು ಮರೆವುದು ಎಂತಹ ಸೋಜಿಗ? ಎಂದು. ಇಂತಹ ವಿಚಾರಗಳನ್ನೇ ಭೀಮಬೋಯಿಯ ಬೋಲಿಗಳು ಪ್ರತಿಪಾದಿಸುತ್ತವೆ. ಭೀಮಬೋಯಿ ರಚಿಸಿದ ಕೃತಿಗಳ ಅಂದರೆ ಸ್ತುತಿ ಚಿಂತಾಮಣಿ, ಭಜನಮಾಲಾ ಬ್ರಹ್ಮ ನಿರೂಪಣ ಗೀತಾ, ಅಷ್ಟಕ ಬಹಾರೀ ಗೀತಾ, ಶ್ರುತಿ ನಿಷೇಧ ಗೀತಾ, ಚೌತೀಸ್ ಮಧುಚಕ್ರ, ಆದಿ ಅಂತ್ಯಗೀತೆ ಇತ್ಯಾದಿ ಗ್ರಂಥಗಳು ಒರಿಯಾ ಸಾಹಿತ್ಯದಲ್ಲಿ ಪ್ರಸಿದ್ಧವಾಗಿವೆ. ಈತನ ಬೋಲಿಗಳು ಅತ್ಯುತ್ತಮ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈತನನ್ನು ಕೆಲವರು ಏಸುಕ್ರಿಸ್ತನಿಗೆ ಹೋಲಿಸಿದರೆ ಕೆಲವರು ಕ್ರೈಸ್ತ ಪ್ರವಾದಿಗಳಿಗೆ ಹೋಲಿಸುತ್ತಾರೆ. ಈತನ ಎಲ್ಲ ಗ್ರಂಥಗಳಲ್ಲಿ ಆಧ್ಯಾತ್ಮದ ಸರಳ ತತ್ವಗಳ ನಿರೂಪಣೆ ಇದೆ. 'ಮಹಿಮಾ ಧರ್ಮ'ದಲ್ಲಿ ಜೀವನವನ್ನು ಸ್ತ್ರೀ ಎಂತಲೂ ಪರಮಾತ್ಮನನ್ನು ಪುರುಷ ಎಂತಲೂ ವಿವೇಚಿಸಲಾಗಿದೆ. ಇದು ಕರ್ನಾಟಕದ ಶರಣರ ಶರಣಸತಿ, ಲಿಂಗಪತಿ ಎಂಬ ಭಾವವನ್ನು ಹೋಲುವಂತಿದೆ. ಈತನ ಬೋಲಿಗಳು ಧಾರ್ಮಿಕ ಕಾವ್ಯದ ಅತ್ಯುತ್ತಮ ರಚನೆಗಳು.

ಕೊನೆಯದಾಗಿ ಭೀಮಬೋಯಿಯ ಒಂದು ಬೋಲಿ ಹೀಗಿದೆ; ಈ ಬದುಕಿನ ಯಾತ್ರೆಗಳು, ಜಂಜಾಟಗಳು ಎಲ್ಲೆ ಮೀರಿದವು. ಯಾರು ತಾನೆ ನೋಡಿ ಸಹಿಸಬಲ್ಲರು ಇದನ್ನು? ನನ್ನ ಆತ್ಮವನ್ನು ನರಕದಲ್ಲಿ ದಂಡಿಸಲಿ. ಆದರೆ ಈ ಲೋಕ ಬಿಡುಗಡೆ ಹೊಂದಲಿ ಎಂದು ಮನುಕುಲದ ಉದ್ಧಾರಕ್ಕಾಗಿ ದುಡಿದು ಮಡಿದ ಮಹಾನುಭಾವ ಭೀಮ ಬೋಯಿ.

❖

೯. ಸೂಫಿಪಂಥ (ಕ್ರಿ.ಶ.೮ನೇ ಶತಮಾನದಿಂದ ೧೫ನೇ ಶತಮಾನ)

ಇಸ್ಲಾಂ ಧರ್ಮದ ಅನುಭಾವಿಗಳ ಸಮೂಹವನ್ನು ಸೂಫಿಗಳೆಂದು ಕರೆಯುತ್ತಾರೆ. ಸೂಫಿಗಳು ಭಗವಂತನನ್ನು ಸತಿ ರೂಪದಲ್ಲಿ ಆರಾಧಿಸುತ್ತಾರೆ. ಭಗವಂತ ಪ್ರಿಯತಮೆಯಾಗಿ, ಭಕ್ತ ಪ್ರಿಯತಮನಾಗಿ ಭಾವಲೋಕದಲ್ಲಿ ವಿಹರಿಸುತ್ತಾರೆ. ಸೂಫಿ ಧರ್ಮ ಪ್ರೇಮ ಧರ್ಮ. ಈ ಪ್ರೇಮಗಂಗೆಯ ಗಂಗೋತ್ರಿ ಅರಬಸ್ತಾನದ ಮರುಭೂಮಿ ಸೂಫಿ ಧರ್ಮ ಇಸ್ಲಾಂ ಧರ್ಮದ ಅಂಗವಾಗಿದ್ದು ಅದರಷ್ಟೇ ಪ್ರಾಚೀನವೆಂದು ವಿದ್ವಾಂಸರ ಮತ. ಅರಬ ದೇಶದ ಮರುಭೂಮಿಯಲ್ಲಿ ಪ್ರೇಮದ ಗಂಗೆಯನ್ನು ಹರಿಸಿದ ಪ್ರೇಮಧರ್ಮ ಸೂಫಿ. 'ಚೆಲುವೇ ದೇವರು, ಒಲವೇ ಪೂಜೆ ಎಂಬುದನ್ನು ತಮ್ಮ ಜೀವನದಲ್ಲಿ ಹಾಡಿದ ಈ ಸೂಫಿ ಸಂತರು ವಿಶ್ವಪ್ರೇಮಿಗಳು. ಮಾನವ ಪ್ರೇಮ ದೈವೀ ಪ್ರೇಮದ ಸೋಪಾನವೆಂದು ಸಾರಿದ ರಸಋಷಿಗಳು.

ದೇವರನ್ನು ಅರಿಯಲು ಹಿಂದೂ ಧರ್ಮದಲ್ಲಿ ವೇದಾಂತಕ್ಕೆ ಯಾವ ಸ್ಥಾನವಿದೆಯೋ, ಇಸ್ಮಾಂ ಧರ್ಮದ ಆಧ್ಯಾತ್ಮಿಕ ತತ್ತ್ವವೇ 'ತಸವ್ವಪ್' ಅಥವಾ 'ಸೂಫಿ ತತ್ತ್ವ' ಹಜರತ್ ಮುಹಮ್ಮದ್ ಪೈಗಂಬರರು ಜೀವಿಸಿರುವಾಗ ಅವರ ಆದೇಶಗಳಿಗನುಗುಣವಾಗಿ ಸುಮಾರು ೭೫ ಮಂದಿ ನಿಷ್ಠಾವಂತ ಮುಸ್ಲಿಮರು ಒಂದೆಡೆ ಸೇರಿದರು. ಇವರು ದೈವೀ ಪ್ರೇಮವನ್ನು ಶ್ರದ್ಧಾ ಭಕ್ತಿಯಿಂದ ಸಾಧಿಸುತ್ತಾ ತಾಪಸ ಜೀವನವನ್ನು ನಡೆಸಲು ಸಂಕಲ್ಪ ಮಾಡಿದರು. ಇವರು ಬಡವರಾಗಿದ್ದರು. ಮನೆ-ಮಠಗಳಲ್ಲಿ ನೆಲೆಸದೆ ಪೈಗಂಬರ್ ಅವರು ಕಟ್ಟಿದ ಮಸೀದಿಯ ಒಂದು ಕಟ್ಟೆಯಲ್ಲಿಯೇ ವಾಸ ಮಾಡಿಕೊಂಡಿದ್ದರು. ಜನರು ಅವರನ್ನು 'ಅಸ್‌ಹಾಬ್ ಉಸುಫ್ಫ್' ಎಂದು ಕರೆದರು. ಸರಳವಾಗಿ ಹೇಳಬೇಕೆಂದರೆ ಯಾರ ಮನಸ್ಸು ಭಗವಂತನ ವಿಷಯದಲ್ಲಿ 'ಸಾಫ್' ಎಂದರೆ ಸ್ವಚ್ಛ, ತಿಳಿ, ನಿರ್ಮಲವಾಗಿರುತ್ತದೆಯೋ ಅವನು 'ಸೂಫಿ'. ಸೂಫಿ ಎನ್ನುವ ಶಬ್ದಕ್ಕೆ ಹಲವು ಅರ್ಥಗಳಿದ್ದರೂ ಭಗವಂತನಲ್ಲಿ ಪರಿಶುದ್ಧ ಮನಸ್ಸುಳ್ಳ ಭಕ್ತನನ್ನು ಸೂಫಿ ಎಂದು ಕರೆಯುತ್ತಾರೆ.

ಹಜರತ್ ಮಹಮ್ಮದ್ ಪೈಗಂಬರರ ನಂತರವೂ ಸುಮಾರು ಒಂದು ಕಾಲು ಶತಮಾನದವರೆಗೆ ಮುಸ್ಲಿಮರಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸೂಫಿಗಳಿದ್ದರೆಂದು ಹೇಳುತ್ತಾರೆ.

ಬರ ಬರುತ್ತಾ ಧಾರ್ಮಿಕ ಜೀವನದಲ್ಲಿ ಭಕ್ತಿ-ಶ್ರದ್ಧೆಗಳು ಕಡಿಮೆಯಾಗಿ ಲೌಕಿಕ ಜೀವನದಲ್ಲಿ ಆಸಕ್ತಿ ಮೂಡಿ ಸೂಫಿ ಮತ ಮಂದಗತಿಯಲ್ಲಿ ಸಾಗಿತು. ಅನಂತರ ಸುಮಾರು ಕ್ರಿ.ಶ. ೮ನೇ ಶತಮಾನದಲ್ಲಿ ಮತ್ತೆ ಇದು ಪುನರುಜ್ಜೀವನ ಪಡೆಯಿತು ಅರೇಬಿಯಾ ಇರಾನ್. ಇರಾಕ್, ಸಿರಿಯಾ ಈಜಿಪ್ಟ್, ಬಲ್ಕೆ, ತುರ್ಕಿಸ್ಥಾನ, ಹಾಗೂ ಭಾರತದಲ್ಲಿ ಸೂಫಿಗಳ ಸಂಖ್ಯೆ ವಿಪುಲವಾಗಿ ಬೆಳೆಯಿತು. ಸೂಫಿಗಳು ದೈವಭಕ್ತರಾಗಿದ್ದರು. ಸರಳ ಜೀವನ ನಡೆಸುತ್ತಿದ್ದರು. ಅನುಭಾವಿಗಳಾಗಿದ್ದರು. ಆ ಕಾಲದಲ್ಲಿದ್ದ ಖಲೀಫರ ಹಾಗೂ ಶ್ರೀಮಂತರ ಭೋಗ ಜೀವನ, ಅಡಂಬರ ಅಟ್ಟಹಾಸ ಇವರಿಗೆ ಸರಿ ಕಾಣುತ್ತಿರಲಿಲ್ಲ. ಸಮಾಜದಲ್ಲಿ ವಿರೋಧಗಳನ್ನು ಎದುರಿಸುತ್ತ ಇಂತಹ ವ್ಯಕ್ತಿಗಳನ್ನು ತಿದ್ದಲು ಸಾಕಷ್ಟು ಪರಿಶ್ರಮ ವಹಿಸುತ್ತಿದ್ದರು. ಆ ಕಾಲದ ಸೂಫಿಗಳಲ್ಲಿ (೮ನೇ ಶತಮಾನ) ಪ್ರಮುಖರೆಂದರೆ ಜಾನ್ ನೂನ್ ಮಿಶ್ರ, ಹಸನ್ ಟೆಸ್ರಿ, ರಾಬಿಯ ಬಿಸ್ರಿ, ಮಲಿಕ್ ದೀನಾರ್ ಇಮಾಮ್ ಎ ಅಮಿಾ ಅನಿಫ್. ಇವರ ತರುವಾಯ ಬಂದ ಸೂಫಿಗಳು ೧೨ರಿಂದ ೧೪ನೇ ಶತಮಾನಕ್ಕೆ ಸೇರಿದವರು. ಇವರು ಜೀವ-ಜಗತ್ತು, ಈಶ್ವರ, ವಿಧಿ, ಕರ್ಮ, ಆತ್ಮ ಸ್ವರ್ಗ ಇವುಗಳ ರಹಸ್ಯವನ್ನು ಕಂಡು ಹಿಡಿಯಲು ಪ್ರಯತ್ನಿಸಿದರು. ಈ ಕಾಲದ ಸೂಫಿಗಳನ್ನು 'ದಾರ್ಶನಿಕ ಸೂಫಿ'ಗಳೆಂದು ಕರೆಯಬಹುದು. ಇವರುಗಳಲ್ಲಿ ಪ್ರಸಿದ್ಧರಾದವರು ಮಹಮದ್ ಇಟ್ನಿ ಅರಬಿ, ಇಮಾವರ್ ಗಜ್ಜಾಲಿ, ಫರಿದುದ್ದೀನ್ ಅತ್ತಾರ್. ಜಲಾಲುದ್ದೀನ್ ರೂಮಿ, ಜಾಮಿ, ನಿಜಾಮಿ, ಹಸನ್ ಬಿನ್ ಫಜಿಲ್, ಅಬ್ದುಲ್ ಖಾದಲ್, ಉಮರ್ ಖಯ್ಯಾಂ ಇತ್ಯಾದಿ. ಇವರನ್ನು ದ್ವಿತೀಯ ಘಟ್ಟದ ಸೂಫಿಗಳೆಂದು ಗುರುತಿಸುತ್ತಾರೆ. ಸೂಫಿಗಳ ಸಂಖ್ಯೆ ಅಧಿಕವಾಗಿದೆ. ಇವರು ಜಗತ್ತಿನಾದ್ಯಂತ ದೇಶ ಕಾಲಗಳನ್ನು ಮೀರಿ ಮಾನವ ಜನಾಂಗಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಅವರ ವಿಚಾರ ಎಲ್ಲ ಕಾಲ, ದೇಶ ಜನಾಂಗಕ್ಕೂ ಪ್ರಸ್ತುತವೆನಿಸುತ್ತದೆ.

ಸೂಫಿ ತತ್ತ್ವ ಅತ್ಯಂತ ಸರಳವಾದುದು. ಒಬ್ಬ ಸೂಫಿ ದೈವಪ್ರೇಮದ ಹಂತವನ್ನು ತಲುಪಲು (ಅಂದರೆ 'ಅನಲ್‌ಹಕ್' ಸ್ಥಿತಿ-ನಾನೇ ದೇವರು) ಆರು ಅವಸ್ಥೆಗಳನ್ನು ತಿಳಿಸುತ್ತಾರೆ. ಸಾಧಕನು ಈ ಆರೂ ಅವಸ್ಥೆಗಳನ್ನು ದಾಟಿದಾಗ 'ಅನ್‌ಲೆಹಕ್' ಸ್ಥಿತಿ ಹೊಂದುವನೆಂದು ತಿಳಿಸುತ್ತಾರೆ.

ಅವುಗಳು: ೧. ತಅತ್-ಎಂದರೆ ಅಲ್ಲಾನಿಗೆ ಹಾಗೂ ಪೈಗಂಬರರಿಗೆ ವಿಧೇಯನಾಗಿರುವುದು.

೨. ಷರಿಯತ್-ಎಂದರೆ ಇಸ್ಲಾಮಿ ಕಾನೂನುಗಳ ಪಾಲನೆ

೩. ತರೀಕತ್-ಅಂದರೆ ಇಂದ್ರಿಯ ನಿಗ್ರಹ, ಆತ್ಮಶುದ್ಧಿ

೪. ಮಾರೀಫತ್-ಅಂದರೆ ಆಧ್ಯಾತ್ಮಿಕ ಜ್ಞಾನ

೫. ಹಕೀಕತ್-ಪರಮಾನುಭೂತಿ

೬. ಅಕೀದತ್-ಭಗವಂತನಿಗೆ ಪ್ರಾಣಾರ್ಪಣೆ

ಈ ಹಂತಗಳನ್ನು ಏರಿ ಸಾಧಕನು ನಾನೇ ದೇವರು ಎನ್ನುವ 'ಅನಲ್‌ಹಕ್' ಸ್ಥಿತಿಗೆ ತಲಪುತ್ತಾನೆ. ಅದು ಅನುಭಾವದ ತುತ್ತತುದಿ ಎನ್ನಬಹುದು. ಸೂಫಿಗಳು ಪ್ರಿಯತಮೆಯನ್ನು 'ಸಾಕಿ' ಎಂದೂ ಭಗವಂತನಲ್ಲಿರುವ ಪ್ರೇಮವನ್ನು 'ಇಷ್ಕೋಹಕೀರ್' ಎಂದು ಕರೆಯುತ್ತಾರೆ. ಪ್ರಿಯತಮೆಯ ವಿರಹದಲ್ಲಿ ಪ್ರತಿಯೊಬ್ಬ ಸೂಫಿಯು ವಿರಹ ತಾಪವನ್ನು ಅನುಭವಿಸುತ್ತಾನೆ. ಸೂಫಿಗಳಲ್ಲಿ ಅರಬ್, ಇರಾನ್, ಸಿರಿಯಾ ಮತ್ತು ಈಜಿಪ್ಟ್ ದೇಶದವರೇ ಅಧಿಕ ಸಂಖ್ಯೆಯಲ್ಲಿದ್ದರು. ಸೂಫಿಗಳಲ್ಲಿ ಸ್ತ್ರೀ-ಪುರುಷ ಇಬ್ಬರೂ ಇದ್ದರು. ಸೂಫಿಗಳಲ್ಲಿ ಹೆಣ್ಣಾಗಲಿ, ಗಂಡಾಗಲಿ, ಸಚ್ಚಾರಿತ್ರ್ಯ, ತ್ಯಾಗ ಮನೋಭಾವನೆ, ಇಂದ್ರಿಯ ನಿಗ್ರಹವುಳ್ಳ ಮಹಾತ್ಮ ಅಥವಾ ಮಹಾತ್ಮರು ಸೂಫಿ ಧರ್ಮದಲ್ಲಿ ಆದರ್ಶ ವ್ಯಕ್ತಿಗಳಾಗುತ್ತಾರೆ. ಹಜರತ್ ಮಹಮ್ಮದ್‌ರ ಜ್ಞಾನದಲ್ಲಿ ಎರಡು ವಿಧ ಎಂದು ಹೇಳುತ್ತಾರೆ. ೧. ಪುಸ್ತಕ ಜ್ಞಾನ ಹಾಗೂ ೨. ಆತ್ಮಜ್ಞಾನ. ಆತ್ಮಜ್ಞಾನವನ್ನು ಅವಲಂಬಿಸಿದವರು ಸೂಫಿಗಳು.

ಸೂಫಿ ಸಂತರಲ್ಲಿ ಗೃಹಸ್ಥರೇ ಹೆಚ್ಚಾಗಿದ್ದರು. ಸನ್ಯಾಸ ಜೀವನ ಪ್ರಕೃತಿಗೆ ವಿರುದ್ಧ ಎನ್ನುವುದು ಅವರ ನಂಬಿಕೆ. ಹೆಂಡತಿ, ಮಕ್ಕಳು, ಬಂಧು ಬಳಗ, ಆಹಾರ ಇವು ಬದುಕಿನ ಅವಿಭಾಜ್ಯ ಅಂಗಗಳು. ಇವುಗಳನ್ನು ನಿರಾಕರಿಸುವಂತಿಲ್ಲ. ಆದರೆ ಅತಿಯಾದ ವಿಲಾಸ ಜೀವನ ಖಂಡನೀಯವಾಗಿತ್ತು. ಸೂಫಿಗಳಲ್ಲಿ ಗೃಹಸ್ಥರಲ್ಲದವರ ಸಂಖ್ಯೆ ತೀರಾ ವಿರಳವೆಂದೇ ಹೇಳಬೇಕು. ಆದರೆ ಬಹುಪಾಲು ಸೂಫಿಗಳು ಗೃಹಸ್ಥರಾಗಿ, ಸರಳತೆ, ಪ್ರಾಮಾಣಿಕತೆ, ದೈವೀಶ್ರದ್ಧೆ ಹಾಗೂ ನೈಜ ನುಡಿಗಳಿಂದ ಸಂತರಾಗೇ ಬಾಳಿದರು. ಸಂಸಾರ ಅವರ ಆಧ್ಯಾತ್ಮ ಜೀವನಕ್ಕೆ ಎಂದೂ ಅಡ್ಡಿಯಾಗಿರಲಿಲ್ಲ. ಸೂಫಿಗಳು ದೈವೀ ಪ್ರೇಮದಿಂದ ಜಗತ್ತನ್ನು ದೈವ ರೂಪದಲ್ಲಿಯೇ ಕಾಣುತ್ತಿದ್ದರು. ಅವರಿಗೆ ದೇಶ, ಭಾಷೆ, ಜಾತಿ, ಮತ, ಮೇಲು, ಕೀಳುಗಳೆಂಬ ಕಲ್ಪನೆಗಳೇ ಬರುತ್ತಿರಲಿಲ್ಲ. ಅವರು ವಿಶ್ವಮಾನವರು. ಸೂಫಿಗಳಲ್ಲಿ ಮೊದ ಮೊದಲು ಸನ್ಯಾಸ ಧರ್ಮಕ್ಕೆ ಒಲಿದವರೂ ಇದ್ದರು. ಅವರು ಅವಿವಾಹಿತರಾಗಿ ಇದ್ದರು. ಮುಂದೆ ಆ ಪರಂಪರೆ ಮುಂದು ವರಿಯಲಿಲ್ಲ.

ಭಾರತ ದೇಶಕ್ಕೂ ಈ ಸೂಫಿಗಳಿಗೂ ನಿಕಟ ಸಂಬಂಧವಿದೆ. ಸೂಫಿಗಳ ತತ್ವ ಹಿಂದೂಸ್ತಾನದ ಆಧ್ಯಾತ್ಮಿಕ ಇತಿಹಾಸದಲ್ಲಿ ಮುಖ್ಯ ಪಾತ್ರ ವಹಿಸಿರುವುದನ್ನು ಇತಿಹಾಸ ಹೇಳುತ್ತದೆ. ನಮ್ಮ ದೇಶಕ್ಕೆ ಹಜರತ್ ಮೊಯಿನುದ್ದೀನ್ ಚೆಸ್ತಿ ಅವರು ಮೊಟ್ಟ ಮೊದಲಿಗೆ ಅರಬ್ ದೇಶದಿಂದ ಬಂದ ಸೂಫಿ. ಷೇಕ್-ಕುತ್ಬುದೀನ್, ಭಕ್ತಿಯಾರ್

ಖಾಕಿ, ಷೇಕ್ ಬಾಬಾ, ಫರೀದುದ್ದೀನ್, ಖಾಜಾ ನಿಜಾಮುದ್ದೀನ್, ಅಂತಲಿಯಾ ಮುಂತಾದವರೆಲ್ಲ ಭಾರತಕ್ಕೆ ಬಂದ ಸೂಫಿಗಳು. ಹಿಂದೂಸ್ತಾನದಲ್ಲೂ ಈ ಸೂಫಿ ಮತದ ಅನೇಕ ಶಾಖೆಗಳು ಸ್ಥಾಪನೆಯಾದವು. (ಖಾನ್‌ಕಾ:) ಅವುಗಳನ್ನು ಖಾನ್‌ಕಾ: ಅಥವಾ ಮಠಗಳೆಂದೂ ಕರೆಯುತ್ತಾರೆ.

ಮೊಗಲ್ ದೊರೆಗಳಲ್ಲಿ ಷಹಜಹಾನ್ ಚಕ್ರವರ್ತಿಯ ಪುತ್ರ ದಾರಾಷುಕೋ (೧೬ನೇ ಶತಮಾನ) ಸೂಫಿ ತತ್ವಗಳಲ್ಲಿ ಅತ್ಯಂತ ನಿಷ್ಠಾವಂತನಾಗಿದ್ದ. ಈತ ಸೂಫಿ ತತ್ವ ಮತ್ತು ಹಿಂದೂ ವೇದಾಂತವನ್ನು ಅಧ್ಯಯನ ಮಾಡಿದ್ದ. ರಾಮಾಯಣ, ಮಹಾಭಾರತ, ಭಗವದ್ಗೀತೆ, ಉಪನಿಷತ್ತುಗಳನ್ನು ಉರ್ದು ಭಾಷೆಗೆ ಅನುವಾದ ಮಾಡಿಸಿದ. 'ಮಜಮ್ ಉಲ್ ಬಹರೈನ್' ಅಂದರೆ 'ಎರಡು ಸಾಗರಗಳ ಸಂಗಮ' ಎನ್ನುವ ತನ್ನ ಗ್ರಂಥದಲ್ಲಿ ಸೂಫಿ ಸಿದ್ಧಾಂತ ಹಾಗೂ ವೇದಾಂತಗಳ ಮೂಲ ತತ್ವಗಳನ್ನು ಪ್ರತಿಪಾದಿಸಿದ್ದಾನೆ. ಈತನು ಹಾಕಿಕೊಟ್ಟ ಮಾರ್ಗದಲ್ಲಿಯೇ ಹಿಂದೂ ಸನ್ಯಾಸಿಗಳು ಹಾಗೂ ಸೂಫಿಗಳು ಮಾನವ ಧರ್ಮದ ಬಗ್ಗೆ ಚರ್ಚೆ ನಡೆಸಿದರು. ದಿವ್ಯ ಗಾನಗಳನ್ನು ಹಾಡಿದರು. ಹಿಂದೂ ಧರ್ಮದ ಭಕ್ತಿಪಂಥಗಳ ಮೇಲೆ ಸೂಫಿ ಪಂಥದ ಗಾಢ ಪ್ರಭಾವವನ್ನು ಕಾಣಬಹುದು.

ದಯಾನಂದ ಸರಸ್ವತೀ, ಮೌಲಾನಾ ಖಾಸೀಂ ನಾನ್ವಾತಿ, ಗುರುನಾನಕ್, ಕಬೀರ, ಅಜ್ಮೀರಿನ ಖಾಜಾ ನಿಜಾಮುದ್ದೀನ್, ಗುಲ್ಬರ್ಗದ ಖಾಜಾ ಬಂದೇನವಾಜ್, ಚಿಕ್ಕಮಗಳೂರು ಜಿಲ್ಲೆಯ ಬಾಬಾಬುಡನ್ ಇಂತಹ ಸಾಧು ಸತ್ಪುರುಷರು ಸೂಫಿ ತತ್ವದ ಪ್ರಭಾವದಿಂದ ಹಿಂದೂ-ಮುಸ್ಲಿಮರ ಐಕ್ಯತೆಗಾಗಿ, ಜನಜೀವನದಲ್ಲಿ ಶಾಂತಿ ಸ್ಥಾಪನೆಗಾಗಿ ಅಹರ್ನಿಶಿ ದುಡಿದು ಅಮರರಾದರು. ಅವರ ಪವಿತ್ರ ಜೀವನಕ್ಕೆ ಎಲ್ಲರ ಹೃದಯ ಮಣಿದವು. ಸೂಫಿಗಳ ಸಮಾಧಿ-ದರ್ಗಾಗಳು ದೇಶದ ನಾನಾ ಭಾಗಗಳಲ್ಲಿ ಇನ್ನೂ ಇವೆ. ಜನರು ಆ ಸಮಾಧಿಗಳಿಗೆ ಹೋಗಿ ತಮ್ಮ ಕೃತಜ್ಞತೆಗಳನ್ನು ಅರ್ಪಿಸುವುದನ್ನು ಈಗಲೂ ನೋಡಬಹುದು.

ಜಗತ್ತಿನಲ್ಲಿನ ಎಲ್ಲ ಸಂತ ಮಹಾಂತರಲ್ಲಿ ಒಬ್ಬ ಸೂಫಿ ಇರುತ್ತಾನೆ. ಯಾರು ಪ್ರೇಮ ಧರ್ಮವನ್ನು ಆಚರಿಸುತ್ತಾರೋ ಅವರೆಲ್ಲ ಸೂಫಿಗಳೇ. ಮಹಾತ್ಮ ಗಾಂಧೀಜಿ ತಮಗೆ ಪುನರ್ಜನ್ಮವಿರುವುದಾದರೆ ತಾವೊಬ್ಬ ಸೂಫೀ ಸಂತನಾಗಿ ಜನಿಸಬೇಕೆಂದು ಬಯಸಿದ್ದಾರೆ. ಅನೇಕತೆಯಿಂದ ಏಕತೆಯತ್ತ ಸಾಗಿ ದೈವ ಸಾಕ್ಷಾತ್ಕಾರ ಪಡೆಯುವುದೇ ಸೂಫಿ ಧರ್ಮದ ಮರ್ಮವಾಗಿದೆ. ಸಂತರು ಹೇಳುತ್ತಾರೆ; 'ಸಂತರ ನಡುವೆ ಕಳೆಯುವ ಒಂದು ಕ್ಷಣವೇ ಪ್ರಾರ್ಥನೆ ಮತ್ತು ಭಕ್ತಿಗಳಲ್ಲಿ ಕಳೆದ ನೂರು ವರ್ಷಗಳಿಗಿಂತ ಶ್ರೇಷ್ಠವೆಂದು ಸೂಫಿಗಳ ಸತ್ಸಂಗದ ಮಹತ್ವವನ್ನು ವರ್ಣಿಸುತ್ತಾರೆ. ಮತ್ತೆ ಹೇಳುತ್ತಾರೆ; 'ನೀವು ಸೂಫಿ ಸಂತರಲ್ಲಿಗೆ ಹೋಗಿ ಕೆಲವು ಕಾಲ ಅವರೆದುರಿನಲ್ಲಿ ನಿಲ್ಲಿ. ನೇರವಾಗಿ

ಏನೂ ಸಂಭವಿಸಿದಂತೆ ಕಾಣದಿದ್ದರೂ ಅಲ್ಲಿಂದ ಹಿಂತಿರುಗುವಾಗ ನಿಮ್ಮಲ್ಲಿ ಏನೋ ಪರಿವರ್ತನೆಯಾಗಿರುತ್ತದೆ'. ಎಂದು ಅವರ ದರ್ಶನದ ಮಹತ್ವವನ್ನು ವರ್ಣಿಸುತ್ತಾರೆ.

ಆಧ್ಯಾತ್ಮ ಜೀವನ ನಡೆಸುವ ಯಾವುದೇ ಸಂಪ್ರದಾಯದ ಸಂತರಾಗಲಿ, ಸೂಫಿಗಳಾಗಲೀ ಒಂದೇ. ಒಬ್ಬ ಹಿಂದು ಮುಸ್ಲಿಂ ಸೂಫಿಯ ಬಳಿಗೆ ಹೋಗಬಹುದೇ? ಅಥವಾ ಒಬ್ಬ ಸೂಫಿ ಹಿಂದೂ ಸಂತನಲ್ಲಿಗೆ ಹೋಗಬಹುದೇ? ಎಂದು ಪ್ರಶ್ನಿಸಿದಾಗ ಬೆಳಕನ್ನು ಹುಡುಕುವ ಪತಂಗ ಅದನ್ನು ಕಂಡಾಗ ತಾನು ಬೆಳಕು ಕಂಡ ಮನೆಯೊಡೆಯನ ಜಾತಿಯನ್ನು ಧರ್ಮವನ್ನು ಸಂಪ್ರದಾಯವನ್ನು ಎಂದೂ ಪ್ರಶ್ನಿಸುವುದಿಲ್ಲ. ಎನ್ನುತ್ತಾರೆ. ಸಂತ-ಸೂಫಿಗಳಲ್ಲಿ ಯಾವ ಭೇದವನ್ನೂ ಮಾಡಬಾರದು. ಅವರೆಲ್ಲರ ಸಂದೇಶ ಒಂದೇ ಅವರೇ ಜಗತ್ತಿನ ಬೆಳಕು.

ಸೂಫಿಗಳ ಸಂದೇಶ:

ರೂಮಿಯ ಮಸ್ನವಿಯಲ್ಲಿ ಒಂದು ಕಥೆ ಹೀಗಿದೆ. ನಾಲ್ವರು ಸ್ನೇಹಿತರು ಅವರಲ್ಲಿ ಒಬ್ಬ ಪರ್ಶಿಯಾದವ, ಇನ್ನೊಬ್ಬ ಅರಬ ದೇಶದವ, ಮತ್ತೊಬ್ಬ ತುರ್ಕಿ ಹಾಗೂ ಇನ್ನೊಬ್ಬ ಗ್ರೀಕ್ ದೇಶದವನು. ಇವರೆಲ್ಲ ಒಟ್ಟಾಗಿ ಪ್ರವಾಸ ಮಾಡುವ ಕಾಲದಲ್ಲಿ ಒಂದು ನಾಣ್ಯವನ್ನು ದಾರಿಯಲ್ಲಿ ಕಂಡರು. ಅದರಿಂದ ತಾವು ಕೊಂಡುಕೊಳ್ಳ ಬೇಕಾದ ಹಣ್ಣಿನ ಬಗ್ಗೆ ಜಗಳವಾಡತೊಡಗಿದರು. ಪರ್ಶಿಯಾದವನು 'ಅಂಗೂರ್' ಎಂದ. ಅರಲ ದೇಶದವ 'ಇನಅನ್ನ' ಅಂದ. ತುರ್ಕಿಯವ 'ಉಜುಮ್' ಎಂದ. ಗ್ರೀಸ್ ದೇಶದವ 'ಅಸ್ತಫೀಲ್' ಎಂದ. ಪ್ರತಿಯೊಬ್ಬರು ಆ ಹಣ್ಣಿನ ರುಚಿ ನೋಡಬೇಕೆಂದು ಅಪೇಕ್ಷಿಸುತ್ತಿದ್ದರು. ಒಬ್ಬರ ಭಾಷೆ ಇನ್ನೊಬ್ಬರಿಗೆ ತಿಳಿಯುತ್ತಿರಲಿಲ್ಲ. ಅದೇ ದಾರಿಯಲ್ಲಿ ಹೋಗುತ್ತಿದ್ದ ಒಬ್ಬ ಬುದ್ಧಿವಂತ ಇವರ ಜಗಳದ ಕಾರಣ ತಿಳಿದು ಅವರಿಂದ ನಾಣ್ಯ ಕೇಳಿ ಪಡೆದು ತಾನೇ ಹೋಗಿ ದ್ರಾಕ್ಷಿ ಹಣ್ಣನ್ನು ಕೊಂಡು ತಂದ. ಇವರೆಲ್ಲಾ ತಿನ್ನಬೇಕೆಂದು ಬಯಸಿದ್ದು ಅದೇ ಆಗಿತ್ತು. ಹಣ್ಣಿಗೆ ಅವರು ಬಳಸಿದ ಭಾಷೆ ಮಾತ್ರ ಬೇರೆ ಬೇರೆ ಆಗಿತ್ತು. ಇಲ್ಲಿ ರೂಮಿ ಹೇಳುವ ವಿಷಯ ಏನೆಂದರೆ ಸೂಫಿಗಳ ದೇಶ ಭಾಷೆ ಬೇರೆಯಾದರೂ ಅವರೆಲ್ಲರ ಅನುಭಾವದ ನೆಲೆ ಒಂದೇ ಆಗಿರುತ್ತದೆ ಎಂದು.

ಸಂತ ರಮಣಿ ರಾಬಿಯಾ ಹೇಳುತ್ತಾಳೆ. 'ನನ್ನ ಹೃದಯಲ್ಲಿ ಎಷ್ಟೊಂದು ಪ್ರೇಮ ತುಂಬಿದೆ ಎಂದರೆ ಅದರಲ್ಲಿ ಇತರರನ್ನು ದ್ವೇಷಿಸಲು ಎಡೆಯೇ ಇಲ್ಲ' ಎಂದು. ಮತ್ತೊಬ್ಬ ಸೂಫಿ ಹೇಳುತ್ತಾನೆ; ಸ್ವಾರ್ಥದ ಕಾಮನೆಗಳಿಂದ ಮಾಡುವ ಭಕ್ತಿಯು ಹಣದ ಪ್ರತಿಫಲದ ಅಪೇಕ್ಷೆಯಿಂದ ದುಡಿದ ಕೂಲಿಯ ಕೆಲಸದಂತೆ ಎಂದು. ಜಾಮಿ ಹೇಳುತ್ತಾನೆ; 'ಅಹಂನಿಂದ ರಕ್ಷಿಸುವ ವಸ್ತು ಎಂದರೆ ಪ್ರೇಮ. ಪ್ರಾಪಂಚಿಕ ಪ್ರೇಮದಿಂದಲೂ ನೀನು ಮುಖ ತಿರುವಬೇಡ. ಏಕೆಂದರೆ ಪರಮ ಸತ್ಯವನ್ನು ಮುಟ್ಟಲು

ಅದು ನಿನಗೆ ನೆರವಾದೀತು' ಎಂದು.

ಹಬೀಬ್ ಅಜೆಮಿಯ ವಾಣಿ ಹೀಗಿದೆ; 'ಪ್ರೇಮ ಯೋಗಿಗಳಾದ ಸೂಫಿಗಳಿಗೆ ಯಾವುದು ತ್ಯಾಜ್ಯವಲ್ಲ. ಎಲ್ಲವೂ ಪೂಜ್ಯ. ಅವರ ವ್ಯಾಪಾರ ತ್ಯಾಗದಿಂದ ಹೆಚ್ಚುತ್ತದೆ. ಸಂಗ್ರಹದಿಂದ ಕುಗ್ಗುತ್ತದೆ. ನಾನು ನನ್ನ ಆತ್ಮಪರಿಶುದ್ಧಿಯನ್ನು ಮಾಡಿಕೊಳ್ಳುವುದರಲ್ಲಿ ತೊಡಗಿದ್ದೇನೆ. ಇತರರು ಉಪನ್ಯಾಸ ಕೊಡುವುದರಲ್ಲಿ, ಕಾಗದ ಕರಿದು ಮಾಡುವುದರಲ್ಲಿ ತೊಡಗಿದ್ದಾರೆ' ಎಂದು.

ಪುಸಯಲ್ ಹೇಳುತ್ತಾನೆ; 'ನಾನು ದೇವರನ್ನು ಪ್ರೀತಿಸುತ್ತೇನೆ. ಆದ್ದರಿಂದ ಅವನನ್ನು ಪೂಜಿಸುತ್ತೇನೆ. ದೇವರಿಗೆ ಅಂಜುವವನಿಗೆ ಎಲ್ಲರೂ ಅಂಜುತ್ತಾರೆ.

ಯಾಹ್ಯಾನನ ನುಡಿಮುತ್ತು ಹೀಗಿದೆ; 'ತನ್ನ ಪ್ರೇಮಿಯ ಪಕ್ಕದಲ್ಲಿ ಬೇರೊಬ್ಬನನ್ನು ನೋಡುವವನು ಪ್ರೇಮಿಯನ್ನು ಖಂಡಿತ ನೋಡಲಾರ.'

ಮತ್ತೊಬ್ಬ ಸೂಫಿ ಬಾಯ್‌ಸೀದ್ ಹೇಳುತ್ತಾನೆ; 'ಒಬ್ಬ ದೇವರಿಂದ ಮತ್ತೊಬ್ಬ ದೇವರನ್ನು ಅರಸುತ್ತ ಹೋದೆ. ಒಳಗಿನಿಂದ ದನಿ ಬಂತು. ನೀನೆ ನಾನು' ಎಂದು.

ಅಧಮ್‌ನ ಮಾತು ಹೀಗಿದೆ; 'ಒಂದು ಜನಾಂಗವನ್ನು ಆಳುವುದಕ್ಕಿಂತ ತನ್ನನ್ನು ತಾನು ಆಳಿಕೊಳ್ಳುವುದು ಒಳ್ಳೆಯದು'.

ಮಾರುಪ್ ಕರ್ಬಿ ಸೂಫಿಯ ಮಾತು ಹೀಗಿದೆ; 'ಸೂಫಿ ಈ ಪ್ರಪಂಚದ ಅತಿಥಿ. ಅತಿಥಿಗೆ ತಕ್ಕ ನಡತೆ ಇರಬೇಕು. ದೇವರು ಬಡಿಸಿದ್ದನ್ನು ಉಣಬೇಕೇ ಹೊರತು ಕೇಳುವ ಅಧಿಕಾರವಿಲ್ಲ. ಪ್ರೇಮಿ ದೇವರು ಕರುಣಿಸುವ ಅನುಗ್ರಹ. ಮತ್ತೆ ಹೇಳುತ್ತಾನೆ; ಸೂಫಿಧರ್ಮ ಎಂದರೆ ದೇವರಲ್ಲಿ ಮಡಿಯಬೇಕು. ದೇವರಲ್ಲಿ ಬಾಳಬೇಕು. ಸೂಫಿ ಕಾಲಡಿಯ ನೆಲದಂತೆ ಅಥವಾ ಮಳೆಗರೆವ ಮೋಡದಂತೆ ಇರಬೇಕು. ಸೂಫಿಯ ಒಳಗೆ ದೇವರು ಹೊರಗೆ ಮಾತ್ರ ಮನುಷ್ಯ.

ಒಮ್ಮೆ ಒಬ್ಬ ಸೂಫಿ ಸಂತನ ಬಳಿಗೆ ಮೂರು ವಸ್ತುಗಳನ್ನು ಕಳಿಸಿದರು; ಮೇಣದ ಬತ್ತಿ ಸೂಜಿ ಮತ್ತು ಕೂದಲು. ಜೊತೆಯಲ್ಲಿ ಈ ಸಂದೇಶವಿತ್ತು; 'ಮೇಣದ ಬತ್ತಿಯಂತೆ ನೀನು ಉರಿದು ಇತರರಿಗೆ ಬೆಳಕಾಗು ಸೂಜಿ ತಾನುಬೆತ್ತಲೆಯಾಗಿ ಇತರರಿಗೆ ಬಟ್ಟೆ ಹೊಲಿದು ತೊಡಿಸುತ್ತದೆ. ಇದೇ ರೀತಿ ನೀನು ಜನತೆಗೆ ನಿಷ್ಕಾಮ ಸೇವೆ ಮಾಡು. ಆಗ ನೀನು ಕೂದಲಿನಂತೆ ಕೋಮಲ, ಸಹನಾಶೀಲ, ಎತ್ತಲೂ ಮಣಿಯಬಲ್ಲ ಜೀವ ಆಗುತ್ತೀಯ.

ಶೇಖ್ ಸಾದಿ ಸೂಫಿಯ ಮಾತು ತುಂಬಾ ಅರ್ಥಪೂರ್ಣವಾಗಿದೆ; 'ಎಂತಹ ಹರಿತವಾದ ಕತ್ತಿಯಾದರೂ ಮೃದುವಾದ ರೇಷ್ಮೆಯನ್ನು ಕತ್ತರಿಸಲಾರದು. ಆದರೆ

ಒಂದು ಸವಿನುಡಿ, ನಮ್ರತೆಯೆಂಬ ಒಂದು ಕೂದಲಿನ ಎಳೆಯಿಂದ ಒಂದು ಆನೆಯನ್ನು ಕೂಡ ಎಲ್ಲಿಗೆ ಬೇಕೋ ಅಲ್ಲಿಗೆ ಕರೆದೊಯ್ಯಬಹುದು.

ಅವನೇ ಮತ್ತೆ ಹೇಳುತ್ತಾನೆ; 'ನಿನ್ನ ಕಾಲಿನ ಕೆಳಗೆ ತುಳಿಸಿಕೊಳ್ಳುವ ಇರುವೆಗಳ ಸ್ಥಿತಿ ನಿನಗೆ ಅರ್ಥವಾದರೆ ಆನೆಯ ಕಾಲಿನ ತುಳಿತಕ್ಕೆ ಸಿಕ್ಕರೆ ನಿನ್ನ ಅವಸ್ಥೆ ಏನು ಎಂಬುದು ತಿಳಿಯುತ್ತದೆ. ಹೀಗೆ ಪರರ ದುಃಖವನ್ನು ನಮ್ಮ ದುಃಖಕ್ಕೆ ಹೋಲಿಸಿಕೊಂಡರೆ ನಾವು ಅದನ್ನು ಅನುಭವಿಸದೆ ನಮಗೆ ಅದರ ನಿಜ ಸ್ವರೂಪ ತಿಳಿಯುವುದೇ ಇಲ್ಲ.'

ಪ್ರೇಮದ ಅಮರ ಸಂದೇಶವನ್ನು ಒಬ್ಬ ಸೂಫಿ ಹೇಳುತ್ತಾನೆ; 'ಪ್ರೇಮ ಇರದಿದ್ದರೆ ಈ ಜಗತ್ತು ರೂಪುಗೊಳ್ಳುತ್ತಿರಲಿಲ್ಲ. ಪ್ರೇಮವಿಲ್ಲದ ಬಾಳು ಶೂನ್ಯ. ಪ್ರೇಮ ಕೂಡಿಸುತ್ತದೆ. ಪ್ರೇಮ ಸುಡುತ್ತದೆ. ಜಗತ್ತಿನಲ್ಲಿರುವುದೆಲ್ಲ ಪ್ರೇಮದ ಉರಿ, ಬೆಂಕಿ, ಅದರ ಬಿಸಿ, ಗಾಳಿ ಅದರ ಕಸಿವಿಸಿ, ನೀರು ಪ್ರೇಮದ ಹರಿವು. ಬೂದಿ ಅದರ ಬಿಂದು. ಸಾವು ಪ್ರೇಮದ ಮೂರ್ಛೆ. ಬಾಳು ಅದರ ಎಚ್ಚರ. ಇರುಳು ಪ್ರೇಮದ ನಿದ್ದೆ. ಹಗಲು ಅದರ ಜಾಗರ. ಸನ್ಮಾರ್ಗ ಪ್ರೇಮಕ್ಕೆ ಹತ್ತಿರ. ತಪ್ಪು ಅದಕ್ಕೆ ಬಲು ದೂರ. ಸ್ವರ್ಗ ಪ್ರೇಮದ ಹಿಗ್ಗು, ನರಕ ಪ್ರೇಮದ ಬಗ್ಗು.

ಅಶದುಲ್ಲಾ ಕಾದ್ರಿ ಸೂಫಿ ಹೇಳುತ್ತಾನೆ. 'ನಮ್ಮದು ಅಕ್ಷರಗಳಲ್ಲಿ ಬರೆಯಲಾಗದ ವೇದ. ಇದು ಅಂತರಂಗದ ವೇದ'.

ಅವನೇ ಹೇಳುತ್ತಾನೆ; 'ವಧು ತನ್ನ ಮುಖದ ಮೇಲಿನ ಮುಸುಕನ್ನು ತೆಗೆಯುವವರೆಗೂ ಅವಳಿಗೆ ತನ್ನ ಪ್ರಿಯಕರನ ದರ್ಶನ ಆಗುವುದಿಲ್ಲ. ಅಂತೆಯೇ ಲೌಕಿಕ ಜ್ಞಾನ ಬರಿ ಮುಸುಕು. ಅದನ್ನು ಹರಿದಾಗಲೇ ದೇವರ ದರ್ಶನ ಸಿಕ್ಕುವುದು.'

ಮತ್ತೊಬ್ಬ ಸೂಫಿಯ ವಾಣಿ ಹೀಗಿದೆ; 'ನಾನು ಜೆರುಸಲೇಮಿಗೆ ಹೋದೆ. ಅಲ್ಲಿ ದೇವರೇ ಇರಲಿಲ್ಲ. ನಾನು ಮಕ್ಕಾಗೆ ಹೋದೆ. ಅಲ್ಲಿಯೂ ದೇವರು ಕಾಣಲಿಲ್ಲ. ನಾನು ಬನಾರಸಿಗೆ ಹೋದೆ. ಅಲ್ಲೂ ದೇವರಿರಲಿಲ್ಲ. ಅವನು ನನಗೆ ಎಲ್ಲೂ ಸಿಕ್ಕಲಿಲ್ಲ. ಕೊನೆಗೆ ನನ್ನ ಎದೆಯ ಬಾಗಿಲನ್ನು ತೆರೆದೆ. ಅವನು ಒಳಗೇ ಇದ್ದ.'

ಇನ್ನೊಬ್ಬ ಸೂಫಿಯ ವಾಣಿ ಈ ರೀತಿ ಇದೆ; 'ಅನೇಕ ಪಂಥಗಳು, ಮತಗಳು, ತತ್ವಗಳು, ಸಿದ್ಧಾಂತಗಳು ಸತ್ಯವನ್ನು ಕಾಣುವ ಬೇರೆ ಬೇರೆ ಹಾದಿಗಳು ಮಾತ್ರ. ಆದರೆ ನಾವು ನೆನಪಿಡಬೇಕಾದ ಸಂಗತಿ ಎಂದರೆ ಮಾರ್ಗ ಗುರಿಯಲ್ಲ. ಸೋಪಾನಗಳು ಶಿಖರವಲ್ಲ.'

ಒಂದು ಕತೆ ಹೀಗಿದೆ; ಒಂದು ಊರಿನಲ್ಲಿ ಒಬ್ಬ ಶ್ರೀಮಂತನಿದ್ದ. ತನ್ನ ಮಕ್ಕಳು ಅನುಭವಸ್ಥರಾಗಲಿ ಎಂದು ಅವನ ಬಯಕೆ. ಅವರನ್ನು ಚಿಕ್ಕ ವಯಸ್ಸಿನಲ್ಲಿಯೇ ದೂರ ದೂರದ ಊರುಗಳಿಗೆ ಕಳುಹಿಸಿದ. ಅವರೆಲ್ಲ ಆಯಾ ದೇಶ, ಭಾಷೆ, ಪದ್ಧತಿಗಳನ್ನು

ಕಲಿತು ಒಂದು ದಿನ ತಮ್ಮ ತಂದೆಯ ಊರಿಗೆ ಹಿಂತಿರುಗುತ್ತಾರೆ. ಎಲ್ಲರೂ ಮನೆಗೆ ಬಂದಾಗ ಒಬ್ಬರಿಗೊಬ್ಬರ ಗುರುತು ಹತ್ತುವುದಿಲ್ಲ. ಭಾಷೆ ಗೊತ್ತಾಗುವುದಿಲ್ಲ. ರೀತಿ-ನೀತಿ ಅರ್ಥ ವಾಗುವುದಿಲ್ಲ. ಹಜರತ್ ಹೀನಾಯತ್ ಖಾನ್ ಅವರ ಪ್ರಕಾರ ಇದು ಜಗತ್ತು. ಇಂತಹ ಜಗತ್ತಿನಲ್ಲಿ ಸೂಫಿಗಳು ಕಿತ್ತಾಟಕ್ಕೇ ನಿಂತಿರುವ ಮಕ್ಕಳಿಗೆ ನೀವೆಲ್ಲ ಒಬ್ಬನಿಗೆ ಹುಟ್ಟಿದವರು ಎಂದು ನೆನಪು ಮಾಡಿಕೊಡುತ್ತಾರೆ. ಲೋಕದಲ್ಲಿ ಇಷ್ಟೊಂದು ಬಗೆಗಳಿರುವುದು ವೈವಿಧ್ಯಕ್ಕಾಗಿ ಹೊರತು ವೈಷಮ್ಯಕ್ಕಾಗಿ ಅಲ್ಲ.

ಇಂತಹ ಅಮರ ವಾಣಿಯನ್ನು ಸಾರಿ ಹೋಗಿದ್ದಾರೆ ಸೂಫಿಗಳು. ಸೂಫಿಗಳಲ್ಲಿ ಎಲ್ಲ ವೃತ್ತಿಯ ಜನರೂ ಇದ್ದರು. ಸೌದೆ ಮಾರುವ, ಬಟ್ಟೆ ನೇಯುವ, ಅಡಿಗೆ ಮಾಡುವವ, ದನ ಕಾಯುವವ, ವ್ಯಾಪಾರಿ-ಹೀಗೆ ಇವರು ವಿವಿಧ ವೃತ್ತಿಗಳಲ್ಲಿದ್ದರೂ ಇದು 'ಅಲ್ಲಾನ' ಕೆಲಸವೆಂದು ನಿಷ್ಠೆಯಿಂದ ಮಾಡುತ್ತಿದ್ದರು. ತಾವು ಮಾಡುವ ಕೆಲಸ ಎಲ್ಲವೂ 'ಅಲ್ಲಾನ' ಸಂತೋಷಕ್ಕೆ ಎಂದು ಭಾವಿಸಿ ತಮ್ಮ ಕಾಯಕದಲ್ಲಿ ನಿರತರಾಗಿದ್ದರು. ಪ್ರಾಮಾಣಿಕತನ, ಸರಳ ಜೀವನ, ದೈವಭಕ್ತಿ, ಉತ್ತಮ ನಡೆ ನುಡಿಗಳು ಇವು ಅವರ ಬಾಳಿನ ಉಸಿರಾಗಿದ್ದವು. ಮೇಲೆ ಹೇಳಿದ ಹಾಗೆ ಇವರ ವಾಣಿಗಳು ಅನುಭಾವದ ಅಮರವಾಣಿಗಳು. ಇಂತಹವಾಣಿ ಎಲ್ಲ ಕಾಲಕ್ಕೂ ಎಲ್ಲರಿಗೂ ಬೇಕಾಗಿದೆ. ಸೂಫಿ ತತ್ವ ಎಲ್ಲ ಧರ್ಮಗಳ ತಿರುಳಾಗಿರುವಂತೆ ಎಲ್ಲ ಕಲೆಗಳ ಸತ್ವವೂ ಆಗಿದೆ.

ಕೊನೆಯದಾಗಿ ಉಮರ್ ಖಯ್ಯಾಂನ ಮಾತು ಹೀಗಿದೆ; 'ಈ ಹೊತ್ತು ನಿನಗಿಲ್ಲ' ನಾಳೆಯು ನಿನಗಿಲ್ಲ. ಆ ಬಗ್ಗೆ ಯೋಚಿಸುವುದು ಕೊಳಕು ಮನಸ್ಸು ಎಚ್ಚೆತ್ತಿದ್ದರೆ ಹೃದಯ ವ್ಯರ್ಥವಾಗಿಸಬೇಡ ಈ ಕ್ಷಣವನ್ನು, ಬಾಳ ನಿರಂತರತೆಗೆ ಸಾಕ್ಷಿ ಏನು? ಎಂದು. ಸದಾ ಮನುಷ್ಯನ ಹೃದಯ ಎಚ್ಚರವಾಗಿರಬೇಕೆಂದು ತಿಳಿಸುವ ಈ ಮಾತು ಧ್ವನಿಪೂರ್ಣ ಅರ್ಥಪೂರ್ಣ.

ಮಾಸ್ನವಿಯಲ್ಲಿ ರೂಮಿಯ ಮಾತು 'ಪ್ರೇಮ ದರ್ಶನದ ಮೌಲಿಕೆಯನ್ನು ಸಾರುತ್ತದೆ. ಪ್ರೀತಿಯಿಂದ ಕಹಿ ವಸ್ತುಗಳು ಸಿಹಿಯಾಗಿ ತೋರುತ್ತವೆ. ಪ್ರೀತಿಯಿಂದ ತಾಮ್ರದ ಚೂರು ಚಿನ್ನವಾಗಿ ಬದಲಾಗುತ್ತದೆ. ಪ್ರೀತಿಯಿಂದ ಮುಳ್ಳುಗಳು ಜೇನಿನಂತಾಗುತ್ತದೆ. ಪ್ರೀತಿಯಿಂದ ಸತ್ತವರು ಜೀವಂತರಾಗುತ್ತರೆ. ಪ್ರೀತಿಯಿಂದ ರಾಜನೂ ಸೇವಕನಾಗುತ್ತಾನೆ. ಎಂದು ಪ್ರೇಮ ದರ್ಶನ ಮಹತ್ವವನ್ನು ಸಾರಿ ಹೇಳುತ್ತಾನೆ.

ಜಗತ್ತಿಗೆ ಇಂತಹ ಪ್ರೇಮ ದರ್ಶನವನ್ನು ನೀಡಿದ ಸೂಫಿ ಪಂಥ ಕ್ರಿ. ಶ. ೮ರಿಂದ ೧೫ನೆ ಶತಮಾನದವರೆಗೂ ಬೆಳಗಿ ಕ್ರಮೇಣ ಅವನತಿಯತ್ತ ಸಾಗಿತ್ತು. ಇದಕ್ಕೆ ಅನೇಕ ಕಾರಣಗಳನ್ನು ಇತಿಹಾಸಕಾರರು ಹೇಳುತ್ತಾರೆ. ಮುಂದೆ ಬಂದ ಸೂಫಿಗಳ ಅಜ್ಞಾನ, ಅಶ್ರದ್ಧೆ, ಇರಾನಿನ ಸಾಮಾಜಿಕ, ಧಾರ್ಮಿಕ ಅಂದೋಲನ, ಪಾಶ್ಚಾತ್ಯ ಸಂಸ್ಕೃತಿಯ

ಪ್ರಭಾವ, ಮಧ್ಯ ಏಷಿಯಾದಲ್ಲಿ ರಷ್ಯಾದ ಪ್ರಭಾವ, ಮೊಗಲ್ ಸಾಮ್ರಾಜ್ಯದ ಪತನ-ಇವೇ ಕಾರಣಗಳೆಂದು ಅಭಿಪ್ರಾಯ ಪಡುತ್ತಾರೆ.

ಸೂಫಿ ಪಂಥ ತಾಪಸ ಜೀವನದಲ್ಲಿ ಆರಂಭವಾಗಿ ಒಂದು ದಾರ್ಶನಿಕ ತತ್ತ್ವವಾಗಿ ಮುಂದೆ ಅನುಭಾವದ ವಿದ್ಯೆಯಾಗಿ ಪರ್ಯವಸಾನ ಹೊಂದಿ, ಕರ್ಮವ್ರತಿಗಳು ಹೆಚ್ಚಿ ಸೋಮಾರಿತನ ಬೆಳೆದು, ತಿರುಪೆ, ಮೋಸಗಳಿಗೆ ಇಳಿಯಿತು ಎಂದು ವಿದ್ವಾಂಸರ ಅಭಿಮತ.

ಯಾವುದೇ ಧರ್ಮ ಆಚಾರ್ಯನಿಂದ (ಪ್ರವಾದಿ) ಉದಯಿಸಿ, ಅನುಭಾವಿಗಳಿಂದ ಬೆಳೆದು, ಪುರೋಹಿತರ ಕೈಯಲ್ಲಿ ಸಿಕ್ಕು ಅವಸಾನ ಹೊಂದುತ್ತವೆ ಎನ್ನುವ ಉಕ್ತಿ ಇದೆ. ಸಂಗೀತ ಕವಿಯಲ್ಲಿ ಹುಟ್ಟಿ ಗವಾಯಿಯಲ್ಲಿ ಬೆಳೆದು, ಕೊರವನ ಹತ್ತಿದ (ಕೋಲೆ ಬಸವ) ಬಂದು ಸಾಯುವಂತೆ. ಹೀಗೆ ಅಲೋಚಿಸಿದಾಗ ಜ್ಞಾನವಾಗಲಿ, ಅನುಭಾವವಾಗಲಿ, ಅವುಗಳ ಅವಸಾನಕ್ಕೆ ಹೆಚ್ಚು ಕಾರಣಗಳನ್ನು ಹುಡುಕಬೇಕಾಗಿಲ್ಲ.

❖

೧೦. ಕ್ರೈಸ್ತ ಭಕ್ತಿಪಂಥ

ಏಸು ಕ್ರೈಸ್ತಮತದ ಸ್ಥಾಪಕನಾಗಿ, ಸತ್ಯಾಗ್ರಹಿಯಾಗಿ, ಮಹಾತ್ಮನಾಗಿ, ಪ್ರಾಣಾರ್ಪಣೆ ಮಾಡಿದ ಮಹಾನುಭಾವ, ಈತ ಶಕಪುರುಷ. ಜಗತ್ತಿನಾದ್ಯಂತ ಸೂರ್ಯ ಮೂಡಿ ಮುಳುಗುವ ಎಲ್ಲ ದೇಶಗಳಲ್ಲೂ ಈತನ ತತ್ತ್ವ ಪ್ರಚಾರ ವಾಗಿದೆ. ಜಗತ್ತಿನಲ್ಲಿ ಅತ್ಯಂತ ಹೆಚ್ಚು ಅನುಯಾಯಿಗಳನ್ನು ಪಡೆದ ಪಂಥ ಇದು. ಈತ ಮುವತ್ತೂರು ವಯಸ್ಸಿನಲ್ಲಿಯೇ ಹುತಾತ್ಮನಾದ.

ಈತನ ಪಂಥವನ್ನು ಅವಲಂಬಿಸಿದ ಈತನ ತತ್ತ್ವಗಳನ್ನು ನಡೆ ನುಡಿಯಲ್ಲಿ ತಂದ ವ್ಯಕ್ತಿಯನ್ನು ಸಂತನೆಂದು ಕರೆಯುತ್ತಾರೆ. ಆಂಗ್ಲಭಾಷೆಯಲ್ಲಿ 'ಸೇಂಟ್' ಎನ್ನುತ್ತಾರೆ. ಹೊಸ ಒಡಂಬಡಿಕೆಯ ಪ್ರಕಾರ ಕ್ರೈಸ್ತಧರ್ಮವನ್ನು ಅವಲಂಬಿಸಿದವರು ಸಂತರು. ಭಗವಂತನಿಗಾಗಿ, ಏಸುಕ್ರೈಸ್ತನಿಗಾಗಿ, ಕ್ರೈಸ್ತ ಧರ್ಮಕ್ಕಾಗಿ, ಸಮಾಜ ಕಲ್ಯಾಣಕ್ಕಾಗಿ, ಹಿಂಸೆಯನ್ನು, ಸಾವನ್ನು ಎದುರಿಸಿದ ಅನುಭಾವಿಗಳು. ಜಗತ್ತಿನಾದ್ಯಂತ ಇವರ ಸಂಖ್ಯೆ ಅಪಾರವಾಗಿದೆ.

ಕ್ರೈಸ್ತ ಧರ್ಮದ ಮೂಲ ಸಂದೇಶದಲ್ಲಿ ಏಸುವಿನ ತತ್ತ್ವ ಅಡಗಿದೆ. ಅದು ಹೀಗಿದೆ; 'ನಿನ್ನ ಶತ್ರುಗಳನ್ನು ನೀನು ಪ್ರೀತಿಸು; ನಿನ್ನ ಬಲಗನ್ನೆಗೆ ಯಾರಾದರೂ ಹೊಡೆದರೆ ಎಡಗೆನ್ನೆಯನ್ನು ಅವರೆದುರು ಚಾಚು. ನಿನಗೆ ಶಾಪ ಕೊಟ್ಟವರಿಗೆ ಆಶೀರ್ವದಿಸು. ರೋಗಿ, ದುಃಖಿ, ಪೀಡಿತ ಪಂಗು (ಕುಂಟ) ಇಂಥವರ ಸೇವೆ ಮಾಡು. ಅನಾಥರಿಗೆ, ವಿಧವೆಯರಿಗೆ ಸಹಾಯ ಮಾಡು. ನಿನ್ನಲ್ಲಿ ಎರಡು ಅಂಗಿಗಳಿದ್ದರೆ ಬರಿ ಮೈಯವನಿಗೆ ಒಂದನ್ನು ನೀಡು. -ಇದು ಏಸುವಿನ ಸಂದೇಶದ ಸಾರ. ಬೈಬಲ್ ತುಂಬಾ ಈ ಸಂದೇಶ ಕತೆಗಳ ರೂಪದಲ್ಲಿ ಸರಳವಾಗಿ ನಿರೂಪಿತವಾಗಿದೆ. ಪ್ರೇಮ, ಅಹಿಂಸೆ, ಕ್ರೈಸ್ತಮತದ ಅಡಿಗಲ್ಲುಗಳಾದರೆ, ಸೇವೆ, ತ್ಯಾಗ ಅದರ ದೀಪಸ್ತಂಭಗಳು ಎಂದು ಹೇಳುತ್ತಾರೆ.

ಏಸು ಹೇಳುತ್ತಾನೆ; 'ದೇವರ ರಾಜ್ಯ ಅಲ್ಲಿದೆ ಇಲ್ಲಿದೆ ಎಂದು ಯಾರಾದರೂ ಹೇಳಿದರೆ, ನಂಬಬೇಡಿ. ಅದು ಕಣ್ಣಿಗೆ ಕಾಣದು. ಅದು ಎಲ್ಲೆಲ್ಲೂ ಇದೆ. ಎಲ್ಲಿಯೂ ಇಲ್ಲ. ದೇವರ ರಾಜ್ಯ ನಿಮ್ಮೊಳಗೇ ಇದೆ. 'ದೇವರ ರಾಜ್ಯದಲ್ಲಿ ಹಣವಂತರು,

ಅಹಂಕಾರಿಗಳಿಗೆ ಪ್ರವೇಶವು ಇಲ್ಲ. ದೀನದಲಿತರಿಗೆ, ದರಿದ್ರರಿಗೆ ಅಲ್ಲಿ ಪ್ರವೇಶವಿದೆ. ಏಸು ತನ್ನ ಶಿಷ್ಯರಿಗೆ ಈ ರೀತಿ ಉಪದೇಶ ಮಾಡಿದ್ದಾನೆ. 'ನಾನು ಹೊಸದನ್ನು ಹೇಳುತ್ತಿಲ್ಲ. ಎಲ್ಲ ವಿವೇಕಿಗಳು, ಸಾಧು ಸತ್ಪುರುಷರು ಹೇಳಿದ್ದನ್ನು ಹೇಳುತ್ತಿದ್ದೇನೆ. ಅವರು ಏನು ಹೇಳಿದರೋ ಅದನ್ನು ನಡೆಸುವುದು ಹೇಗೆ ಎಂದು ಹೇಳುತ್ತೇನೆ. ದೇವರ ಅಪ್ಪಣೆಯಂತೆ ನಡೆಯುವವರಿಗೆ ದೇವರ ರಾಜ್ಯದಲ್ಲಿ ಪ್ರವೇಶ ಸಿಗುತ್ತದೆ. ಅನೇಕರಿಗೆ ನಿಜವಾದ ಬದುಕೇ ತಿಳಿಯದು. ಅವರ ಮೇಲೆ ನನಗೆ ಕನಿಕರ. ನನಗೆ ತಿಳಿದುದನ್ನು ಅವರಿಗೆ ತೋರಿಸಬೇಕು. ಯಜಮಾನ ತಾನೊಬ್ಬನೇ ತನ್ನ ಹೊಲವನ್ನು ಊಳಲಾರ. ಸುಗ್ಗಿಯಲ್ಲಿ ಕೂಲಿಯಾಳನ್ನು ಕರೆಯಲೇಬೇಕು. ಅದರಂತೆಯೇ ನಿಮ್ಮನ್ನು ಕರೆಯುತ್ತಿದ್ದೇನೆ. ಬೇರೆ ಬೇರೆ ಊರುಗಳಿಗೆ ಹೋಗಿ ಎಲ್ಲೆಲ್ಲೂ ದೇವರ ರಾಜ್ಯದ ಸಂದೇಶವನ್ನು ಬೀರಿರಿ. ಹಾಗೂ ನೀವು ನುಡಿದಂತೆ ನಡೆದು ತೋರಿಸಿ. ತೋಳಗಳ ನಡುವೆ ಕುರಿಗಳನ್ನು ಬಿಡುವಂತೆ ನಿಮ್ಮನ್ನು ಕಳುಹಿಸುತ್ತಿದ್ದೇನೆ. ಹಾವಿನ ಹಾಗೆ ವಿವೇಕಿಗಳಾಗಿ, ಪಾರಿವಾಳಗಳ ಹಾಗೆ ಪರಿಶುದ್ಧರಾಗಿ. ನಿಮ್ಮ ಸಂಗಡ ಏನನ್ನೂ ಒಯ್ಯಬೇಡಿ. ಚೀಲ, ರೊಟ್ಟಿ, ಬಟ್ಟೆ, ದುಡ್ಡು ಯಾವುದೂ ಬೇಡ. ಮೈಮೇಲೆ ಬಟ್ಟೆ, ಕಾಲಿನಲ್ಲಿ ಕೆರ ಇಷ್ಟು ಸಾಕು. ಜನರಲ್ಲಿ ಭೇದ ಮಾಡಬೇಡಿ. ಇಂತಹ ಮನೆಯಲ್ಲಿ ತಂಗೋಣ ಎಂದು ಹುಡುಕಾಡಬೇಡಿ. ಸಿಕ್ಕ ಮನೆಯಲ್ಲಿ ಉಳಿದುಕೊಳ್ಳಿ, ಯಾರ ಮನೆಯೊಳಗೆ ಹೋಗುತ್ತೀರೋ ಮೊಟ್ಟಮೊದಲು ಆ ಮನೆಯವರನ್ನು ಒಪ್ಪಿಸಿ, ಅವರು ಸ್ವಾಗತಿಸಿದರೆ ಹೋಗಿ, ಇಲ್ಲವಾದರೆ ಮುಂದಿನ ಮನೆಗೆ ಹೋಗಿರಿ. ನೀವು ಹೇಳಿದ ಮಾತನ್ನು ಕೇಳಿ ಜನ ನಿಮ್ಮನ್ನು ದ್ವೇಷಿಸುತ್ತಾರೆ. ನಿಮ್ಮ ಮೇಲೆ ಬಿದ್ದು ಇಲ್ಲಿಂದಲ್ಲಿಗೆ ಅಲ್ಲಿಂದಿಲ್ಲಿಗೆ ಓಡಿಸುತ್ತಾರೆ. ಬೆರಗಾಗಬೇಡಿ. ಒಂದು ಊರಿನಿಂದ ಓಡಿಸಿದರೆ ಇನ್ನೊಂದು ಊರಿಗೆ ಹೋಗಿ. ಅಲ್ಲಿಂದಲೂ ಓಡಿಸಿದರೆ ಇನ್ನೊಂದು ಊರಿಗೆ ಹೋಗಿ ಅಲ್ಲಿಂದಲೂ ಓಡಿಸಿದರೆ ಮುಂದಿನ ಊರಿಗೆ ಹೋಗಿ. ತೋಳಗಳು ಕುರಿಗಳನ್ನು ಬೇಟೆಯಾಡುವಂತೆ, ನಿಮ್ಮನ್ನು ಬೇಟೆ ಆಡಿಯಾರು. ನಿಮ್ಮನ್ನು ಹೊಡೆದು ಬಡಿದು ಆಳರಸರ ಎದುರಿಗೆ ತೆಗೆದುಕೊಂಡು ಹೋಗಿ ನಿಲ್ಲಿಸಿಯಾರು. ಅಲ್ಲಿ ಏನು ಹೇಳಬೇಕೆಂದು ಯೋಚಿಸಬೇಡಿ. ನಿಮ್ಮೊಳಗೆ ನಿಮ್ಮ ತಂದೆ ಪರಮಾತ್ಮ ಇದ್ದಾನೆ ಎನ್ನುವುದನ್ನು ನೆನಪಿಡಿ. ಏನು ಹೇಳಬೇಕೋ ಅದನ್ನು ಅವನೇ ಹೇಳುತ್ತಾನೆ.

ಜನರು ನಿಮ್ಮ ದೇಹವನ್ನು ಕೊಲ್ಲಬಹುದು. ಆದರೆ ಆತ್ಮಕ್ಕೆ ಯಾವುದೇ ರೀತಿ ಹಾನಿಯನ್ನು ಮಾಡಲಾರರು. ಆದ್ದರಿಂದ ಜನರಿಗೆ ಅಂಜಬೇಡಿ. ದೈವ ಸಂಕಲ್ಪದ ಅಂಜಿಕೆ ಮಾತ್ರವಿರಲಿ. ದೈವ ಸಂಕಲ್ಪ ಇಲ್ಲದೆ ಒಂದು ಪುಟ್ಟ ಹಕ್ಕಿಯೂ ಕೂಡ ನಾಶ ಆಗದು. ದೇವರಿಂದಲ್ಲದೆ ನಿಮ್ಮ ಕೂದಲು ಒಂದೂ ಕೂಡ ಯಾರಿಂದಲೂ ಅಲುಗಾಡಿಸಲಾಗದು. ಅವನನ್ನು ಆಶ್ರಯಿಸಿದವರಿಗೆ ಎತ್ತಣ ಭಯ?' ಏಸುವಿನ ಈ ಅಮರ ಸಂದೇಶವನ್ನು ಅವನ ಸಮಕಾಲೀನ ಶಿಷ್ಯರು ಮತ್ತು ಅನಂತರ ಆಗಾಗ್ಗೆ

ಬಂದ ಸಂತ ಮಹಾಂತರು ಜನಕಲ್ಯಾಣಕ್ಕಾಗಿ ಅವನ ಉಪದೇಶದಂತೆ ನಡೆದು ಅಮರರಾಗಿದ್ದಾರೆ. ಒಬ್ಬ ಶಿಷ್ಯ ಜನಗಳ ಮಧ್ಯದಲ್ಲಿ ಹೋಗಿ ಧರ್ಮ ಪ್ರಚಾರ ಮಾಡಬೇಕಾದರೆ ಎಷ್ಟು ಸಹನಾಶೀಲನಾಗಿರಬೇಕು? ಎಂತಹ ತ್ಯಾಗಿಯಾಗಿರಬೇಕು? ಎಂಬುದು ಅವನ ಸಂದೇಶದಿಂದ ವ್ಯಕ್ತವಾಗುತ್ತದೆ. ಮತ್ತೆ ಏಸು ಹೇಳುತ್ತಾನೆ. 'ಹೆಚ್ಚು ಬಯಸಬೇಡ. ಸ್ವಲ್ಪದಿಂದಲೇ ತೃಪ್ತನಾಗು. ನಿನ್ನ ಇಚ್ಛೆಯನ್ನು ಪಕ್ಕಕ್ಕೆ ಸರಿಸಿ, ಪರರ ಇಚ್ಛೆಯಂತೆ ನಡೆಯುವುದನ್ನು ಅಭ್ಯಸಿಸು. ಯಾವಾಗಲೂ ಕಿರಿಯನೇ ಆಗಿರು. ನಿನ್ನ ಪ್ರಾರ್ಥನೆ ಹೀಗಿರಲಿ; 'ದೇವರ ಇಚ್ಛೆಯಂತೆ ನನ್ನ ಮೂಲಕ ಪೂರ್ಣ ಆಗಲಿ'. ದುಃಖವನ್ನು ಸ್ವಾಗತಿಸು. ದೇವರನ್ನು ಪಡೆಯಲು ಪ್ರಪಂಚದ ವಸ್ತುಗಳನ್ನು ಸಗಣಿಯಂತೆ ಯಾರು ಕೈಬಿಡಬಲ್ಲರೋ ಅವನೇ ನಿಜವಾದ ಬುದ್ಧಿವಂತ. ಜನ ನನ್ನನ್ನು ತಿಳಿದುಕೊಳ್ಳುವುದಿರಲಿ, ನಾನು ಅವರನ್ನು ತಿಳಿದು ಕೊಳ್ಳಬೇಕು. ಜನ ನನ್ನನ್ನು ಪ್ರೀತಿಸುವುದಿರಲಿ, ಅದಕ್ಕೆ ಮೊದಲು ನಾನೇ ಅವರನ್ನು ಪ್ರೀತಿಸಬೇಕು. ಎಲ್ಲಿ ಅಶಾಂತಿ ಇದೆಯೋ ಅಲ್ಲಿ ನಾನು ಶಾಂತಿಯನ್ನು ತರುವಂತಾಗಲಿ. ಎಲ್ಲಿ ಮತಭೇದ ಇದೆಯೋ ಅಲ್ಲಿ ಒಗ್ಗಟ್ಟು, ಸಾಮರಸ್ಯವನ್ನು ನಾನು ತರುವಂತಾಗಲಿ. ಎಲ್ಲಿ ನಿರಾಸೆ ಇದೆಯೋ ಅಲ್ಲಿ ನಾನು ಆಸೆ ತರುವಂತೆ ಆಗಲಿ. ಎಲ್ಲಿ ಕತ್ತಲಿದೆಯೋ ಅಲ್ಲಿ ನಾನು ಬೆಳಕು ತರುವಂತೆ ಆಗಲಿ ಎಲ್ಲಕ್ಕಿಂತ ಅನರ್ಘ್ಯವಾದುದು ಆತ್ಮ ಜೀವನ. ಅದನ್ನೇ ಜನ ಕಳೆದುಕೊಳ್ಳುತ್ತಾರೆ. ಬದುಕು ಎಂದರೆ ದೇಹದ ಬದುಕೇ ಬದುಕು. ಆತ್ಮದ ಬದುಕು ಅಲ್ಲ ಎಂದು ತಿಳಿಯುವುದಕ್ಕಿಂತ ಹೆಚ್ಚಿನ ತಪ್ಪು ಯಾವುದೂ ಅಲ್ಲ. ಆಧ್ಯಾತ್ಮ ಜೀವನ ನಡೆಸಬೇಕು. ಅದನ್ನು ನಡೆಸದವನು ಅದಕ್ಕೆ ವಿರೋಧಿ ಆಗುತ್ತಾನೆ. ಆತ್ಮವನ್ನು ಅನುಸರಿಸಬೇಕೇ ವಿನಹಃ ದೇಹವನ್ನಲ್ಲ' ಎಂದು ಭಾರತೀಯರ ಆತ್ಮ ತತ್ತ್ವವನ್ನೇ ಏಸು ಪ್ರತಿಪಾದಿಸುತ್ತಾನೆ ಎನಿಸುತ್ತದೆ.

ಏಸುವಿನ ಇಂತಹ ವಿಶ್ವಮಾನ್ಯವಾದ ತತ್ತ್ವವನ್ನು ತಮ್ಮ ಬಾಳಿನ ಅಡಿಗಲ್ಲಾಗಿರಿಸಿಕೊಂಡು ಜಗತ್ತಿನ ಮೂಲೆ ಮೂಲೆಗಳಲ್ಲಿದ್ದ ಮೇಲು-ಕೀಳು ಭಾವನೆ, ಬಡತನ, ಸಿರಿತನ ತಾರತಮ್ಯ, ದುಃಖ, ದಾರಿದ್ರ್ಯ, ಮೂಢನಂಬಿಕೆ, ಅಂಧ ಸಂಪ್ರದಾಯ, ಭೋಗ ಜೀವಿಗಳ ವೈಭವ, ಮತ್ತವರ ಬೆಡಗು ಬಿನ್ನಾಣಗಳನ್ನು ಕಳೆಯಲು ಏಸುವಿನ ನುಡಿಗಳನ್ನು ನಡೆದು ತೋರಿಸುತ್ತಾ ನಿಶೆಯ ಪಂಜುಗಳಾಗಿ ಕತ್ತಲೆಯಲ್ಲಿ ದೀಪ ಸ್ತಂಭಗಳಾಗಿ ಎಲ್ಲ ದೇಶ, ಎಲ್ಲ ಕಾಲಗಳಲ್ಲೂ ಸಮಾಜದ ಒಳತಿಗಾಗಿ ಮನುಕುಲದ ಉದ್ಧಾರಕ್ಕಾಗಿ ಪ್ರಯತ್ನಿಸಿದ ಸಂತರ ಸುದೀರ್ಘ ಶ್ರೇಣಿಯೇ ಇದೆ. ಅವರಲ್ಲಿ ಸಂತ ಫ್ರಾನ್ಸಿಸ್, ಸಂತ ಜಾನ್, ಸಂತ ಪಾಲ್, ಸಂತ ಕ್ಲಿಮೆಂಟ್, ಸಂತ ವೇಸಿಲ್, ಸಂತ ಆಗಸ್ಟಿನ್, ಸಂತ ಥಾಮಸ್, ಸಂತ ಏಕಾರ್ಟ್, ಸಂತ ರೂಯಿಸ್ ಬ್ರೋಕ್, ಸಂತ ಬಾವುಲರ್, ಸಂತ ಸುಸೋ, ಸಂತ ತೆರೇಸಾ, ಸಂತ ಅಂತೋನಿ, ಸಂತ ಇಗ್ನಿಷಿಯಸ್, ಸಂತ ಕ್ಸ್ಯಾವಿಯರ್, ಹೀಗೆ ಸಂತರ ಪಡೆಯೇ

ಇದೆ. ಇವರಲ್ಲಿ ಸ್ತ್ರೀಯರು, ಪುರುಷರೂ ಇದ್ದಾರೆ. ಸನ್ಯಾಸಿಗಳು ಗೃಹಸ್ಥರೂ ಇದ್ದಾರೆ. ದೇಶ, ಭಾಷೆ, ಜಾತಿ, ಮತ, ಸ್ತ್ರೀ, ಪುರುಷ ಎಂಬ ಭೇದಭಾವ ಇಲ್ಲದೆ ಮಾನವ ಕಲ್ಯಾಣ ಏಸುವಿನ ತತ್ತ್ವ ಪ್ರಚಾರ. ಹದಿನಾರನೇ ಶತಮಾನದಲ್ಲಿ ಕ್ರೈಸ್ತ ಅನುಭಾವಿಗಳ ಇತಿಹಾಸ ಉನ್ನತ ಶಿಖರ ಮುಟ್ಟಿತ್ತು. ಎಂಬುದು ವಿದ್ವಾಂಸರ ಅಭಿಪ್ರಾಯ.

ಕ್ರೈಸ್ತ ಸಂತರಲ್ಲಿ ಸಾಮೂಹಿಕ ಚಳುವಳಿಗಿಂತ ವೈಯಕ್ತಿಕ ಸಾಧನೆ ಮುಖ್ಯವಾಗಿದೆ. ಸಂತ ಕ್ಷೇವಿಯರ್ (೧೬ನೇ ಶತಮಾನ) ಈತನೊಬ್ಬ ಏಸು ಭಕ್ತ. ಅನುಭಾವಿ. ಬೈಬಲ್ಲಿನ ಈ ಮಾತನ್ನು ಒಬ್ಬ ವಿಶ್ವವಿದ್ಯಾಲಯದ ಅಧ್ಯಾಪಕರಿಂದ ಕೇಳಿ ತನ್ನ ಜೀವನವನ್ನು ಪರಿವರ್ತನೆ ಮಾಡಿಕೊಂಡ. 'ಗೋಲವನ್ನು ಪಡೆದು ಫಲವೇನು? ಶೀಲವನ್ನು ಕಳೆದುಕೊಂಡು? "What shall it profite a man if he gains the whole World and loose his own Soul?" ಸಂತ ಕ್ಷೇವಿಯರ್ ದೇವರ ಧ್ಯಾನ ಚಿಂತನೆಯಲ್ಲಿ ಕಾಲ ಕಳೆದ. ಹಳ್ಳಿ ಹಳ್ಳಿಗೆ ಸಂಚರಿಸುತ್ತ ಏಸುವಿನ ಸಂದೇಶವನ್ನು ಜನರ ಭಾಷೆಯಲ್ಲಿ ಪ್ರಚಾರ ಮಾಡಿದ. ಆಸ್ಪತ್ರೆಗಳಿಗೆ ಹೋಗಿ ರೋಗಿಗಳಿಗೆ ಸಹಾಯ ಮಾಡಿದ. ರೋಮಿನವರೆಗೆ (ಈತನ ಸ್ಥಳ ಸ್ಪೇನ್) ಪಾದಚಾರಿಯಾಗಿ ಸಂಚಾರ ಮಾಡಿದ. ಈತ ಜನಗಳಿಂದ ತನ್ನ ಸೇವೆಗೆ ಸಂಭಾವನೆ ಪಡೆಯುತ್ತಿರಲಿಲ್ಲ. ಜನಸೇವೆಯೇ ಈತನಿಗೆ ಒಂದು ವ್ರತವಾಗಿತ್ತು. ಹಡಗಿನಲ್ಲಿ ಸಂಚಾರ ಮಾಡುತ್ತಿದ್ದಾಗಲೂ ಯಾತ್ರಿಕರಿಗೆ ಸಹಾಯ ಮಾಡುತ್ತಿದ್ದ. ರೋಗಿಗಳ ವಸ್ತ್ರ ತೊಳೆಯುತ್ತಿದ್ದ ಮತ್ತು ಅವರಿಗೆ ಗುಣವಾಗುವ ಭರವಸೆ ನೀಡುತ್ತಿದ್ದ. ನೊಂದವರಿಗೆ, ಜೈಲು ಖೈದಿಗಳಿಗೆ, ಅಸಹಾಯಕರಿಗೆ, ವಿದ್ಯಾರ್ಥಿಗಳಿಗೆ ಏಸುವಿನ ಸಂದೇಶ ನೀಡುತ್ತಿದ್ದ. ಸಾವಿರಾರು ಜನರಿಗೆ ಅವರ ಭಾಷೆಯಲ್ಲಿ ಬೋಧಿಸುತ್ತಿದ್ದ. ಅನೇಕ ಜನರನ್ನು ಕ್ರೈಸ್ತ ಮತಕ್ಕೆ ತಿರುಗಿಸಿದ. ಇಂತಹ ಸಂತರು ಕ್ರೈಸ್ತರಲ್ಲಿ ಅನೇಕರಿದ್ದಾರೆ. ತಮ್ಮ ಪವಿತ್ರ ಜೀವನ ಸಾಧನೆಯಿಂದ ಸಮಾಜದ ಒಳತಿಗಾಗಿ ತಮ್ಮ ಸುತ್ತಮುತ್ತಲಿನವರ ಬದುಕನ್ನು ಉದ್ಧಾರ ಮಾಡಿದ್ದಾರೆ ಹಾಗೂ ಶುದ್ಧೀಕರಿಸಿದ್ದಾರೆ. ಕ್ರೈಸ್ತ ಸಂತರ ಜೀವನ ಚರಿತ್ರೆಯನ್ನು ಅವಲೋಕಿಸಿದಾಗ ಹಿಂದಿನ ಸಂತರ ಪ್ರೇರಣೆಯಿಂದಲೂ, ಏಸುವಿನ ಸಂದೇಶದ ಪ್ರಭಾವದಿಂದಲೂ, ತಮ್ಮ ಸಮಕಾಲೀನ ವ್ಯಕ್ತಿಗಳ ಸ್ನೇಹ, ಉಪದೇಶ ಮತ್ತು ಜೀವನದ ದುರ್ಘಟನೆ ಗಳಿಂದಲೂ ಕೆಲವರು ಏಸುವಿನ ಭಕ್ತರಾಗಿದ್ದಾರೆ. ಬಡತನ, ರೋಗ ರುಜಿನಗಳಿಗೆ ಹೆದರಿ ಸಂತರಾದವರೂ ಇದ್ದಾರೆ.

ಸಂತ ಅಗಸ್ಟನ್-ಈತನೊಬ್ಬ ಸಂತ. ಯೌವನದಲ್ಲಿ ಸುಖ ಜೀವನವನ್ನು ಅನುಭವಿಸಿದ. ರೋಮ್ ನಗರದಲ್ಲಿ ಭಾಷಣ ಶಾಸ್ತ್ರವನ್ನು ಕಲಿತ. ಮಿಲಾನ್ ನಗರದ ಒಬ್ಬ ಧರ್ಮಾಧಿಕಾರಿಗಳ ಸಹವಾಸ ಸ್ನೇಹದಿಂದ ಆಧ್ಯಾತ್ಮ ಜೀವನಕ್ಕೆ ಬಂದ. ಈತನು 'ಪಾಪ ಸಂಕೀರ್ತನೆ' ಎಂಬ ಗ್ರಂಥ ಬರೆದ. ಅದರಲ್ಲಿ ಹೀಗೆ ಹೇಳುತ್ತಾನೆ:

ಅತಿ ವಿಳಂಬವಾಯಿತು ನಾ ನಿನ್ನೆಡೆ ಬರಲು

ಎನ್ನಂತರಂಗದಲ್ಲಿಇದೆ ಪರಮಾನಂದ

ವಸ್ತುಗಳಲ್ಲೆಲ್ಲಾ ಅರಸಿದೆ ಲೌಕಿಕ ಆನಂದ

'Too late am I come to love thee'

ಈ ಸಂತ ಆಗಸ್ಟಸ್ ಲೌಕಿಕ ಸೌಖ್ಯವನ್ನು ಬಹಳ ಕಾಲ ಅನುಭವಸಿ ತುಂಬ ತಡವಾಗಿ ಆಧ್ಯಾತ್ಮದ ಕಡೆಗೆ ಬಂದ. ಅದಕ್ಕಾಗಿ ಬಹಳ ಪಶ್ಚಾತ್ತಾಪವನ್ನೂ ಪಟ್ಟ. ಇಂತಹ ಸಂತರೂ ಕ್ರೈಸ್ತ ಪಂಥದಲ್ಲಿ ಇದ್ದರು.

ಇನ್ನೊಬ್ಬ ಸಂತ ಅಸಿಸಿಯ ಫ್ರಾನ್ಸಿಸ್ (ಈತನ ಕಾಲ ೧೨ನೇ ಶತಮಾನ). ಇವನು ಶ್ರೀಮಂತ ವರ್ಗಕ್ಕೆ ಸೇರಿದ, ರೇಷ್ಮೆ ವ್ಯಾಪಾರಿಯೊಬ್ಬನ ಮಗ. ಏಸುವಿನ ಸಂದೇಶವನ್ನು ಸಂತರಿಂದ ಕೇಳಿ ತಿಳಿದು ಪ್ರಭಾವಿತನಾಗಿದ್ದ. ಹೀಗಾಗಿ ಈತನಿಗೆ ಶ್ರೀಮಂತ ಜೀವನದಲ್ಲಿ ಉದಾಸೀನತೆ ಇತ್ತು. ಬಡವರನ್ನು, ರೋಗಿಗಳನ್ನು, ವಿಶೇಷವಾಗಿ ಕುಷ್ಠರೋಗಿಗಳನ್ನು ಕಂಡರೆ ಈತನಿಗೆ ಅಪಾರ ಕರುಣೆ, ಅನುಕಂಪ ಇತ್ತು. ಸಂತರ ಉಪದೇಶದಿಂದ ಪ್ರಭಾವಿತನಾಗಿ ಏಸುವಿನ ಪರಮ ಭಕ್ತನೇ ಆದ. ಐಶ್ವರ್ಯವನ್ನು ಧಿಕ್ಕರಿಸಿದ. ವೈರಾಗ್ಯದ ಬದುಕನ್ನು ಅಪ್ಪಿಕೊಂಡ. "ಅವನು ಹೇಳುತ್ತಾನೆ-ಮನುಷ್ಯನಿಗೆ ಶಾಂತಿ, ನೆಮ್ಮದಿ ಸಿರಿವಂತಿಕೆಯಲ್ಲಿ ಇಲ್ಲ. ಬದಲಾಗಿ ಬಡವರೊಂದಿಗೆ ಹಂಚಿಕೊಂಡು ಬಾಳುವುದರಿಂದ ಸಿಗುತ್ತದೆ." ಎಂದು ನಂಬಿ ತನ್ನ ಜೀವಮಾನದುದ್ದಕ್ಕೂ ಬಡವರ, ದೀನ ದಲಿತರ, ರೋಗಿಗಳ ಸೇವೆಯಲ್ಲಿ ಕಾಲ ಕಳೆದ ಸಂತ. ನೊಂದವರನ್ನು ಸಂತೈಸಿದ. ದುಃಖಿಗಳ ಕಣ್ಣೀರನ್ನು ಒರೆಸಿದ. ರೋಗಿಗಳನ್ನು ಉಪಚರಿಸಿದ. ಇಂತಹವರಲ್ಲಿಯೇ ದೇವರನ್ನು ಕಂಡ ಅನುಭಾವಿ ಈತ.

ಮತ್ತೊಬ್ಬ ಆದರ್ಶ ಸಂತ ಮಹಿಳೆ, ಸಂತತೇರಾಸಾ (೧೫ನೇ ಶತಮಾನ). ಈಕೆ ಏಸುವಿನ ಪರಮ ಭಕ್ತಳು. ತಾರುಣ್ಯದಲ್ಲಿ ಕಾಯಿಲೆಗೆ ತುತ್ತಾಗಿ ಸತ್ತು ಬದುಕಿದಳು. ಅನಂತರ ತನ್ನ ಜೀವನವನ್ನು ದೇವರಸೇವೆಯಲ್ಲಿ ಕಳೆಯಲು ನಿರ್ಧರಿಸಿದಳು. ವಿರಾಗಿಣಿಯಾದಳು. ಎಲ್ಲವೂ ದೇವರ ಕೃಪೆ. ಅಹಂಕಾರ ಪಾಪದ ಮೂಲ. ಲೌಕಿಕ ವಸ್ತುಗಳನ್ನು ತ್ಯಜಿಸಿ ಭಗವಂತನಿಗೆ ಶರಣಾಗುವುದೇ ವೈರಾಗ್ಯ. ವಿನಯ ವೈರಾಗ್ಯ ಉಳ್ಳವನು ಮಾತ್ರ ಪರಹಿತ ಬಯಸಲು ಸಾಧ್ಯ. ಇದು ಆಕೆಯ ಸಂದೇಶ. ಮತ್ತೆ ಆಕೆ ಹೇಳುತ್ತಾಳೆ; 'ನಮ್ಮ ಆತ್ಮ ದೇವರ ಉದ್ಯಾನವನ. ಅದನ್ನು ಸುಂದರವಾಗಿ ಇಡುವುದು ನಮ್ಮ ಕರ್ತವ್ಯ. ಇದರಲ್ಲಿರುವ ಕಲ್ಲು ಮುಳ್ಳೆಂಬ ಪಾಪ ಕೃತ್ಯಗಳನ್ನು ತೆಗೆದು ಹಾಕಿ, ಸುಂದರ ಪುಷ್ಪಗಳು ಎಂಬ ಸದ್ಗುಣಗಳನ್ನು ಬೆಳೆಸಬೇಕು. ಇದಕ್ಕೆ ನೀರಿನ ಅವಶ್ಯಕತೆ ಇದೆ. ಮೂರು ರೀತಿಯಲ್ಲಿ ನೀರನ್ನು ಹಾಯಿಸಬಹುದು. ಬಾವಿಯಿಂದ ನೀರು

ಸೇದುವುದು ದೇವರ ಧ್ಯಾನ. ರಾಟೆಯ ಮೂಲಕ ನೀರು ಹಾಯಿಸುವುದು ಅನುಭಾವ, ಅಣೆಕಟ್ಟಿನಿಂದ ನೀರು ಹಾಯಿಸುವುದು ಅನುಭಾವದ ಎರಡನೆಯ ಹಂತ. 'ಹೀಗೆ ಸಾಧನೆಯ ಹಂತಗಳನ್ನು ತಿಳಿಸುತ್ತಾಳೆ. ಅನುಭವಿಯನ್ನು ರೇಷ್ಮೆಯ ಹುಳುವಿಗೂ, ಅನುಭಾವಿಯನ್ನು ಚಿಟ್ಟೆಗೂ ಹೋಲಿಸುತ್ತಾಳೆ.

ಸಂತ ತೆರೇಸಾ ತನ್ನ ಜೀವನದ ಅನುಭವವನ್ನು ಕುರಿತು 'ನನ್ನ ಜೀವನದ ಪರಿಸ್ಥಿತಿ' ಎಂಬ ಪುಸ್ತಕ ಬರೆದಿದ್ದಾಳೆ. ೧೫೮೨ರಲ್ಲಿ ಈಕೆ ನಿಧನಳಾದಳು. ಸಂತರ ಚರಿತ್ರೆಯಲ್ಲಿ ಇಂದಿಗೂ ಈಕೆ ಧ್ರುವತಾರೆ ಯಾಗಿದ್ದಾಳೆ.

ಕ್ರೈಸ್ತ ಧರ್ಮದ ಸಂತರಲ್ಲಿ ಮುಖ್ಯನಾದ ಮತ್ತೊಬ್ಬ ಸಂತ. ಅರುಳ್ವರ್ (ಈತನ ಕಾಲ ೧೫ನೇ ಶತಮಾನ). ಈತ ಜನಿಸಿದ್ದು ಸ್ಪೇನ್‌ನಲ್ಲಿ. ತನ್ನ ಇಡೀ ಜೀವನವನ್ನು ಪ್ರೀತಿ ಮತ್ತು ಸೇವೆಗಾಗಿ ಅರ್ಪಿಸಿದ. ದೈವಭಕ್ತನಾಗಿದ್ದ. ಆಧ್ಯಾತ್ಮ ಸಾಧನೆಯಲ್ಲಿ ಬಹಳ ಎತ್ತರಕ್ಕೆ ಏರಿದ್ದ. ಅವನು ಅನುಭಾವವನ್ನು ನಡುರಾತ್ರಿಯ ಕತ್ತಲಿಗೆ ಹೋಲಿಸುತ್ತಾನೆ. (darkness of Soul). ದೇವರಿಗೆ ನಾಮರೂಪಗಳಿಲ್ಲ. ಅವನನ್ನು ನೋಡಲು ಸಾಧ್ಯವಿಲ್ಲವಾದುದರಿಂದ ಅನುಭಾವವನ್ನು ನಡುರಾತ್ರಿಯ ಕತ್ತಲಿಗೆ ಹೋಲಿಸುವುದು ಸೂಕ್ತವೆನಿಸುತ್ತದೆ. 'ಜಾತಿ ಭೇದ, ಭಾಷಾಭೇದ, ಬಡವ ಬಲ್ಲಿದ ಭೇದ, ಪಂಡಿತ ಪಾಮರರಲ್ಲಿ ಭೇದ ಮಾಡುವವನಿಗೆ ಅನುಭವದ ಪ್ರಜ್ಞೆ ಬರುವುದಿಲ್ಲ. ನಾವೆಲ್ಲ ದೇವರ ಮಕ್ಕಳು. ಸಹೋದರ ಭಾವದಿಂದ ಜೀವಿಸುವುದೇ ನಮ್ಮೆಲ್ಲರ ಕರ್ತವ್ಯ ಹಾಗೂ ಧರ್ಮ. ಎಂಬುದು ಈತನ ಜೀವನ ಸಂದೇಶವಾಗಿದೆ.

ಹೀಗೆ ಕ್ರೈಸ್ತ ಸಂತರು ಜಗತ್ತಿನ ನಾನಾ ಭಾಗಗಳಲ್ಲಿ ಏಸುವಿನ ಅನುಯಾಯಿಗಳಾಗಿ ಅವನ ಸಂದೇಶವನ್ನು ಪ್ರಚಾರ ಮಾಡುತ್ತಾ ಹಾಗೂ ತಮ್ಮ ನಡೆ ನುಡಿಯಲ್ಲಿ ಆಚರಿಸುತ್ತಾ ಮಾನವ ಕಲ್ಯಾಣವನ್ನು ಮಾಡಿಹೋಗಿದ್ದರೆ. ಸಮಾಜದ ಭಾವೈಕ್ಯತೆಗೆ ಕಾರಣ ರಾಗಿದ್ದಾರೆ. ತಪ್ಪು ಮಾರ್ಗದಲ್ಲಿ ಹೋದವರನ್ನು ಎಚ್ಚರಿಸಿದ್ದಾರೆ. ಬಿದ್ದವರನ್ನು ಬೀಳುವವರನ್ನು ಉದ್ಧರಿಸಿದ್ದಾರೆ. ಕತ್ತಲೆಯಲ್ಲಿದ್ದ ಜನಕ್ಕೆ ಬಾಳ ದೀಪವಾಗಿ ದಾರಿ ತೋರಿಸಿದ್ದಾರೆ.

❖

ಉಪಸಂಹಾರ

ಜಗತ್ತಿನ ಭಕ್ತಿಪಂಥಗಳ ಚಳುವಳಿಗಳನ್ನು ಅವಲೋಕಿಸಿದಾಗ ಅನೇಕ ಅಂಶಗಳಲ್ಲಿ ಸಮಾನತೆ ಎದ್ದು ಕಾಣುತ್ತದೆ. ಜಗತ್ತಿನ ಸಂತ ಮಹಾಂತರೆಲ್ಲ ಪವಿತ್ರ ಜೀವನವನ್ನು ನಡೆಸಿ ಅವರವರ ಇತಿ ಮಿತಿಯಲ್ಲಿ ಸನ್ನಿವೇಶ, ಸಂದರ್ಭದಲ್ಲಿ ಲೋಕೋಪಕಾರ ಮಾಡಿರುವುದು ವಾಸ್ತವಿಕ ಸತ್ಯವಾಗಿದೆ. ಭಕ್ತಿ ಚಳುವಳಿಗಳು ದೇವರನ್ನು ದೇವಾಲಯ ದೇವಾಲಯದಿಂದ ಮನುಷ್ಯನ ಹತ್ತಿರಕ್ಕೆ ತಂದವು. ಎಲ್ಲಾ ಭಕ್ತಿ ಚಳುವಳಿಗಳು ವರ್ಣವ್ಯವಸ್ಥೆಯನ್ನು ಖಂಡಿಸಿದವು ಮತ್ತು ಸಮಾಜದಲ್ಲಿ ಮೇಲ್ಜಾತಿಯವರ ಹಿರಿಮೆಯನ್ನು ನಿರಾಕರಿಸಿದವು. ಎಲ್ಲಾ ಭಕ್ತಿ ಚಳುವಳಿಗಳ ಉದ್ದೇಶ ಕೆಳವರ್ಗದವರನ್ನು ಉದ್ಧರಿಸುವುದೇ ಆಗಿತ್ತು. ಮತ್ತು ಶ್ರೀ ಸಾಮಾನ್ಯನನ್ನು ಹತ್ತಿರಕ್ಕೆ ಕರೆದುಕೊಂಡವು. ಅಷ್ಟೇ ಅಲ್ಲ. ಜನಸಾಮಾನ್ಯರ ಹತ್ತಿರ ತಾವೇ ಹೋದವು. ಸಾಮಾನ್ಯರ ಆಡುಭಾಷೆಗೆ ಮಹತ್ವದ ಸ್ಥಾನಮಾನವನ್ನು ನೀಡಿದವು. ದೇಶೀ ಭಾಷೆಯನ್ನು ಬೆಳೆಸಿದವು. ಸಂಸ್ಕೃತ ವನ್ನು ನಿರಾಕರಿಸಿದವು. ಭಕ್ತಿ ಸಾಹಿತ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಆಧುನಿಕರಾದ ನಾವು ಸಮಾಜದ ಪ್ರಗತಿಯ ಬಗ್ಗೆ ಚಿಂತಿಸುವ ಚಿಂತನೆಗಳನ್ನೆಲ್ಲಾ ಅಲ್ಲಿಯೇ ಗುರುತಿಸಬಹುದಾಗಿದೆ. ಸಿರಿವಂತಿಕೆಯ ಬದುಕನ್ನು ಭೋಗ ಜೀವನವನ್ನು ಎಲ್ಲ ಭಕ್ತಿಪಂಥಗಳು ಖಂಡಿಸಿವೆ. ವ್ಯಕ್ತಿಯ ಸರಳತೆ ಪ್ರಾಮಾಣಿಕತೆಗೆ ಮನ್ನಣೆ ನೀಡಿವೆ. ಎಲ್ಲ ಭಕ್ತಿಪಂಥಗಳು ಸರಿಸಮಾನತೆ, ವಿಚಾರ ಸ್ವಾತಂತ್ರ್ಯ, ಸಹೋದರ ಭಾವನೆಗಳನ್ನು ಎತ್ತಿಹಿಡಿದಿವೆ. ಮಾನವೀಯ ಗುಣ ಮೌಲ್ಯಗಳನ್ನು ಪ್ರತಿಪಾದಿಸಿವೆ. ಮನುಷ್ಯರ ಸಮಾನತೆಯನ್ನು ಒತ್ತಿ ದೃಢವಾಗಿ ಹೇಳಿವೆ. ಭಕ್ತಿ ಚಳುವಳಿಗಳು ಗೃಹಸ್ಥ ಜೀವನವನ್ನು ಪುರಸ್ಕರಿಸಿವೆ. ಹೆಣ್ಣಿಗೆ ಗೌರವ ಸ್ಥಾನವನ್ನು ನೀಡಿವೆ. ಒಬ್ಬ ಮನುಷ್ಯ ಒಳ್ಳೆಯವನಾಗಲು ಒಳ್ಳೆಯ ಕುಲದಲ್ಲಿ ಹುಟ್ಟಬೇಕಾಗಿಲ್ಲ. ವೇದ, ಶಾಸ್ತ್ರ, ಪಾಂಡಿತ್ಯಗಳ ಅಗತ್ಯವಿಲ್ಲ. ದೈವಭಕ್ತನಾಗಿ, ಪ್ರಾಮಾಣಿಕತೆ ಯಿಂದ, ಒಳ್ಳೆಯ ನಡೆ ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಸಾಕು. ವಿಪ್ರ ಮೊದಲು ಅಂತ್ಯಜರು ಒಂದೇ ಎಂದು ಇವು ಸಾರಿದವು. ಜಾತಿಪದ್ಧತಿ, ರಾಜನ ಪ್ರಭುತ್ವವನ್ನು ನಿರಾಕಸಿದವು. ಸ್ತ್ರೀ ಪುರುಷ ಸಮಾನತೆಯನ್ನು ಸಾರಿದವು. ಏಕದೇವೋಪಾಸನೆಗೆ ಒತ್ತು ಕೊಟ್ಟವು. ಕಾಯಕಕ್ಕೆ ಮಹತ್ವ ನೀಡಿದವು. ಎಲ್ಲ ಭಕ್ತಿ ಚಳುವಳಿಗಳ ದನಿಯು ತುಳಿತಕ್ಕೆ ಒಳಗಾದವರ

ದನಿಯೇ ಆಗಿದೆ. ಸರ್ವರ ವೇದಿಕೆಯೂ ಆಗಿದೆ. ಯಾರು ಬೇಕಾದರೂ ಭಕ್ತರಾಗ ಬಹುದೆಂದು, ಯಾರು ಬೇಕಾದರೂ ದೀಕ್ಷೆ ಪಡೆಯಬಹುದೆಂದು ಹೇಳಿದರು. ಹಾಗೂ ಮೇಲುವರ್ಗದವರ ಅಧಿಕಾರಕ್ಕೆ ಕೊಡಲಿ ಪೆಟ್ಟು ನೀಡಿದರು.

ಈ ಚಳುವಳಿಗಳಲ್ಲಿ ಗುರುವಿನಿಂದ ದೀಕ್ಷೆ ಪಡೆದ ಚಾಂಡಾಲ ತಾನು ಗುರುವಾಗಿ ಬ್ರಾಹ್ಮಣನಿಗೆ ದೀಕ್ಷೆ ಕೊಡುವ ಅವಕಾಶ ಸಾಧ್ಯವಾಯಿತು. ಸಾಧನೆಯಿಂದ ಸಿದ್ಧಿ ಪಡೆದ ಶೂದ್ರ ಭಕ್ತ ಬ್ರಾಹ್ಮಣನಿಗೆ ಸಮಾನವೆಂದು ಪರಿಗಣಿಸಲ್ಪಟ್ಟಿತು. ಅನಕ್ಷರಸ್ಥರನ್ನು ರಕ್ಷಿಸಿದ್ದು ಇದರ ವೈಶಿಷ್ಟ್ಯ. ಇದು ಪ್ರಾದೇಶಿಕ ಭಾಷೆಗಳಿಗೆ ಸಂದ ದೊಡ್ಡ ಉಡುಗೊರೆ. ಈ ಚಳುವಳಿಗಳು ಜನವಾಣಿಯನ್ನೇ ದೇವವಾಣಿಯನ್ನಾಗಿ ಮಾಡಿದವು. ಭಾಷೆಯು ಭಕ್ತಿಪಂಥದಲ್ಲಿ ಪ್ರತಿಭಟನೆಯ ಸಾಧನವಾಯ್ತು. ಭಕ್ತಿ ಮೂಲತಃ ಶೂದ್ರರ ಮತ್ತು ಸ್ತ್ರೀಯರದಾಗಿತ್ತು. ಈ ಭಕ್ತಿ ಪಂಥಗಳು ಬ್ರಾಹ್ಮಣರ ವಿರುದ್ಧದ ಅಥವಾ ಸಮಾಜದ ಮೇಲ್ವರ್ಗದವರ ವಿರೋಧವಾಗಿ ನಿಂತವು. ವಿಪ್ರ ಹಾಗೂ ಅಂತ್ಯಜರನ್ನು ಸಮಾನವಾಗಿ ಬೆಸೆಯುವ ಸಂಸ್ಕೃತಿ ದೀಕ್ಷಾ ಸಂಸ್ಕೃತಿ. ಅದು ಈ ಚಳುವಳಿಗಳ ವೈಶಿಷ್ಟ್ಯ. ಸಂಸ್ಕೃತಿ -ಸಂಸ್ಕೃತಿಗಳ ನಡುವೆ ಸಫಲತೆ ಮತ್ತು ವಿಫಲತೆಯ ಹೋರಾಟದಲ್ಲಿ ಈ ಚಳುವಳಿಗಳು ಹಿರಿಯ ಪಾತ್ರವನ್ನು ವಹಿಸಿದವು.ಈ ಚಳುವಳಿಗಳು ಸಾಮಾನ್ಯರಿಗೆ ಸಾಮಾಜಿಕ ಅಸಮಾನತೆಯನ್ನು ಮೇಲ್ವರ್ಗದವರ ಪ್ರತಿಷ್ಠೆಯನ್ನು ಪ್ರಶ್ನಿಸುವ ನಾಲಗೆಯನ್ನು ಕೊಟ್ಟಿತು.

ಭಕ್ತಿ ಚಳುವಳಿಗಳ ಪರಿಣಾಮವಾಗಿ ಭಕ್ತಿ ಪಂಥದ ಸಾಹಿತ್ಯ ಸೃಷ್ಟಿಯಾಯಿತು. ಅದು ಪಂಡಿತರ ಸಾಹಿತ್ಯವಲ್ಲ. ಪಂಡಿತರನ್ನು ಬೆರಗುಗೊಳಿಸುವ ಸಾಹಿತ್ಯ. ಈ ಭಕ್ತಿಯ ಪಂಥದ ಸಾಹಿತ್ಯದಲ್ಲಿ ದೃಷ್ಟಾಂತ, ರೂಪಕ, ಉಪಮೇಯಗಳು ತುಂಬಿ ತುಳುಕುತ್ತಿವೆ. ಬಹುಪಾಲು ಭಕ್ತರು ಅಕ್ಷರ ಜ್ಞಾನಕ್ಕೆ ವಂಚಿತರಾಗಿದ್ದೂ ಸಾಹಿತ್ಯ ರಚನೆ ಮಾಡಿದವರಿದ್ದಾರೆ. ಇದು ಜಂಗಮ ಸಾಹಿತ್ಯ. ಕುಳಿತು ಬರೆದ ಸಾಹಿತ್ಯವಲ್ಲ. ಲೋಕ ಸಂಚಾರ ಮಾಡುತ್ತ ಹೇಳಿದ ಸಾಹಿತ್ಯ. ಇದು ಮುಕ್ತಕ ಸಾಹಿತ್ಯ, ಬಳಸಿದ ಭಾಷೆ ಆಡು ಭಾಷೆ. ಜನಸಾಮಾನ್ಯರ ಭಾಷೆ. ಜನಭಾಷೆಯನ್ನೇ ಅನುಭವದ ಭಾಷೆಯಾಗಿಸಿ ಸಮಾಜದ ಓರೆ ಕೋರೆ, ಅಂಕು ಡೊಂಕುಗಳನ್ನು ತಿದ್ದಲು ಅಸ್ತ್ರವನ್ನಾಗಿ ಉಪಯೋಗಿಸಿದರು.

ಭಕ್ತಿಪಂಥದ ಚಳುವಳಿಗಾರರಲ್ಲಿ ಕೆಲವರು ದೇವಾಲಯುಗಳನ್ನು ನಿರಾಕರಿಸಿದವರಿದ್ದಾರೆ. ಮೂರ್ತಿ ಪೂಜೆಗಳನ್ನು ಅಲ್ಲಗಳೆದವರೂ ಇದ್ದಾರೆ. ಪುರೋಹಿತರ ಮತ್ತು ಅರ್ಚಕರ ಮಧ್ಯಸ್ಥಿಕೆಯನ್ನು ಖಂಡಿಸಿದ್ದಾರೆ. ದೇಹವನ್ನೇ ದೇವಾಲಯವೆಂದು ಸಾರಿದವರಿದ್ದಾರೆ. ಒಟ್ಟಾಗಿ ಈ ಎಲ್ಲ ಚಳುವಳಿಯು ಮಾನವ ಮಾನವರಲ್ಲಿ ಪ್ರೀತಿ, ಸಮಾನತೆಗಾಗಿ ಕಾಳಜಿ ವಹಿಸಿವೆ ಎನ್ನುವುದರಲ್ಲಿ ಎರಡು

ಮಾತಿಲ್ಲ. ಈ ಭಕ್ತಿ ಪಂಥಗಳಲ್ಲಿ ಅನ್ಯಮತ ಖಂಡನೆ, ಸ್ವಮತ ಪ್ರತಿಷ್ಠಾಪನೆ ಇರುವುದು ಕಂಡುಬರುತ್ತದೆ. ಬ್ರಾಹ್ಮಣೇತರರು ವರ್ಣ ವರ್ಗ ವ್ಯವಸ್ಥೆಯನ್ನು ವಿರೋಧಿಸಿದರೆ ಬ್ರಾಹ್ಮಣರು ಅಥವಾ ಮೇಲ್ವರ್ಗದವರು ಅದನ್ನು ಸಮರ್ಥಿಸುತ್ತ ಬಂದರು. ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ ಎನ್ನುವ ಮಾತು (ಶರಣರ) ಎಲ್ಲ ಭಕ್ತಿ ಪಂಥಗಳಲ್ಲೂ ಅಡ್ಡದಾರಿ ಹಿಡಿದವರ ಸಂಖ್ಯೆ ಹೆಚ್ಚು ಎನ್ನುವುದನ್ನು ತೋರುತ್ತದೆ. ಡಾಂಭಿಕರು, ಅನಾಚಾರಿಗಳು, ವ್ರತಭಂಗಿಗಳ ಸಂಖ್ಯೆ ಅಧಿಕವಿತ್ತೆಂದು ತೋರುತ್ತದೆ. ಹಾಗೆ ಇರಲೂಬಹುದು.

ದಕ್ಷಿಣ ಭಾರತದ ಧಾರ್ಮಿಕ ಚರಿತ್ರೆಯಲ್ಲಿ ಶೈವಪಂಥದ ನಾಯನಾರರು, ವಿಷ್ಣು ಪಂಥದ ಆಳ್ವಾರರು, ಭಕ್ತಿ ಚಳುವಳಿಯ ಮೂಲಕ ಜನರಲ್ಲಿ ದೈವಭಕ್ತಿಯನ್ನು ಮೂಡಿಸಲು ಕಾರಣರಾದರು. ಅದು ಸರಿ, ಆದರೆ ಮುಂದೆ ಶೈವ- ವೈಷ್ಣವ ಪಂಥಗಳಲ್ಲಿ ಕಚ್ಚಾಟ ಆರಂಭವಾಗಿ ತಮಿಳುನಾಡಿನಲ್ಲಿ ರಾಮಾನುಜರು ಶೈವರ ಬದ್ಧ ದ್ವೇಷಕ್ಕೆ ಕಾರಣರಾಗಿ ಕರ್ನಾಟಕದಲ್ಲಿ ಆಶ್ರಯವನ್ನು ಪಡೆದದ್ದು ಐತಿಹಾಸಿಕ ಸಂಗತಿ. ಏಕದೇವೋಪಾಸನೆಯನ್ನು ಸಾರಿದ ಈ ಭಕ್ತಿಪಂಥಗಳು ಬಹುದೇವತಾ ಉಪಾಸನೆಯ ಉಪಸಂಸ್ಕೃತಿಗೆ ಹಾನಿಯನ್ನು ಉಂಟು ಮಾಡಿತು ಎಂದು ಹೇಳಬೇಕಾಗುತ್ತದೆ.

ಈ ಭಕ್ತಿ ಚಳುವಳಿಗಳು ಜನಕಲ್ಯಾಣಕ್ಕಾಗಿ ಹೋರಾಡಿದ್ದು ಮಹತ್ವದ ವಿಷಯ. ಆದರೆ ಕೆಲವು ಲೋಪ ದೋಷಗಳಿಂದ ಸಮಾಜದಲ್ಲಿ ಅಹಿತಕರ ಘಟನೆಗಳಿಗೆ ಕಾರಣಗಳಾಗಿ ಸಮಾಜದ ಅಶಾಂತಿಗೆ ಕಾರಣವಾದ ಉದಾಹರಣೆಗಳೂ ಇವೆ.

ಭಕ್ತರು ತಮ್ಮ ಭಾವಾವೇಶವನ್ನು ತಪ್ಪುಹಾದಿಗೆ ತಿರುಗಿಸಿದಾಗ ಅವರು ಮತಾಂಧರು ಆಗುತ್ತಾರೆ. ಅಸಹಿಷ್ಣುತೆ, ಮತಾಂಧತೆ, ಮೌಢ್ಯಗಳ ಗದ್ದಲ ತುಂಬಿದ ಈ ಜಗತ್ತಿನಲ್ಲಿ ಇವರು ಮತ್ತಷ್ಟು ವಾತಾವರಣವನ್ನು ಕೆಡಿಸಿದ್ದಕ್ಕೆ ಇತಿಹಾಸದಲ್ಲಿ ಸಾಕ್ಷಿಗಳಿವೆ. ಭಾರತದಲ್ಲಿ ಶೈವ ಹಾಗೂ ವೈಷ್ಣವರ ಕಲಹ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಮಹಮ್ಮದೀಯ ಹಾಗೂ ಕ್ರೈಸ್ತ ಪಂಥಗಳ ಘರ್ಷಣೆಯಲ್ಲಿ ಅನೇಕ ಅನಾಹುತಗಳು ಸಂಭವಿಸಿವೆ. ವ್ಯಕ್ತಿ ತಾನು ನಂಬುವ ವಸ್ತುವಿನಲ್ಲಿ ಏಕನಿಷ್ಠೆ ಬೇಕು, ನಿಜ. ಆದರೆ ಅನೇಕ ವೇಳೆ ಆ ನಿಷ್ಠೆಯು ಉಳಿದ ವಸ್ತುಗಳನ್ನು ಹಳಿಯುವುದಕ್ಕೂ ಕಾರಣ ಆಗುತ್ತದೆ. ಮತ ದ್ವೇಷಕ್ಕೆ ಮೂಲವೂ ಆಗುತ್ತದೆ. ಭಕ್ತಿಪಂಥಗಳಿಂದ ಇಂತಹ ದುರಂತಗಳೂ ಆಗಿವೆ. ಎಂಬುದಕ್ಕೆ ಇತಿಹಾಸದಲ್ಲಿ ನಿದರ್ಶನಗಳು ದೊರೆಯುತ್ತವೆ. ಭಕ್ತಿಪಂಥದ ನಿಷ್ಠೆ, ನೇಮಗಳು-'ತನ್ನ ಒಡೆಯನ ಸೊತ್ತನ್ನು ಮತ್ತೊಬ್ಬರು ಮುಟ್ಟದಂತೆ ಕಾಯುವ ನಾಯಿಯ ಸ್ವಭಾವ ಹೋಲುತ್ತದೆ' -ಎಂದು ಸ್ವಾಮಿ ವಿವೇಕನಂದರು ಒಂದು ಕಡೆ ಹೇಳುತ್ತಾರೆ. ಹೇಳುವ ಮಾತು ಕಟುವಾದರೂ ಸತ್ಯವನ್ನೇ ಹೇಳಿದ್ದಾರೆನಿಸುತ್ತದೆ.

❖

ಗ್ರಂಥಋಣ (ಸಹಾಯಕ ಸಾಹಿತ್ಯ)

೧. ಯುಗಯಾತ್ರೀ
ಭಾರತೀಯ ಸಂಸ್ಕೃತಿ (ಸಂ-೪) — ಸಂ: ಹರಿದಾಸಭಟ್ಟಾಚಾರ್ಯ
ಪ್ರ: ಪ್ರಸಾರಂಗ
ಮೈಸೂರು ವಿಶ್ವವಿದ್ಯಾಲಯ
ಮೈಸೂರು.

೨. ದಾಸ ಸಾಹಿತ್ಯ — ಸಂ: ಪ್ರೊ: ಜಿ. ವೆಂಕಟಸುಬ್ಬಯ್ಯ
ಪ್ರ: ಐ. ಬಿ. ಎಚ್. ಪ್ರಕಾಶನ
ಬೆಂಗಳೂರು

೩. ವಚನ ಸಾಹಿತ್ಯ — ಲೇ. ಎಂ. ಚಿದಾನಂದ ಮೂರ್ತಿ
ಪ್ರ: ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

೪. ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ — ಸಂ: ಜಿ. ಎಸ್. ಶಿವರುದ್ರಪ್ಪ
ಪ್ರ: ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

೫.ವಚನ ಚಳುವಳಿ — ಲೇ. ಡಾ. ಪಿ. ವಿ. ನಾರಾಯಣ
ಪ್ರ: ಶ್ರೀ ಸರ್ಪಭೂಷಣ ಮಠ
ಬೆಂಗಳೂರು

೬. ಸೂಫಿ ಮತ್ತು ಶರಣರ ಅನುಭಾವ ಪಥ — ಲೇ. ಷಣ್ಮುಖಯ್ಯ ಅಕ್ಕೂರಮಠ
ಪ್ರ: ಶ್ರೀ ಜಗದ್ಗುರು ಗಂಗಾಧರ ಧರ್ಮ
ಪ್ರಚಾರಕ ಮಂಡಲ
ಮೂರು ಸಾವಿರ ಮಠ
ಹುಬ್ಬಳ್ಳಿ

೭. ಸೂಫಿ ಪ್ರೇಮ ದರ್ಶನ — ಲೇ. ಮ. ಸು. ಕೃಷ್ಣಮೂರ್ತಿ
ಪ್ರ: ಶ್ರೀ ಮಂಜುನಾಥೇಶ್ವರ ಪ್ರಕಾಶನ ಮಾಲೆ, ಉಜಿರೆ

೮. ಇಸ್ಲಾಂ ಸಂಸ್ಕೃತಿ — ಅನು:ಬಿ. ಎಂ.ಶ್ರೀಕಂಠಯ್ಯ
ಪ್ರ: ಮೈಸೂರು ವಿಶ್ವವಿದ್ಯಾಲಯ ಮೈಸೂರು

೯. ಮರಾಠೀ ಸಂಸ್ಕೃತಿ — ಲೇ. ಶಂ. ಬಾ. ಜೋಶಿ
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

೧೦. ಭಕ್ತಿಪಂಥದಲ್ಲಿ ಸಮಾಜ ಕಾರ್ಯದ ಬೇರುಗಳು — ಸಂ: ಎಚ್. ಎಂ. ಮರುಳಸಿದ್ಧಯ್ಯ
ಪ್ರ: ಶ್ರೀ ಸರ್ಪಭೂಷಣ ಮಠ ಬೆಂಗಳೂರು

೧೧. ಮಹಾರಾಷ್ಟ್ರದ ಸಂತರು — ಅನು: ಎನ್. ಕೃಷ್ಣಸ್ವಾಮಿ
ಪ್ರ: ಭಾರತೀಯ ವಿದ್ಯಾಭವನ ಬೆಂಗಳೂರು

೧೨. ಸಾಮಾಜಿಕ ಚಳುವಳಿಗಳು — ಲೇ. ಡಾ: ಆರ್ಕೆ ಮಣಿಪಾಲ
ಪ್ರ: ನವಕರ್ನಾಟಕ ಪ್ರಕಾಶನ ಬೆಂಗಳೂರು

೧೩. ಸಾಹಿತ್ಯ ವಿಮರ್ಶೆ ೧೯೮೮ — ಸಂ: ರಾಜೇಂದ್ರ ಚೆನ್ನಿ
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

೧೪. ಪುರಂದರದಾಸರು — ಲೇ. ಜಿ. ವರದರಾಜರಾವ್
ಪ್ರ: ಸಾಹಿತ್ಯ ಅಕಾಡೆಮಿ, ನವದೆಹಲಿ

೧೫. ನಾಮದೇವ — ಅನು: ಶ್ರೀ ಜಯತೀರ್ಥ ರಾಜಪುರೋಹಿತ
ಪ್ರ: ಸಾಹಿತ್ಯ ಅಕಾಡೆಮಿ ನವದೆಹಲಿ

೧೬. ತುಕಾರಾಮ — ಅನು: ಕೃಷ್ಣ ಕೊಲ್ಹಾರ ಕುಲಕರ್ಣಿ
ಪ್ರ: ಸಾಹಿತ್ಯ ಅಕಾಡೆಮಿ
ನವದೆಹಲಿ

೧೭. ತುಕಾರಾಂ — ಲೇ. ಶ್ರೀಧರ ಪಿಸ್ಸೆ
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

೧೮. ಗೋರುಖನಾಥ — ಲೇ. ಲಿಂಗರಾಜು
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

೧೯. ಶಂಕರದೇವ — ಲೇ. ವಸಂತ ಕಲಬಾಗಲೆ
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

೨೦. ಜಲಾಲುದ್ದೀನ್ ರೂಮೀ — ಲೇ. ಅಬ್ದುಲ್ ಮಜೀದ್ ಖಾನ್
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

೨೧. ಗುರುನಾನಕ್ — ಲೇ. ಕೃಷ್ಣಮೂರ್ತಿ ಬಿಳಿಗೆರೆ
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

೨೨. ನಂದನಾರ್ — ಲೇ. ಗಂಗಾಧರ ಮೊದಲಿಯಾರ್
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

೨೩. ಭೀಮಬೋಯಿ — ಲೇ. ಬಿ. ಚಿನ್ನಸ್ವಾಮಿ
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

೨೪. ಕಬೀರದಾಸ್ — ಲೇ. ಡಾ. ಕಾಶೀನಾಥ ಅಂಬಲಗೆ
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು

೧೫. ಉತ್ತರೀ ಭಾರತ್ ಕಿ ಸಂತಪರಂಪಾರಾಲೇ. ಪರಶುರಾಂ ಚತುರ್ವೇದಿ
ಪ್ರ: ಭಾರತೀ ಭಂಡಾರ, ಪ್ರಯಾಗ

೧೬. ಭೀಮಾ ಬೋಯಿ (ಹಿಂದಿ) ಲೇ. ಸೀತಾಕಾಂತ ಮಹಾಪಾತ್ರ
ಪ್ರ: ಕರ್ನಾಟಕ ಸಾಹಿತ್ಯ ಅಕಾಡೆಮಿ
ನವದೆಹಲಿ

೧೭. ಮರಾಠೀ ಭಕ್ತಿ ಸಾಹಿತ್ಯ ಲೇ. ಪ್ರೊ: ದೇಶಪಾಂಡೆ
ಪ್ರ: ಚೌಖಾಂಖಾ ವಿದ್ಯಾಭವನ
ವಾರಾಣಸಿ

೧೮. ಭಕ್ತಿ ಸಾಹಿತ್ಯ ಲೇ. ಡಾ. ಹರವಂಶಲಾಲ್ ಶರ್ಮ
ಪ್ರ: ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

೧೯. ಭಕ್ತಿಕಾ ಸಂದರ್ಭ (ಹಿಂದಿ) ಲೇ. ದೇವೀಶಂಕರ ಅವಸ್ಥಿ
ಪ್ರ: ವಾಣಿ ಪ್ರಕಾಶನ, ನವದೆಹಲಿ

೨೦. ಸಿದ್ಧ ಸಾಹಿತ್ಯ (ಹಿಂದಿ) ಲೇ. ಡಾ. ಧರ್ಮವೀರ ಭಾರತಿ
ಪ್ರ: ಕಿತಾಬ್ ಮಹಲ್
ಅಲಹಾಬಾದ್

೨೧. ಭಾರತೀಯ ಭಕ್ತಿ ಸಾಹಿತ್ಯ (ಹಿಂದಿ) ಲೇ. ರಾಜಮಲ್ ಬೌರಾ
ಪ್ರ: ವಾಣಿ ಪ್ರಕಾಶನ, ನವದೆಹಲಿ

೨೨. ಮಾನವ ಸಮಾಜ (ಹಿಂದಿ) ಲೇ. ರಾಹುಲ ಸಾಂಕೃತ್ಯಾಯನ
ಪ್ರ: ಲೋಕಭಾರತಿ ಪ್ರಕಾಶನ
ಅಲಹಾಬಾದ್

೨೩. ಭಕ್ತಿ ಆಂದೋಲನ್ ಕಾ ಇತಿಹಾಸ್ ಔರ್
-ಸಂಸ್ಕೃತಿ (ಹಿಂದಿ) ಲೇ. ಕುಮಾರ ಪಾಲಸಿಂಹ
ಪ್ರ: ವಾಣಿ ಪ್ರಕಾಶನ, ನವದೆಹಲಿ

೨೪. ಭಾರತೀಯ ಸಂತ ಏವಂ ಧರ್ಮಾಚಾರ್ಯ ಲೇ. ಬನರಾಸೀ ಪ್ರಸಾದ ಭೋಜಪುರಿ
-(ಹಿಂದಿ) ಪ್ರ: ಭಾರತೀಯ ವಿದ್ಯಾ ಪ್ರಕಾಶನ
ವಾರಾಣಾಸಿ